ಹಿತ್ತಲಗಿಡ

ಚಾತುರ್ಮಾಸಿಕ

ಪೈರು 5, ಕೊಯಿಲು 1, ಜನವರಿ - ಏಪ್ರಿಲ್, 1999

'ಹಿತ್ತಲಗಿಡ' ರೈತ, ವಿಜ್ಞಾನಿ,
ವಿದ್ಯಾರ್ಥಿ, ಸ್ವಯಂ ಸೇವಾ ಸಂಸ್ಥೆ
ಮತ್ತು ವ್ಯಕ್ತಿಗಳ
ಸಾಮೂಹಿಕ ಪ್ರಯತ್ನ

ಬಿಡಿ ಪತ್ರಿಕೆ : ರೂ 20/-



*ಜನರಿಗೆ ಪ್ರತಿಫಲ ನೀಡುವಂತಹ ತಂತ್ರಜ್ಞಾನ, ಸಂಸ್ಥೆ ಮತ್ತು
ಮೌಲ್ಯಗಳನ್ನು ಹುಟ್ಟುಹಾಕುವ ಪ್ರಯತ್ನ*

ದೇಶೀಯ ಜ್ಞಾನ ಮತ್ತು ಸಂಸ್ಥೆಗಳು, ರೈತ ಮೂಲದ ಅನುಶೋಧನೆ, ಸ್ಥಳೀಯ ಸಂಪನ್ಮೂಲ, ಜೀವ ವಿವಿಧತೆ ಮತ್ತು ರೈತ ಶಕ್ತಿ ಇವುಗಳ ಮೂಲಕ "ಸುಸ್ಥಿರ ಕೃಷಿ" ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ.

ಕಲೆ : ಸೋಮುವರದ

ಸಂಪಾದಕ ಮಂಡಳಿ

ಗೌರವ ಸಂಪಾದಕ :

ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ

ಸಹ ಪ್ರಾಧ್ಯಾಪಕ, ಕೃಷಿ, ಅರ್ಥಶಾಸ್ತ್ರ ವಿಭಾಗ, ಕೃಷಿ ವಿ.ವಿ. ನಿಲಯ,
ಜಿ.ಕೆ.ವಿ.ಕೆ., ಬೆಂಗಳೂರು – 560 065

ಉಪ ಸಂಪಾದಕರು :

ತೇಜಸ್ವಿನಿ ಶರ್ಮ, ಬಿ.ಎ. ಅನಿಲ್ ಕೌಶಿಕ್ ಮತ್ತು ಕೃಷ್ಣ ಪ್ರಸಾದ್ ಜಿ.

ಪ್ರಕಟಣಾ ಸಹಾಯಕರು :

ಕೆ.ಕೆ. ಆನಂದ್, ನಾಗರತ್ನ ಬಿ.ಕೆ., ಸುರೇಖ ಎಂ. ಮತ್ತು ಹರಿಪ್ರಿಯ ಜಿ.ಜಿ.

ರೈತ ಸಂಪರ್ಕ ಮತ್ತು ಸಂವಹನ :

ಮಲ್ಲಿಕಾರ್ಜುನ

ಸ್ಥಳೀಯ ಸಹಯೋಗ :

GREEN FOUNDATION ಬೆಂಗಳೂರು.

ಹಿತ್ತಲಗಿಡ ಪೋಷಕರು :

ಪ್ರೊ. ಅನಿಲ್ ಕೆ. ಗುಪ್ತ ಸೃಷ್ಟಿ (SRISTI - Society for Research and Initiatives for Sustainable Technologies and Institutions)

ಐ.ಐ.ಎಂ. ಅಹಮದಾಬಾದ್

ಮುಖಪುಟದ ಚಿತ್ರ ಕಥೆ

ಚಿಟ್ಟೇಪುರಕ ಹಕ್ಕಿಯ ಬುದ್ಧಿವಂತಿಕೆ

ಚಿಟ್ಟೇಪುರಕ ಹಕ್ಕಿಯೊಂದು ತುಂಬಿದ ಬಸುರಿಯಾಗಿತ್ತು. ಆದರೆ ಅದು ಇನ್ನೂ ಮನೆಕಟ್ಟಿರಲಿಲ್ಲ. ಒಂದು ದಿನ ಮನುಷ್ಯನೊಬ್ಬ, ಬೆಲ್ಲದ ಅಚ್ಚು ಎತ್ತಿಕೊಂಡು ದಾರಿಯಲ್ಲಿ ಬರುತ್ತಿದ್ದ. ಹಕ್ಕಿ ಅವನನ್ನು ಅಡ್ಡಹಾಕಿ "ನನಗೊಂದಿಷ್ಟು ಬೆಲ್ಲ ಕೊಡು ದಾರಿ ಬಿಡುತ್ತೇನೆ" ಎಂದಿತು. ಬಸುರಿ ಹಕ್ಕಿಯನ್ನು ಕಂಡು ಅವನು ಬೆಲ್ಲ ಕೊಟ್ಟ. ಹಕ್ಕಿ ಅದನ್ನು ತೆಗೆದುಕೊಂಡು ಹೋಗಿ ಮನೆಯ ಗೋಡೆ ಕಟ್ಟಿತು.

ಮಾರನೆಯದಿನ ಒಬ್ಬ ಕಬ್ಬಿನ ಜಲ್ಲೆ ಹೊತ್ತು ಆ ದಾರಿಯಲ್ಲಿ ಬಂದ. ಅವನನ್ನು ಅಡ್ಡಹಾಕಿದ ಹಕ್ಕಿ "ನನಗೊಂದೆರೆಡು ಕಬ್ಬಿನ ಜಲ್ಲೆ ಕೊಟ್ಟರೆ ದಾರಿ ಬಿಡುತ್ತೇನೆ" ಎಂದಿತು. ಅವನು ಕಬ್ಬಿನ ಜಲ್ಲೆಗಳನ್ನು ಕೊಟ್ಟು, ಹಕ್ಕಿ ಅದನ್ನು ತೆಗೆದುಕೊಂಡು ಹೋಗಿ ಮನೆಯ ಮಾಡು ಕಟ್ಟಿತು. ಮತ್ತೊಂದು ದಿನ ಹೆಂಗಸೊಬ್ಬಳು ಮಲ್ಲಿಗೆ ಹೂವಿನ ಬುಟ್ಟಿ ಹೊತ್ತು ಬರುತ್ತಿದ್ದಳು. ಹಕ್ಕಿ ಅವಳ ದಾರಿಗೆ ಅಡ್ಡಬಂದು "ನನಗೊಂದು ಮೊಳ ಮಲ್ಲಿಗೆ ಹೂ ಕೊಟ್ಟರೆ ದಾರಿ ಬಿಡುತ್ತೇನೆ" ಎಂದಿತು. ಹಕ್ಕಿಯ ಸ್ಥಿತಿಗೆ ಕನಿಕರಗೊಂಡ ಹೆಂಗಸು ಹೂ ಕೊಟ್ಟಳು. ಹಕ್ಕಿ ಹೂ ತೆಗೆದುಕೊಂಡು ಹೋಗಿ ಹಾಸಿಗೆ ಮಾಡಿ, ಮೂರು ಮೊಟ್ಟೆಗಳನ್ನಿಟ್ಟು, ಕಾವು ಕೊಟ್ಟು ಮರಿಮಾಡಿತು ; ಎರಡು ಗಂಡು ಮತ್ತು ಒಂದು ಹೆಣ್ಣು. ಅವಕ್ಕೆ ಬೆಲ್ಲದ ಭೀಮಣ್ಣ, ಕಬ್ಬಿನ ಕಾಮಣ್ಣ ಮತ್ತು ಮಲ್ಲಿಗೆ ಮಾದೇವಿ ಎಂದು ಹೆಸರಿಟ್ಟಿತು.

ಒಂದು ದಿನ ಚಿಟ್ಟೇಪುರಕ ಹಕ್ಕಿ ಸಂತೆಗೆ ಹೊರಟಿತು. ಮೂವರು ಮಕ್ಕಳನ್ನು ಹತ್ತಿರ ಕರೆದು, "ನಾನು ಸಂತೆಗೆ ಹೋಗುತ್ತೇನೆ. ನಾನು ಬಂದು ಬೆಲ್ಲದ ಭೀಮಣ್ಣ, ಕಬ್ಬಿನ ಕಾಮಣ್ಣ, ಮಲ್ಲಿಗೆ ಮಾದೇವಿ ಬಾಗಿಲು ತೆಗೆಯಿರಿ ಎಂದು ಕರೆಯುತ್ತೇನೆ. ಆಗ ಬಾಗಿಲು ತೆಗೆಯಿರಿ. ಬೇರೆ ಯಾರೇ ಬಂದು ಕೂಗಿದರೂ ಬಾಗಿಲು ತೆಗೆಯ ಬೇಡಿ" ಎಂದು ಹೇಳಿ ಹೊರಟು ಹೋಯಿತು.

ಅಲ್ಲಿಯೇ ಅಡ್ಡಾಡುತ್ತಿದ್ದ ನರಿಯೊಂದು ಇದನ್ನು ಕೇಳಿಸಿಕೊಂಡಿತು. ಸ್ವಲ್ಪ ಹೊತ್ತು ಬಿಟ್ಟು ಹಕ್ಕಿಯ ಗೂಡಿಗೆ ಬಂದು ಬೆಲ್ಲದ ಭೀಮಣ್ಣ, ಕಬ್ಬಿನ ಕಾಮಣ್ಣ, ಮಲ್ಲಿಗೆ ಮಾದೇವಿ, ಬಾಗಿಲು ತೆಗೆಯಿರಿ" ಎಂದಿತು. ಹಕ್ಕಿ ಮರಿಗಳು, ತಮ್ಮ ಅಮ್ಮ ಬಂದಿದ್ದಾಳೆ ಎಂದು ತಿಳಿದು ಬಾಗಿಲು ತೆಗೆದವು. ತಕ್ಷಣ ನರಿ ಮೊದಲು ಬಂದ ಮಲ್ಲಿಗೆ ಮಾದೇವಿಯನ್ನು ನುಂಗಿ ಓಡಿ ಹೋಯಿತು. ಸಂತೆಯಿಂದ ವಾಪಸ್ಸು ಬಂದ ಚಿಟ್ಟೇಪುರಕ ಹಕ್ಕಿ ಆಲೋಚನೆ ಮಾಡಿ, ಕಾಡಿನ ಎಲ್ಲ ನರಿಗಳನ್ನು ಊಟಕ್ಕೆ ಆಹ್ವಾನಿಸಿತು. ಕಾಡಿನ ನರಿಗಳ ಜೊತೆಗೆ ಮರಿ ನುಂಗಿದ್ದ ಕಳ್ಳ ನರಿಯೂ ಬಂದು, ಊಟದ ಪಂಕ್ತಿಯಲ್ಲಿ ಕುಳಿತಿತ್ತು. ಹಕ್ಕಿ, ಬೆಲ್ಲದ ಭೀಮಣ್ಣನನ್ನು ತನ್ನ ಜೊತೆ ಕರೆದುಕೊಂಡು, ನರಿಗಳಿಗೆಲ್ಲಾ ಪಾಯಸ ಬಡಿಸುತ್ತಾ ಪಂಕ್ತಿ ಉದ್ದಕ್ಕೂ ಬಂದಿತು. ಕಳ್ಳನರಿ ಹತ್ತಿರ ಬಂದಾಗ ಬೆಲ್ಲದ ಭೀಮಣ್ಣ, ನರಿಯನ್ನು ತೋರಿಸಿ "ಇವನೇ ತಂಗೆಮ್ಮನನ್ನು ನುಂಗಿದ್ದು" ಎಂದನು. ಆಗ ಚಿಟ್ಟೇಪುರಕ ಹಕ್ಕಿ ನರಿಯ ಬಾಯಿ ತೆಗೆಸಿ, ಬಾಯಿ ತುಂಬ ಬಿಸಿ ಬಿಸಿ ಪಾಯಸ ಹುಯ್ದುಬಿಟ್ಟಿತು. ತಕ್ಷಣ ನರಿ ಕುಣಿದಾಡುತ್ತಾ, ಹೊಟ್ಟೆಯಲ್ಲಿದ್ದದ್ದನ್ನೆಲ್ಲಾ ಕಕ್ಕಿಕೊಂಡಿತು. ಹಕ್ಕಿಯ ಮಗಳೂ ಜೊತೆಗೆ ಹೊರಬಂತು. ಚಿಟ್ಟೇಪುರಕ ಹಕ್ಕಿ ಅದನ್ನು ಎತ್ತಿಕೊಂಡು ಸೀಗೆಕಾಯಿಯಲ್ಲಿ ತೊಳೆದು ಮನೆಗೆ ಕರೆದು ತಂದು, ಉಳಿದ ಮರಿಗಳ ಜೊತೆಗೆ ಸುಖವಾಗಿ ಸಾಕಿತು.

– ಅಕ್ಕಮ್ಮ, ೯ನೇ ತರಗತಿ, ಸರ್ಕಾರಿ ಪ್ರೌಢಶಾಲೆ, ಮರಳವಾಡಿ.
ಹೊನ್ನೇರು ಸ್ಪರ್ಧೆಯಲ್ಲಿ ಬಹುಮಾನ ಪಡೆದ ಕಥೆ.

(ಈ ಕಥೆಯ ಸಾರವೇನು – ಬರೆದು ತಿಳಿಸಿ. ಉತ್ತಮ ಉತ್ತರಗಳಿಗೆ ಬಹುಮಾನವಿದೆ. ಸಂ.)

ಕರ್ನಾಟಕ ರಾಜ್ಯದ ಜನತಾ ಪ್ರತಿನಿಧಿಗಳಿಗೊಂದು ಪತ್ರ

ಮಾನ್ಯರೆ,

ವಿಚಾರ : ರಾಜ್ಯದ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೊಂದು ಪರ್ಯಾಯ ಮಾದರಿ.

'ಹಿತ್ತಲಗಿಡ' ವೆಂಬ ಈ ಚಾತುರ್ಮಾಸಿಕ ಪತ್ರಿಕೆಯು ದೇಶೀಯ ಜ್ಞಾನ ವ್ಯವಸ್ಥೆ, ಜೀವವಿವಿಧತೆ, ರೈತ ಅನುಶೋಧನೆಗಳು ಇವೇ ಮೊದಲಾದ ಜನರದ್ದೆ ಆದ ಜ್ಞಾನ, ಸಂಪನ್ಮೂಲ, ಪರಿಣಿತಿ ಮತ್ತು ಶೋಧನೆಗಳನ್ನು ಹುಡುಕಿ ದಾಖಲಿಸಿ, ಪಸರಿಸಿ, ಆಮೂಲಕ ನಮ್ಮ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಪರ್ಯಾಯವೊಂದನ್ನು ಹುಡುಕುವ ಚಿಕ್ಕ ಪ್ರಯತ್ನವಾಗಿದೆ.

ನಮ್ಮ ರಾಜ್ಯ ಮತ್ತು ದೇಶಗಳೆರಡೂ ಮತ್ತೊಂದು ಚುನಾವಣೆಗೆ ಈಗ ಸಜ್ಜಾಗುತ್ತಲ್ಲಿದ್ದು, ತಾವೂಕೂಡ ಈ ಬಗ್ಗೆ ತಯಾರಿ ನಡೆಸುತ್ತಿರಬಹುದು. ಈ ನಿಟ್ಟಿನಲ್ಲಿ ಹಿತ್ತಲಗಿಡ ಎತ್ತಿರುವ ವಿವಿಧ ವಿಚಾರಗಳು ತಮಗೆ ಉಪಯುಕ್ತವಾಗಬಹುದೆಂದು ಈ ಪತ್ರವನ್ನು ಪ್ರಕಟಿಸುತ್ತಿರುವೆವು. ತಾವು ದಯಮಾಡಿ ಈ ನಿಟ್ಟಿನಲ್ಲಿ ಚಿಂತಿಸಿ, ಕಾರ್ಯೋನ್ಮುಖರಾಗಬೇಕಾಗಿ ವಿನಂತಿ.

1. ಜನರ ಜ್ಞಾನ ಮತ್ತು ಸಂಪನ್ಮೂಲಗಳು :

ದೇಶ ಸ್ವಾತಂತ್ರ್ಯ ಪಡೆದು ಅರ್ಧಶತಮಾನ ಕಳೆದರೂ ಬಡತನ ಅಜ್ಞಾನ, ನಿರುದ್ಯೋಗ, ಅಸಮಾನತೆ, ಅನಾರೋಗ್ಯ ಇತ್ಯಾದಿ ಅನಿಷ್ಟಗಳ ನಿವಾರಿಸುವಲ್ಲಿ ನಮ್ಮ ಸಾಧನೆ ಏಕೆ ಅಷ್ಟೇನೂ ತೃಪ್ತಿಕರವಾಗಿಲ್ಲವೆಂದು ನಾವು ಇಂದು ಗಂಭೀರವಾಗಿ ಚಿಂತಿಸಬೇಕಾಗಿದೆ. ಪ್ರಗತಿಯ ಪರಿಕಲ್ಪನೆಯನ್ನು ಕಾರ್ಯರೂಪಕ್ಕೆ ತರುವಾಗ ನಮ್ಮ ಒಂದು ದೊಡ್ಡ 'ಊಹೆ' (hypotheses) ಎಂದರೆ "ನಮ್ಮ ಜನರಿಗೆ ಏನೂ ಗೊತ್ತಿಲ್ಲ ಮತ್ತು ಅವರ ಹತ್ತಿರ ಏನೂ ಇಲ್ಲ. ಹಾಗಾಗಿ ಹಣ, ಜ್ಞಾನ, ತಾಂತ್ರಿಕತೆ, ಸಂಪನ್ಮೂಲಗಳೆಲ್ಲವನ್ನೂ ಅವರಿಗೆ ಹೊರಗಿನಿಂದ ನೀಡಿ ಅವರನ್ನು ಅಭಿವೃದ್ಧಿ ಚಕ್ರದಡಿ ತಳ್ಳಿ ಮೇಲೆತ್ತಬೇಕಾಗಿದೆ ಎಂಬುದು". ಇದು ಅಸಾಧ್ಯದ ವಿಚಾರ ಮಾತ್ರವಲ್ಲ ಅಪಕ್ವವಾದ ಊಹೆ ಕೂಡ ಎಂಬುದು ಹಿತ್ತಲಗಿಡದ ದೃಢ ಅಭಿಪ್ರಾಯ.

ತಮಗೆ ತಿಳಿದಿರುವ ಹಾಗೆ ಇಂದೂ ಕೂಡ ಗ್ರಾಮೀಣ ಭಾರತದ ಬಹುಪಾಲು ಮಂದಿ ತಮಗೆ 'ತಿಳಿದಿರುವ' ರೀತಿಯಲ್ಲಿ, ತಮ್ಮದೇ ಆದ ಜ್ಞಾನ ಮತ್ತು ತಂತ್ರಜ್ಞಾನಗಳನ್ನು ಬಳಸಿ ಉತ್ಪಾದಿಸಿ, ಬದುಕಿ,ವ್ಯವಹರಿಸುತ್ತಿರುವರು. ಕೃಷಿ, ಪಶು ಪಾಲನೆ, ಕರಕುಶಲತೆ, ಗ್ರಾಮೀಣ ಕಸುಬುಗಳಿಂದ ಹಿಡಿದು ಅಡುಗೆ, ಉಡುಗೆ, ಆರೋಗ್ಯ ಪಾಲನೆಗಳವರೆಗಿನ 'ಜ್ಞಾನ' ಇವರಿಗೆ ಯಾರೂ 'ಹೊರಗಿನಿಂದ' ತಂದು ಹೇಳಿಕೊಟ್ಟಿದ್ದಲ್ಲ. ತಮ್ಮ ಹಿರಿಯರಿಂದ ಕಲಿತು, ತಲೆತಲಾಂತರದಿಂದ ಹರಿದು ಬಂದಿರುವಂತಹದ್ದು. ಆ ಹೊರಗಿನ ಜ್ಞಾನ, ತಂತ್ರಜ್ಞಾನ ಒಟ್ಟಾರೆ ಪರಕೀಯವಾದ ಆ ಅಭಿವೃದ್ಧಿ ಕ್ರಿಯೆಯನ್ನು ಇವರ ಮೇಲೆ ಹೇರಲು ಎಷ್ಟೇ ಪ್ರಯತ್ನ ನಡೆಸಿದರೂ, ನಮ್ಮ ಗ್ರಾಮೀಣ ಜನರ ಕಡುಬಡತನದಿಂದ ಈ ಕ್ರಿಯೆ ಅಷ್ಟೇನೂ ಫಲಕಾರಿಯಾಗಿಲ್ಲ. ಇದು ಒಂದರ್ಥದಲ್ಲಿ ಸ್ವಲ್ಪನೆಮ್ಮದಿಯ ವಿಚಾರವೇ. ಆದರೆ ಅವರ ಬಡತನ ಅಸಹನೀಯವಾಗಿ, ಪರಿಸ್ಥಿತಿ ವಿಕೋಪಕ್ಕೆ ತಿರುಗಿದಾಗ, ಬದುಕುಳಿಯುವ ಅನಿವಾರ್ಯತೆಯಿಂದ ಪರಿಸ್ಥಿತಿಯನ್ನು ಎದುರಿಸಲು ಹೊಸ ಹೊಸ ತಳಿ, ಬೆಳೆ, ತಂತ್ರ, ರೀತಿ, ರಿವಾಜುಗಳನ್ನು ಸೃಷ್ಟಿಸಿಕೊಳ್ಳುತ್ತಾ ಕೃಷಿ, ಪಶುಪಾಲನೆ, ಇತ್ಯಾದಿ ವೃತ್ತಿಗಳನ್ನು ಮುಂದುವರೆಸಿಕೊಂಡು ಬಂದಿರುವರು. ಇವೆಲ್ಲವುಗಳ ಪರಿಣಾಮ ಎಂದರೆ ನಮ್ಮ ಗ್ರಾಮೀಣ ಪ್ರದೇಶದಲ್ಲಿ ಜನರದ್ದೇ ಆದ ಈ ದೇಶೀಯ ಜ್ಞಾನ, ತಂತ್ರಜ್ಞಾನ, ಶೋಧನೆಗಳ ಚಿಲುಮೆಗಳು ಏಳುವಂತಾಗಿ ಅವು ಬತ್ತದೆ ಇನ್ನೂ ಹರಿಯುತ್ತಿರುವುದು ನಮ್ಮ ಅದೃಷ್ಟವೇ ಸರಿ. ಅಂದಮೇಲೆ, ಇವುಗಳ ಆಧಾರಿತ ಹೊಸತೊಂದು ಅಭಿವೃದ್ಧಿ ಮಾದರಿಯನ್ನು ಇಂದು ನಾವೇಕೆ ಚಿಂತಿಸಬಾರದು ?

ಇನ್ನು ಸಂಪನ್ಮೂಲಗಳ ದೃಷ್ಟಿಯಿಂದಲೂ ನಮ್ಮ ಗ್ರಾಮೀಣ ಜನತೆ ನಾವು ತಿಳಿದಿರುವಷ್ಟು ಬಡವರಲ್ಲ. ತಮ್ಮ ಜ್ಞಾನ ಮತ್ತು ತಂತ್ರಜ್ಞಾನಗಳಿಗೆ ಹೊಂದಿಕೆಯಾಗುವಂತಹ ಸಂಪನ್ಮೂಲಗಳು; ಬೀಜ, ತಳಿ, ಸಸ್ಯ, ವನಸ್ಪತಿ, ಹಣ್ಣು, ಹಂಪಲು, ಪ್ರಾಣಿಗಳು ಮತ್ತು ಇತರ ನೈಸರ್ಗಿಕ ಸಂಪನ್ಮೂಲಗಳು ಅವರ ಬಳಿ ಹೇರಳವಾಗಿದೆ. ಇವುಗಳನ್ನು ಬಳಸಿ, ಉತ್ಪಾದಿಸಿ, ಬದುಕುಳಿಯುವ ಕಲೆಯನ್ನು ನಮ್ಮ ಬಡಜನರು ಯಾವತ್ತೋ ಕರಗತಮಾಡಿಕೊಂಡಿರುವರು. ಇದೇ ಅವರ ಅಸ್ತಿತ್ವದ ಗುಟ್ಟು. ಈ ಜನರ ಸಂಪನ್ಮೂಲಗಳನ್ನು ಉಳಿಸಿ, ಬೆಳಸಿ ಅದರ ಬಳಕೆಯ ಅಧಿಕಾರವನ್ನು ಜನರಿಗೆ ನೀಡಿದ್ದೇ ಆದಲ್ಲಿ ಇಂದು ಅಭಿವೃದ್ಧಿಯ ಹೆಸರಿನಲ್ಲಿ ನಡೆಯುತ್ತಿರುವ ಆ ಆಪಾರ ವೆಚ್ಚವನ್ನು ಹಗುರಗೊಳಿಸಿ, ಅದನ್ನು ಬೇರೆ ಉಪಯುಕ್ತ ವಿಚಾರಗಳತ್ತ ತಿರುಗಿಸಬಹುದಲ್ಲವೆ?

2. ಸ್ಥಳೀಯ ಪರಿಣಿತರು :

ಗ್ರಾಮೀಣ ಬಡಜನರ ಜ್ಞಾನ ಮತ್ತು ಸಂಪನ್ಮೂಲಗಳಿಗೆ ಪೂರಕವಾಗಿ ಅವರ ಬದುಕನ್ನು ಹಸನು ಮಾಡುವಲ್ಲಿ ನಾಟೀ ವೈದ್ಯರು, ಪಶು ಚಿಕಿತ್ಸಕರು, ಕರಕುಶಲಕರ್ಮಿಗಳು, ಬುಡಕಟ್ಟು ಪರಿಣಿತರು, ಸೂಲಗಿತ್ತಿಯರು, ಹೀಗೆ ನಿಸ್ವಾರ್ಥ, ಸಂಪೂರ್ಣ ಸೇವಾ ಮನೋಭಾವನೆಯ ಸ್ಥಳೀಯ ಪರಿಣಿತರ ಪಡೆಯೇ ಗ್ರಾಮ ಗ್ರಾಮಗಳಲ್ಲೂ ಇದೆ. ಉದಾಹರಣೆಗೆ ಬೀದರ್ ಜಿಲ್ಲೆಯ ಬಸವ ಕಲ್ಯಾಣ ತಾಲ್ಲೂಕಿನ ಗೊರಟ ಹಳ್ಳಿಯ ಅಂಬಾಜಿ ತೇಲಂಗ ಎಂಬ ಬಡ ಕೃಷಿ ಕಾರ್ಮಿಕನ ನಾಟೀ ಪಶುವೈದ್ಯ ಪರಿಣಿತಿ ಮೇಲೆ ಸುತ್ತಲಿನ ಹತ್ತಾರು ಹಳ್ಳಿಗಳೇ ನಿಂತಿವೆ. ಇದೇ ರೀತಿ ಉತ್ತರ ಕನ್ನಡದ ಹಾಲಕ್ಕಿ

ಒಕ್ಕಲಿಗರ ನಾಟೀ ವೈದ್ಯ ಸೇವೆ. ಚಿಕ್ಕೋಡಿಯ ಅಜ್ಜ ಅಣ್ಣಾಸಾಹೇಬರ ಕಮ್ಮಾರ ವೃತ್ತಿಯ ಬಗ್ಗೆ ಈ ಸಂಚಿಕೆ (ಪುಟ 15) ಯಲ್ಲಿ ಲೇಖನವೊಂದನ್ನು ಪ್ರಕಟಿಸಿದ್ದು ಈವರ ಪರಿಣಿತಿಗಳ ಉಪಯೋಗವನ್ನು ಸುತ್ತಲಿನ ಬಡರೈತರು ಸದಾ ಪಡೆಯುವಂತಾಗಿರುವರು. ನಮ್ಮ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಪೂರ್ತಿ ಹೊರಗಿನ ತಜ್ಞರನ್ನೇ ಅವಲಂಬಿಸುವ ಬದಲು ಈ ನಿಸ್ವಾರ್ಥ ನಾಟೀ ಪರಿಣಿತರನ್ನು ಯೋಗ್ಯ ರೀತಿ ಬಳಸಲು ಸಾಧ್ಯವಿಲ್ಲವೆ?

ಈ ರೀತಿ ಹೊರಗಿನ ಜ್ಞಾನ, ತಾಂತ್ರಿಕತೆ, ಸಂಪನ್ಮೂಲ ಮತ್ತು ಪರಿಣಿತರಿಗೆ ಹೆಚ್ಚು ಅವಲಂಬನೆಯಾಗದ ಅಭಿವೃದ್ಧಿ ಎಂದಾಕ್ಷಣ ನಮ್ಮ ವ್ಯವಸ್ಥಿತ ವಿಜ್ಞಾನಿಗಳು, ತಂತ್ರಜ್ಞರಿಂದ ಬೀಜ, ರಸಗೊಬ್ಬರ, ರಾಸಾಯನಿಕ ನಾಶಕಗಳ ಉತ್ಪಾದಕರೆಲ್ಲಾ ದಿಗಿಲು ಬೀಳುವುದು, ತಾಳಲಾರದೇ ಅಪಹಾಸ್ಯ ಮಾಡುವುದು ಸಹಜವಾಗಿರುತ್ತದೆ. ಆದರೆ ನಮ್ಮ ರೈತರಿಂದು ಈ ಎಲ್ಲಾ 'ಹೊರಗಿನವುಗಳ' ಮೇಲೆ ಪೂರ್ತಿ ಅವಲಂಬಿತರಾಗಿ, ಫಲಕಾಣದೇ ಸೋತು ಸುಣ್ಣವಾಗಿ ಆತ್ಮಹತ್ಯೆಗೀಳಿದಿರುವ ಈ ದುರಂತದ ದಿನಗಳಲ್ಲಿ ಈ ಪರ್ಯಾಯ ಅಭಿವೃದ್ಧಿ ಮಾದರಿಯ ಸೂಕ್ತತೆ ತಮಗಂತೂ ಸ್ಪಷ್ಟವಾಗಬಹುದು.

3. ಜನತಂತ್ರ ಗಟ್ಟಿಯಾಗುತ್ತದೆ :

ಜನ ತಮ್ಮದೇ ಆದ ಜ್ಞಾನ ಮತ್ತು ಸಂಪನ್ಮೂಲಗಳನ್ನು ಬಳಸಿ ಸಾಧಿಸುವ ಪ್ರಗತಿ ಎಂದರೆ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಅವರು ಪೂರ್ತಿ ತೊಡಗಿಸಿಕೊಂಡು ನಿರ್ಧಾರ ತೆಗೆದುಕೊಳ್ಳುವ ಹಕ್ಕನ್ನೂ ಪಡೆಯುವುದು ಎಂದಾಯಿತು. ಇದು ಒಂದರ್ಥದಲ್ಲಿ ಆರ್ಥಿಕ ವಿಕೇಂದ್ರೀಕರಣದ ವಿಚಾರವೂ ಆಯ್ತು. ನಮ್ಮ ಸರ್ಕಾರ ಪಂಚಾಯ್ತಿ ರಾಜ್ ವ್ಯವಸ್ಥೆಯನ್ನು ಯಶಸ್ವಿಯಾಗಿ ಜಾರಿಗೆ ತಂದು ರಾಜಕೀಯ ವಿಕೇಂದ್ರಿಕರಣದಲ್ಲಿ ದೇಶಕ್ಕೆ ಮಾದರಿಯಾಗಿದೆ ತಾನೆ? ಇನ್ನು, ಇದರ ಜೊತೆಗೆ ಆರ್ಥಿಕ ವಿಕೇಂದ್ರೀಕರಣದ ಅಂಶವೂ ಸೇರಿದರೆ ಇದು ಒಟ್ಟಾರೆ ಜನತಾಂತ್ರಿಕ ವಿಕೇಂದ್ರೀಕರಣದ ಅತ್ಯುತ್ತಮ ಮಾದರಿಯಾಗುವುದರಲ್ಲಿ ಸಂಶಯವಿರದು.

ಜೊತೆಗೆ, ಜನತಂತ್ರ ಅರ್ಥಪೂರ್ಣವಾಗಲು ಯೋಗ್ಯ ನಾಯಕತ್ವವೂ ಅಷ್ಟೇ ಅಗತ್ಯವಾಗಿದೆ ತಾನೆ. ಈ ನಿಟ್ಟಿನಲ್ಲಿ ನೋಡಿದರೆ ನಮ್ಮ ಪ್ರತಿ ಹಳ್ಳಿಗಳಲ್ಲೂ ಅಂಬಾಜಿ, ಅಣ್ಣಾಸಾಹೇಬರಂತಹ ನಿಸ್ವಾರ್ಥ ಸ್ಥಳಿಯ ಪರಿಣಿತರ ಪಡೆಯೇ ಇದ್ದು, ಜನಸೇವೆ, ಸಂಪರ್ಕ, ಜನಪ್ರಿಯತೆಗಳಲ್ಲಿ ಯಾವುದೇ ಒಬ್ಬ ನಾಯಕನಿಗೆ ಇವರು ಸರಿಸಮಾನರಾಗಿರುವರು. ಇನ್ನು ಕರ್ನಾಟಕದ ಮೂಲೆ ಮೂಲೆಗಳತ್ತ ಕಣ್ಣಾಡಿಸಿದರೆ ಸೋರಹುಣಸೆ ನಾರಾಯಣರೆಡ್ಡಿ, ಧಾರವಾಡದ ಭರಮಗೌಡರು, ಮೈಸೂರಿನ ಎ.ಪಿ. ಚಂದ್ರಶೇಖರ್, ಮಂಗಳೂರಿನ ವಿಠ್ಠಲ್‌ರಾವ್, ಶಿವಮೊಗ್ಗೆಯ ಪ್ರಫುಲ್ಲಚಂದ್ರರಂತಹವರು ಈ ನಿಟ್ಟಿನಲ್ಲಿ ಈಗಾಗಲೇ ಎತ್ತರಕ್ಕೆ ಬೆಳೆದು ಯಾವುದೇ ಒಬ್ಬ ಜನಪ್ರಿಯನಾಯಕನಿಗೆ ಸರಿಸಮಾನರಾಗಬಲ್ಲ ಪ್ರೀತಿ ವಿಶ್ವಾಸ ಪಡೆದಿರುವರು. ಇನ್ನು ರಾಷ್ಟ್ರಮಟ್ಟಕ್ಕೆ ಬಂದರಂತೂ ಮೇದಾಪಾಟ್ಕರ್, ಸುಂದರ್‌ಲಾಲ್ ಬಹುಗುಣ, ಅಣ್ಣಾಹಜಾರೆಯಿಂದ ನಮ್ಮ ಸಿದ್ದುನ್ಯಾಮನಗೌಡ ಪಾಟೀಲರಂತಹವರು ನಮ್ಮ ವ್ಯವಸ್ಥೆಗೇ ಸವಾಲಾಗುವಷ್ಟು ಬೆಳೆದು ದಿಟ್ಟ ನಾಯಕತ್ವ ಪ್ರದರ್ಶಿಸಿರುವರು. ನಮ್ಮ ಇಂದಿನ ರಾಜಕೀಯದಲ್ಲಿ ಇವರು ಪಾತ್ರಧಾರಿಗಳಲ್ಲದಿರಬಹುದು. ಆದರೆ ಒಂದು ಅರ್ಥಪೂರ್ಣ ಜನತಂತ್ರವ್ಯವಸ್ಥೆಯಲ್ಲಿ ಇವರೇ ನಿಜವಾದ ನಾಯಕರುಗಳು ಎಂಬ ವಿಚಾರದಲ್ಲಿ ಅನುಮಾನವಿರದು. ಇದೇನೇ ಇರಲಿ, ಈ ನಮ್ಮ ಪರ್ಯಾಯ ಅಭಿವೃದ್ಧಿ ಮಾದರಿಯಲ್ಲಿ ತೊಡಗಿಸಿಕೊಳ್ಳುವ ಜನತಾಪ್ರತಿನಿಧಿಗಳಿಗೆ ಈ ರೀತಿಯ ಯೋಗ್ಯ ನಾಯಕರುಗಳಾಗಿ ರೂಪಿಸಿಕೊಳ್ಳುವ ಮಹದಾವಕಾಶವಿರುತ್ತದೆ ಎಂಬುದನ್ನು ಇಲ್ಲಿ ಒತ್ತಿ ಹೇಳಬಯಸುತ್ತೇನೆ.

4. ಜಾಗತೀಕರಣದ ವಿಚಾರ :

ಇಂದು ವಿಶ್ವವ್ಯಾಪಾರ, ಆ ಮೂಲಕ ಬರುತ್ತಿರುವ ಪೇಟೆಂಟ್ ವ್ಯವಸ್ಥೆಯ ಬಗ್ಗೆ ಎಲ್ಲೆಡೆ ವ್ಯಾಪಕ ಚಿಂತೆ, ಪ್ರತಿರೋಧ ವ್ಯಕ್ತವಾಗುತ್ತಿದೆಯಷ್ಟೇ. ನಮ್ಮ ಜನರ ಸಂಪನ್ಮೂಲವಾಗಿರುವ ಜೀವವಿವಿಧತೆ, ದೇಶೀಯ ಜ್ಞಾನ, ಅನುಶೋಧನೆಗಳು, ನಮ್ಮ ನಾಟಿ ಸಮುದಾಯಗಳ ಪರಿಣತೆ, ಕುಶಲತೆಗಳೇ ಇಂದಿನ ಜಾಗತೀಕರಣದ ಹಿನ್ನೆಲೆಯಲ್ಲಿ ಕೊಳ್ಳೆಯಾಗುವ ಭೀತಿಯನ್ನು ಕೆಲವರು ವ್ಯಕ್ತಪಡಿಸುತ್ತಿರುವರು. ಇನ್ನೊಂದೆಡೆಯಿಂದ ಈ ಪರ್ಯಾಯ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು, ಇಂದಿನ ಜಾಗತೀಕರಣ ಪ್ರಕೃತಿಯಲ್ಲಿ ಸರಿಯಾಗಿ ವ್ಯವಹರಿಸಿದರೆ, ಈ ನಮ್ಮ ಜನರ ಸಂಪತ್ತು, ಜ್ಞಾನ, ಪರಿಣತಿಗಳನ್ನು ಸಂರಕ್ಷಿಸುವುದು ಮಾತ್ರವಲ್ಲ ಅವರಿಗೆ ಸೂಕ್ತ ಪ್ರತಿಫಲವನ್ನೂ ಒದಗಿಸಬಹುದೆಂಬುದು ಕೆಲವರ ಆಶಾವಾದವಾಗಿರುತ್ತದೆ.

ಈ ಎರಡು ನಿಟ್ಟಿನಲ್ಲಿ ನೋಡಿದರೂ ಕೂಡ ಜಾಗತೀಕರಣದ ಹಿನ್ನಲೆಯಲ್ಲಿ ಜನರ ಈ ಸಂಪತ್ತು, ಜ್ಞಾನ, ಶೋದನೆ, ಪರಿಣತಿಗಳ ಬಗ್ಗೆ ವಿಶೇಷ ಗಮನ ಕೊಡುವುದು ನಮಗಿಂದು ಅನಿವಾರ್ಯವಾಗಿದೆ . ಈ ಎಲ್ಲಾ ವಿಚಾರಗಳಿಗೆ ಚಿಂತಿಸಿ, ಕಾರ್ಯಮಗ್ನಗೊಳ್ಳಲು, ಈ ಕೆಳಗಿನ ಮಾರ್ಗ ಸೂಚಿ ತಮಗೆ ಸಹಾಯವಾಗಬಹುದೆಂದು ಭಾವಿಸುತ್ತೇವೆ.

1. ರಾಜ್ಯದ ಪ್ರತಿ ಹಳ್ಳಿಯಲ್ಲೂ ಲಭ್ಯವಿರುವ ಜೀವ ವಿವಿಧತೆ ; ಅಂದರೆ ನಾಟಿ ತಳಿಗಳು, ಬೀಜ, ಔಷಧಿ, ಸಸ್ಯ, ವನಸ್ಪತಿ, ನಾಟಿ ಗಿಡ, ಮರ, ಹೂ, ಕಾಯಿ, ಬಳ್ಳಿಗಳ ವಿವರಣೆಗಳನ್ನು ಸಮಗ್ರವಾಗಿ ಕಲೆಹಾಕಿ ಅದನ್ನು ಬಳಸಿ, ಬೆಳೆಸಿಕೊಂಡು ಬಂದಿರುವ ಸಮುದಾಯ,

ವ್ಯಕ್ತಿಗಳ ಸಮೇತ ದಾಖಲು ಮಾಡುವುದು. ಈ ಕಾರ್ಯಕ್ಕೆ ಶಾಲಾ ಕಾಲೇಜು ವಿದ್ಯಾರ್ಥಿಗಳ ಅಧ್ಯಾಪಕರು, ಮಹಿಳೆಯರು, ಯುವಕರು, ಸ್ಥಳೀಯ ಸಂಸ್ಥೆಗಳೆಲ್ಲವುಗಳನ್ನು ಬಳಸುವುದು ಸೂಕ್ತವಾಗಿದೆ.

2. ಇದೇ ರೀತಿ ದೇಶೀಯ ಜ್ಞಾನ, ತಂತ್ರಜ್ಞಾನ, ಸ್ಥಳೀಯ ಪರಿಣಿತರ ಅನುಶೋಧನೆಗಳನ್ನು ದಾಖಲಿಸುವುದು.

3. ಈ ಜನರ ಜ್ಞಾನ, ಸಂಪನ್ಮೂಲ, ನಾಟೀ, ಪರಿಣಿತ, ದೇಶೀಯ ಅನುಶೋಧನೆಗಳ ಬಳಕೆ, ಉಪಯೋಗವನ್ನು ಬಡ ಜನರೆಲ್ಲಾ ಸುಲಭವಾಗಿ, ನೇರವಾಗಿ ಹಂಚಿಕೊಳ್ಳುವಂತೆ ಮಾಡುವುದು. ಈ ಬಗ್ಗೆ ಪತ್ರಿಕೆ, ಎಲೆಕ್ಟ್ರಾನಿಕ್ ಮಾಧ್ಯಮಗಳೆಲ್ಲವುಗಳ ನೆರವು ಪಡೆಯುವುದು.

4. ಜನರ ಜ್ಞಾನ, ಸಂಪನ್ಮೂಲ, ಪರಿಣತಿ ಮತ್ತು ಅನುಶೋದನೆಗಳನ್ನು ವೈಜ್ಞಾನಿಕ ಸಂಶೋಧನೆಗಾಗಲೀ ಅಥವಾ ವಾಣಿಜ್ಯ ಉದ್ದೇಶಕ್ಕಾಗಲೀ ಬಳಸುವವರು ಮೊದಲು ಅವುಗಳನ್ನು ಬಳಸಿ, ಬೆಳಸಿಕೊಂಡು ಬಂದಿರುವ ವ್ಯಕ್ತಿ, ಸಮುದಾಯ ಅಥವಾ ಪ್ರದೇಶದ ಜನರ ಒಪ್ಪಿಗೆ ಪಡೆಯುವಂತೆ ಮತ್ತು ಅದರಿಂದ ಬರುವ ಲಾಭದ ನ್ಯಾಯಯುತ ಹಂಚಿಕೆಯಾಗುವಂತೆ ಮಾಡುವುದು ಅಗತ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಕೇರಳದ ತಿರುವನಂತಪುರದ ಕಾಣಿ ಬುಡಕಟ್ಟು ಜನಾಂಗದ ದೇಶೀಯ ಜ್ಞಾನವನ್ನು ವಾಣಿಜ್ಯಗೊಳಿಸಿ, ಬಂದಂತಹ ಪ್ರತಿಫಲದಲ್ಲಿ ಅರ್ಧದಷ್ಟನ್ನು ಆ ಬುಡಕಟ್ಟು ಜನಾಂಗಕ್ಕೆ ಹಂಚುವಂತೆ ಮಾಡಿರುವ ಉದಾಹರಣೆಯನ್ನು ಗಮನಿಸಬಹುದು. (ಹಿ.ಗಿ. ಪೈರು4, ಕೊಯಿಲು1, 1998 ನೋಡಿರಿ). ಅಂತರ ರಾಷ್ಟ್ರೀಯ ಮಟ್ಟದಲ್ಲಿ ಪೇಟೆಂಟ್ ದಾಳಿಯನ್ನು ಎದುರಿಸಲು ಈ ನಿಟ್ಟಿನಲ್ಲಿ ನಮ್ಮ ಪೇಟೆಂಟ್ ವ್ಯವಸ್ಥೆಯನ್ನು ಗಟ್ಟಿಮಾಡುವುದು ಅತ್ಯಗತ್ಯವಾಗಿರುತ್ತದೆ.

5. ಸ್ಥಳೀಯ ವ್ಯಕ್ತಿಗಳ ಶೋಧನೆ, ಆವಿಷ್ಕಾರ, ತಾಂತ್ರಿಕ ಪರಿಣತಿಗಳನ್ನು ಪೂರ್ಣವಾಗಿ ಪೋಷಿಸಿ, ಬೆಳಸಿ, ಅದನ್ನು ಬಹುಜನರು ಉಪಯೋಗಿಸಲ್ಪಡುವಂತೆ ಮಾಡಲು ರಾಜ್ಯಮಟ್ಟದಲ್ಲಿ ಒಂದು ಪ್ರತ್ಯೇಕ ಸಂಸ್ಥೆಯನ್ನು ನಿರ್ಮಿಸುವುದು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಗುಜರಾತ್ ಸರ್ಕಾರ **ಗ್ಯಾನ್** (GAIN - Gujarat Grassroot Innovators Network) ಎಂಬ ಸಂಸ್ಥೆಯನ್ನು ಈಗಾಗಲೇ ಸ್ಥಾಪಿಸಿದ್ದು, ಇದೇ ಮಾದರಿಯಲ್ಲಿ ನಮ್ಮ ರಾಜ್ಯದಲ್ಲೂ ಸ್ಥಾಪಿಸಬಹುದಾಗಿದೆ. ಈ ನಿಟ್ಟಿನಲ್ಲಿ ಒಂದು ನಿಧಿಯನ್ನು ಕೂಡಿಹಾಕುವುದು ಅಗತ್ಯ. ನಮ್ಮ ಕೇಂದ್ರದ ಇತ್ತೀಚಿಗಿನ ಮುಂಗಡ ಪತ್ರದಲ್ಲಿ ಈ ಬಗ್ಗೆ 10 ಕೋಟಿ ರೂ. ಗಳನ್ನು ತೆಗೆದಿಡಲಾಗಿದೆ ಎಂದು ತಿಳಿದು ಬಂದಿದೆ. ಇದೇ ಕ್ರಮವನ್ನು ನಮ್ಮ ರಾಜ್ಯ ಮುಂಗಡ ಪತ್ರದ ಮೂಲಕವೂ ಕೈಗೊಳ್ಳಬಹುದಾಗಿದೆ.

6. ನಮ್ಮ ಕೃಷಿ ಇಲಾಖೆ, ಕೃಷಿವಿಶ್ವವಿದ್ಯಾನಿಲಯ ಮತ್ತಿತರ ಸಂಶೋಧನಾ ಕೇಂದ್ರಗಳು ರೈತರಿಗೆ, ಗ್ರಾಮೀಣ ಜನರಿಗೆ ಬರಿದೇ 'ಹೇಳುವವರು' ಎಂಬ ಬಿಗುಮಾನವನ್ನು ಮೃದುಗೊಳಿಸಿ ಅವರಿಂದ ನಮ್ಮ ರೈತರನ್ನು ಸ್ವಲ್ಪ 'ಕೇಳುವಂತೆ'ಯೂ ಪ್ರೇರೇಪಿಸಬೇಕು. ಅವರ ಜ್ಞಾನ, ಸಂಪನ್ಮೂಲ, ಪರಿಣತಿ, ಅನುಶೋಧನೆಗಳನ್ನು ಅರಿತು, ಅವುಗಳನ್ನು ಮತ್ತಷ್ಟು ವ್ಯವಸ್ಥೆಗೊಳಿಸಿ ಜನರಿಗೇ ಮರು ತಲುಪಿಸುವಂತೆ ಮಾಡುವುದು ಇಂದಿನ ಅಗತ್ಯವಾಗಿದೆ.

7. ಈ ದೇಶೀಯ ಜ್ಞಾನ ವ್ಯವಸ್ಥೆಯನ್ನು ಕಾಪಾಡಿಕೊಂಡು ಬಂದಿರುವವರು, ನಾಟೀ ಪರಿಣಿತರು, ಸ್ಥಳೀಯ ಅನುಶೋಧಕರು ಬಡತನದಲ್ಲೇ ಜೀವಿಸುತ್ತಿರುವದು ಕಹುಸತ್ಯದ ಮಾತಾಗಿದೆ. ಗ್ರಾಮೀಣ ಜನತೆ ಅವರೆಲ್ಲರ ಸೇವೆಯನ್ನು ಪಡೆಯುತ್ತಿದ್ದರೂ ಅವರಿಗೆ ಏನಾದರೂ ಪ್ರತಿ ಫಲ ನೀಡುವುದಿರಲಿ, ಅವರ ಸೇವೆಯನ್ನು ಮನ್ನಿಸಿ ಕಿಂಚಿತ್ತು ಪುರಸ್ಕರಿಸಲೂ ಯೋಚಿಸುವ ಸ್ಥಿತಿಯಲ್ಲಿಲ್ಲ. ಹಾಗಾಗಿ, ಸರ್ಕಾರವೇ ಈ ನಿಟ್ಟಿನಲ್ಲಿ ಮುಂದೆ ಬಂದು ಪ್ರತಿ ಹಳ್ಳಿಯಲ್ಲಿರುವ ನಾಟೀ ವೈದ್ಯರು, ನಾಟೀ ಪರಿಣಿತರನ್ನು ಗುರುತಿಸಿ ಯೋಗ್ಯರೀತಿಯಲ್ಲಿ ಬದುಕಲು ನೆರವಾಗುವಂತೆ ಅವರಿಗೆ ಮಾಸಿಕ ಗೌರವಧನ ನೀಡುವುದು ಮತ್ತು ಪ್ರತಿ ವರ್ಷವೂ ಅಂತಹವರನ್ನು ಗೌರವಿಸಿ, ಸನ್ಮಾನಿಸುವುದು ಈ ನಿಟ್ಟಿನಲ್ಲಿ ಯೋಗ್ಯ ಹೆಜ್ಜೆಯಾಗಿರುತ್ತದೆ.

8. ದೇಶೀಯ ಜ್ಞಾನ ತಂತ್ರಜ್ಞಾನ ವ್ಯವಸ್ಥೆಯ ಬಗ್ಗೆ ಸ್ಥಳೀಯ ಪರಿಣಿತರು, ಅನುಶೋಧಕರ ಬಗ್ಗೆ ಯುವಪೀಳಿಗೆಯಲ್ಲಿ ಆಸಕ್ತಿ ಗೌರವ, ಏರ್ಪಡಿಸಲು, ಇವುಗಳನ್ನು ಪಠ್ಯವಿಚಾರಗಳಾಗಿ ಸೇರ್ಪಡಿಸುವುದು ಅತ್ಯಂತ ಸೂಕ್ತವಾಗಿದೆ.

9. ಜನರ ಜ್ಞಾನ, ಸಂಪನ್ಮೂಲ, ಪರಿಣತಿ ಮತ್ತು ಅನುಶೋಧನೆಗಳನ್ನು ಪೋಷಿಸಿ, ಬೆಳಸಿ ಬಳಸಿಕೊಂಡು ಬರಲು ದೇಶೀಯ ಪಾರಂಪರಿಕ ಸಂಸ್ಥೆಗಳು ಅಂದರೆ - ಜನಪದ ಸಾಹಿತ್ಯ, ಲಾವಣಿ, ಕಥೆ, ಒಗಟು, ಆಚಾರ, ರೀತಿ ನೀತಿಗಳು, ದಟ್ಟವಾಗಿ ಬೆಳೆದಿರುತ್ತವೆ. ಇವುಗಳು ಉಳಿದರೆ ಮಾತ್ರ ಜನರ ಜ್ಞಾನ ಸಂಪನ್ಮೂಲ ಪರಿಣತಿ ಮತ್ತು ಅನುಶೋಧನೆಗಳು ಉಳಿದು ಬೆಳೆಯಲು ಸಾಧ್ಯ. ಇವುಗಳನ್ನು ಅರಿತು, ದಾಖಲಿಸಿ, ಅಭ್ಯಸಿಸುವ ಕಾರ್ಯ ಮೊದಲಾಗಬೇಕಾಗಿದೆ. ಈ ನಿಟ್ಟಿನಲ್ಲಿ ನಮ್ಮ ಜನಪದ ಸಾಹಿತ್ಯ ಅಕಾಡೆಮಿಗಳಂತಹ ಸಂಸ್ಥೆಗಳನ್ನು ಬಳಸುವುದು ಸೂಕ್ತವಾಗಿದೆ.

ಈ ಎಲ್ಲಾ ವಿಚಾರಗಳನ್ನು ಸರಳೀಕರಿಸಿ ಪ್ರಸ್ತಾಪಿಸಲಾಗಿದೆ. ಈ ನಿಟ್ಟಿನಲ್ಲಿ ಸಾಕಷ್ಟು ಚಿಂತನೆ, ಚರ್ಚೆಗಳು ಅಗತ್ಯವಾಗಿದೆ. ಈ ಬಗ್ಗೆ ಹಿತ್ತಲಗಿಡ ಬಳಗದ ಸಹಕಾರ ಸದಾ ಇರುತ್ತದೆ. ತಾವು ಈ ಬಗ್ಗೆ ಚಿಂತಿಸಿ, ಪ್ರತಿಕ್ರಿಯಿಸುತ್ತೀರಿ ಎನ್ನುವ ವಿಶ್ವಾಸದಿಂದ ಪತ್ರ ಮುಗಿಸುತ್ತೇನೆ.

ಇಂತಿ ತಮ್ಮ ವಿಶ್ವಾಸಿ

ಡಾ. ಟಿ.ಎಸ್. ಪ್ರಕಾಶ್ ಕಮ್ಮರಡಿ

ದೇಶೀಯ ಹತೋಟಿ ಕ್ರಮಗಳು

1. ಹತ್ತಿಯ ಜೊತೆಗೆ ಬೆಂಡೆಕಾಯಿ !

ಹತ್ತಿಯಲ್ಲಿ ಹುಳದ ಕಾಟ ತಪ್ಪಿಸಲು ಏನೆಲ್ಲಾ ಪ್ರಯತ್ನಗಳು. ಔಷಧಿ ಹತೋಟಿಗೆ ಒಳಪಡದ ಹುಳುವನ್ನು ತಡೆಗಟ್ಟಲು ಔಷಧಿಯನ್ನೇ ಉತ್ಪಾದಿಸುವ ಹತ್ತಿಗಿಡಗಳ ಸೃಷ್ಠಿ (ಬಿಟಿ ಹತ್ತಿ) ಕೂಡಾ ನಡೆದಿದೆ.

ಇಂತಹ ಹುಳದ ಹತೋಟಿಗೆ ಬಹು ಹಿಂದೆ 1911 ರಲ್ಲಿಯೇ ಮರಾಠಿ ಭಾಷೆಯಲ್ಲಿ ಬರೆದ ಪುಸ್ತಕವೊಂದರಲ್ಲಿ ರಾಸಾಯನಿಕ ರಹಿತ ಹತೋಟಿಕ್ರಮದ ಉಲ್ಲೇಖವಿದೆ. ಹತ್ತಿಗಿಡದ ಜೊತೆಗೆ ಬೆಂಡೆ ಬೆಳೆದರೆ, ಹುಳುಗಳು ಹತ್ತಿಯ ಬದಲಿಗೆ ಬೆಂಡೆಕಾಯಿ ಒಳಗೆ ನುಗ್ಗುವುದಂತೆ. ಹತ್ತಿಯಲ್ಲಿ ಕಾಯಿ ಹಿಡಿಯುವ ಸಮಯದಲ್ಲಿ ಈ ಬೆಂಡೆ ಗಿಡ ಕಿತ್ತು ಹುಳುಗಳನ್ನು ನಾಶಮಾಡುವುದರಿಂದ ಹುಳದ ಹತೋಟಿ ಸಾಧ್ಯ ಎನ್ನುತ್ತಾರೆ ಅದರ ಲೇಖಕರು.

2. ತೆಂಗಿಗೆ ಸಂಪಿಗೆ ಪರಿಮಳ !

ಫಲ ಭರಿತ ತೆಂಗಿನ ಮರಕ್ಕೆ ಹುಳದ ಕಾಟ ಬಂದಾಗ ಮರದ ಒಡೆಯರಿಗೆ ಹೊಟ್ಟೆಯುರಿಯದೇ ಇದ್ದೀತೇ? ಮಾಡುವುದೇನು? ಉತ್ತರ ಸಂಪಿಗೆ ಹೂವಂತೆ. ಹೇಗೆನ್ನುತ್ತೀರೋ ? ತೆಂಗಿನ ಮರಗಳ ಜೊತೆಗೆ ಸಂಪಿಗೆ ಮರ ನೆಟ್ಟರೆ, ಸಂಪಿಗೆ ಹೂವಿನ ಘಾಟು ವಾಸನೆಗೆ ಹೆದರಿ, ಹುಳುಗಳು ಆ ತೋಟದ ತಂಟೆಗೇ ಬಾರವಂತೆ. ಅಷ್ಟೇ ಅಲ್ಲ; ಹುಳು ಈಗಾಗಲೇ ಗಿಡದ ಒಳಹೊಕ್ಕಿದ್ದರೆ, ಒಂದು ಕಬ್ಬಿಣದ ಕೊಕ್ಕೆಯಿಂದ ಅದನ್ನು ಹೊರಕ್ಕೆ ಎಳೆದು ತೆಗೆದು ಬಿಡಿ. ಅನಂತರ ಸಂಪಿಗೆ ಹೂಗಳನ್ನು ಅದರೊಳಗೆ ತುಂಬಿಸಿದರೆ, ಹುಳದ ಕಾಟ ತಪ್ಪುವುದಂತೆ.

3. ಸಾವಯವ ದ್ರಾಕ್ಷಿ

ದ್ರಾಕ್ಷಿ ತಿನ್ನಲೇನೋ ಇಷ್ಟ, ಆದರೆ, ಅಬ್ಬಾ ಅದಕ್ಕೆ ಹಾಕುವ ಔಷಧಿ ನೆನಸಿಕೊಂಡರೆ, ದ್ರಾಕ್ಷಿಯೇ ಬೇಡ ಅನ್ನಿಸುತ್ತೆ. ಸಾವಯವ ರೀತಿಯಲ್ಲಿ ದ್ರಾಕ್ಷಿ ಬೆಳೆಸಲು ಇಚ್ಚಿಸುವ ದ್ರಾಕ್ಷಿ ಬೆಳೆಗಾರರಿಗೊಂದು ಸುದ್ದಿ. ಬೆಳಿಗ್ಗೆ ಬಿದ್ದ ಮಂಜು ಬಿಸಿಲೇರಿ ಕರಗುವ ಮೊದಲೇ, ಮಂಜಿನ ಹನಿಗಳು ಇನ್ನೂ ಎಲೆಯ ಮೇಲೆ ಇರುವಾಗಲೇ ಗಿಡಗಳ ಮೇಲೆ ಬೂದಿ ಉದುರಿಸಬೇಕು. ಗಂಜಲ (ಹಸುವಿನ ಮೂತ್ರ) ದೊಂದಿಗೆ ಹೊಗೆಸೊಪ್ಪನ್ನು ಅರೆದು ಸಿಂಪಡಿಸುವುದರಿಂದಲೂ ಕೀಟಗಳ ಕಾಟ ತಪ್ಪಿಸಬಹುದು. ಜೊತೆಗೆ ಹೊಂಗೆಯ ಹಿಂಡಿಯನ್ನು ಗಿಡದ ಬುಡಕ್ಕೆ ಹಾಕುವುದರಿಂದ ಗೆದ್ದಲಿನ ಕಾಟವನ್ನು ತಪ್ಪಿಸಬಹುದು.

4. ಗೆದ್ದಲು ಹಿಡಿಯುತ್ತಿದೆಯೇ ?

ಕಬ್ಬಿನ ತೋಟಕ್ಕೆ ಗೆದ್ದಲಿನ ಕಾಟ ತಪ್ಪಿಸಲು ತೋಟಕ್ಕೆ ನೀರು ಬಿಡುವ ಕಾಲುವೆಯಲ್ಲಿ ಉಪ್ಪನ್ನು ಒಂದು ಬಟ್ಟೆಯಲ್ಲಿ ಗಂಟು ಕಟ್ಟಿ ಇಟ್ಟು ಬಿಡಿ. ನೀರಿನೊಂದಿಗೆ ಹರಿದು ಹೋಗುವ ಉಪ್ಪಿನಂಶ ಗೆದ್ದಲಿನ ಕಾಟವನ್ನು ಕೂಡಾ ತಡೆಯುತ್ತದೆಯಂತೆ. ಕೋಲುಕಳ್ಳಿ ಅಥವಾ ಮುಂಡುಗಳ್ಳಿ (*Euphorbia tirucalli*), ಲಾವಂಚ ಅಥವಾ ಕಸ್ ಕಸ್ (*Vetiveria zizanioides*), ಮತ್ತು ಎಕ್ಕದ ಗಿಡಗಳನ್ನು ಅಲ್ಲಲ್ಲಿ ನೆಡುವುದರಿಂದ ಹೊಲ-ಗದ್ದೆಗಳಲ್ಲಿ ಗೆದ್ದಲು ಕಡಿಮೆಯಾಗುತ್ತದೆ.



5. ಕ್ಯಾಬೇಜ್ - ಹುರುಳಿಕಾಯಿ ಜೋಡಿ :

ಕ್ಯಾಬೇಜ್ ಗಿಡಗಳೊಂದಿಗೆ ಹುರುಳಿಕಾಯಿ (ಬೀನ್ಸ್) ಬೆಳೆದರೆ, ಕ್ಯಾಬೇಜ್‌ಗೆ ಕೀಟದ ಕಾಟ ಕಡಿಮೆಯಾಗುವುದಂತೆ.

ಈ ಮೇಲಿನ ಪದ್ಧತಿಗಳು ಮಹಾರಾಷ್ಟ್ರದ ಕೊಂಕಣ ಪ್ರಾಂತ್ಯದ ಮಹಾಜನ್ ಎಂಬ ರೈತ ತನ್ನ ಅನುಭವದ ಆಧಾರದ ಮೇಲೆ 1911 ರಲ್ಲಿ ಮರಾಠಿ ಭಾಷೆಯಲ್ಲಿ ಬರೆದ ಪುಸ್ತಕ "ವನಸ್ಪತಿ ಸಂವರ್ಧನ" ಶಿಕ್ಷಕ ದಲ್ಲಿ ಉಲ್ಲೇಖಿಸಲ್ಪಟ್ಟಿವೆ. ಇದರ ಬಗ್ಗೆ ವಿವರಣೆ ನೀಡಿರುವವರು ಡಾ. W.B. ರಾಹುಡಕರ್.

6. ಹೇನು ಓಡಿಸಲು ಎಕ್ಕದ ಕೋಲು :

ಗುಜರಾತಿನ ಆನಂದ ಜಿಲ್ಲೆಯ ವಿಜಯಾ ಭಾಯಿ ಕೆಂಪು ಎಕ್ಕದ (*Calotropis procera*) ಕೋಲುಗಳನ್ನು ಗಿಡದ ಮೇಲಿನ ಹಸಿರು ಅಥವಾ ಕಪ್ಪು ಹೇನು ಓಡಿಸಲಿಕ್ಕೆ ಉಪಯೋಗಿಸುತ್ತಾರೆ. ಅವರ ಭತ್ತದ ಗದ್ದೆಯಲ್ಲಿ ಈ ಹೇನುಗಳ ಕಾಟ ಹೆಚ್ಚಾಗಿತ್ತಂತೆ. ಒಂದು ಸಲ ಹಾರವಾಡಲಿಕ್ಕೆ ಎಕ್ಕದ ಹೂಗಳನ್ನು ಸಂಗ್ರಹಿಸುತ್ತಿದ್ದಾಗ, ಗಿಡದ ಎಲೆ ತುಂಬಾ ಕಪ್ಪು ಹೇನು (Aphid) ಕಾಣಿಸಿತಂತೆ. ಆಗ ಅವರಿಗೆ ತಮ್ಮ ಭತ್ತದ ಗದ್ದೆ


ನೆನಪಾಯಿತು. ಗಿಡ ಮುತ್ತುವ ಹೇನು ಗಿಡದ ರಸ ಹೀರಿ, ಎಲೆಯ ತುಂಬಾ ಬಿಳಿಗೆರೆ ಮೂಡಿಸಿ ಬೆಳೆ ಹಾಳು ಮಾಡುವುದಕ್ಕೆ ಈ ಎಕ್ಕ ಔಷಧಿಯಾಗಬಹುದೇನೋ ಎಂದನಿಸಿತು ಅವರಿಗೆ. ನೋಡೋಣವೆಂದು ಕೊಂಬೆಗಳನ್ನು ಮುರಿದು ತಂದು 15 ಅಡಿಗೆ ಒಂದರಂತೆ ಗದ್ದೆಯಲ್ಲಿಟ್ಟರು. ಅವರ ಅಚ್ಚರಿ, ಸಂತೋಷಕ್ಕೆ ಭತ್ತದ ಗಿಡ ಬಿಟ್ಟು ಹೇನುಗಳೆಲ್ಲಾ ಎಕ್ಕದ ಎಲೆಗೆ ಮುತ್ತಿಗೆ ಹಾಕಿದವು. ಇದೇ ಎಕ್ಕ 10 ದಿನಗಳ ನಂತರ ಒಣಗಿ ಹೋದಾಗ ಹೇನುಗಳೆಲ್ಲಾ ಮತ್ತೆ ಭತ್ತಕ್ಕೆ ಓಡಲು ಸುರು. ಪುನಃ ಬೇಗನೆ ಮತ್ತೆ ಹೊಸದಾಗಿ ಎಕ್ಕದ ಕೊಂಬೆ ನೆಟ್ಟರು. ಹೀಗೆ 2-3 ಬಾರಿ ಎಕ್ಕವನ್ನು ಬದಲಾಯಿಸಿದಾಗ ಹೇನುಗಳ ಕಾಟ ತಪ್ಪಿ ಭತ್ತದ ಗಿಡಗಳು ಪುಷ್ಠಿಯಾಗಿ ಬೆಳೆದವಂತೆ. ಗುಜರಾತಿನ ವಿಜಯಾಭಾಯಿಯವರ ಅನುಭವ ನಮ್ಮ ಕರ್ನಾಟಕದ ರೈತರಿಗೂ ಉಪಯೋಗಕ್ಕೆ ಬಂದೀತು.

7. ಎಲೆ ಮುದುಡುವ ರೋಗಕ್ಕೆ ಬೂದಿಯ ಔಷಧಿ:

ಮೆಣಸಿನ ಕಾಯಿಯಲ್ಲಿ ಎಲೆಮುದುಡುವ ರೋಗ ಸಾಮಾನ್ಯವಾಗಿ ಕಂಡು ಬರುವ ಕಾಯಿಲೆ. ತ್ರಿಪುರಾದ ರೈತರು ಇದನ್ನು ತಡೆಯಲು ಬೂದಿಯನ್ನು ಸೀಮೆಎಣ್ಣೆಯೊಂದಿಗೆ ಮಿಶ್ರಮಾಡಿ ಗಿಡದ ಮೇಲೆ ಧೂಳೀಕರಿಸುತ್ತಾರಂತೆ. ಸೀಮೆ ಎಣ್ಣೆಯ ಪ್ರಮಾಣವೇನಿದ್ದರೂ ಘಾಟು ವಾಸನೆ ಹೊಡೆಯುವಷ್ಟು.

8. ಹುಳದ ಕಾಟ ತಪ್ಪಿಸಲು ಹಕ್ಕಿಯ ನೆರವು :

ಆಲೂಗಡ್ಡೆ, ಮೆಣಸಿನಕಾಯಿಯಂತಹ ಸಸ್ಯಗಳಲ್ಲಿ ಕಂಡುಬರುವ ಕಾಂಡ ಕತ್ತರಿಸುವ ಹುಳುವಿನ ಕಾಟ ತಪ್ಪಿಸಲು ತ್ರಿಪುರಾ ರಾಜ್ಯದ ಜನರು ಹಕ್ಕಿಗಳ ನೆರವು ಪಡೆಯುತ್ತಾರೆ. ಹೊಲದಲ್ಲಿ ಬಿದರಿನ ಕಡ್ಡಿಗಳು, ಒಣಗಿದ ಹುಲ್ಲು ಇವನ್ನೆಲ್ಲಾ ಉಪಯೊಗಿಸಿ, ಅಟ್ಟಣಿಗೆ ಹಾಕುತ್ತಾರಂತೆ. ಅಟ್ಟಣಿಗೆಯಲ್ಲಿ ಬಂದು ಕುಳಿತುಕೊಳ್ಳುವ ಹಕ್ಕಿಗಳು ಹುಳುಗಳನ್ನು ತಿಂದು ಗದ್ದೆಯ ಕಾವಲು ನಡೆಸುತ್ತವೆ. ಬೆಳದಿಂಗಳ ರಾತ್ರಿ ಹಕ್ಕಿಗಳ ಚಟುವಟಿಕೆ ಹೆಚ್ಚಂತೆ.



9. ಬೆಂಕಿರೋಗಕ್ಕೆ ಬಾಳೆ ಮದ್ದು !

ಭತ್ತದ ಗದ್ದೆಯಲ್ಲಿ ಬೆಂಕಿಬೀಳುವುದಲ್ಲ; ಬೆಂಕಿ ರೋಗ ಅಂದರೆ ಎಲೆಯೆಲ್ಲ ಸುಟ್ಟು ಹೋದಂತೆ ಕಾಣುವ ಬೆಂಕಿ ರೋಗ (Blast) ನಿಯಂತ್ರಿಸುವುದಕ್ಕೆ ಬಾಳೆ ದಿಂಡು ಉಪಯುಕ್ತವಂತೆ. ತ್ರಿಪುರಾದ ರೈತರು ಬಾಳೆಯ ದಿಂಡನ್ನು ಭತ್ತದ ಗದ್ದೆಯಲ್ಲಿ ಅಲ್ಲಲ್ಲಿ ಇಡುತ್ತಾರಂತೆ. ಅವರ ಅನುಭವದ ಪ್ರಕಾರ ಈ ಕ್ರಮ ಬೆಂಕಿ ರೋಗವನ್ನು ಹತೋಟಿಯಲ್ಲಿಡುವುದಂತೆ.

ಮೂಲ : ಹನೀಬೀ 9(4) 1998

10. ಬಲೆಯೊಳಗೆ ದಾಳಿಂಬೆ ಬೆಳೆ :

ದುಬಾರಿ ಬೆಲೆ ಕೊಟ್ಟು ಕ್ರಿಮಿನಾಶಕ ಬಳಸಿಯೂ ಕೈಸುಟ್ಟುಕೊಳ್ಳುವ ಪರಿಸ್ಥಿತಿ ಬರದಿರಲೆಂದು; ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನ ಹಳ್ಳಿಯ ಸುಬ್ಬರಾವ್ ಎನ್ನುವ ರೈತರು ರಸಹೀರುವ ಪತಂಗದಿಂದ ದಾಳಿಂಬೆಯನ್ನು ರಕ್ಷಿಸಲು ದಾಳಿಂಬೆ ತೋಟಕ್ಕೆ ಸುತ್ತಲೂ ಹಾಗೂ ಮೇಲೆ ಬಲೆ ಹಾಕಿಸಿದ್ದಾರಂತೆ. ಪ್ರತಿ ಎಕರೆಗೆ ಬಲೆ ಹಾಕಲು ರೂ 25-30 ಸಾವಿರ ವೆಚ್ಚವಾಗುವುದಂತೆ. ಆದರೇನು? ಕೀಟದ ದಾಳಿ ತಪ್ಪಿ ಹೆಚ್ಚಾಗುವ ಫಸಲಿನಿಂದ ಎಕರೆಗೆ ರೂ. 40 ಸಾವಿರ ಹೆಚ್ಚಿನ ಲಾಭವಂತೆ. ಬಲೆಯನ್ನು ಸರಿಯಾಗಿ ಬಳಸಿ ತೆಗೆದಿಟ್ಟರೆ ಸುಮಾರು ಆರು ವರ್ಷ ಬಳಸಬಹುದಂತೆ. ಅಂದರೆ ಏನಿಲ್ಲವೆಂದರೂ ಬಲೆಯಿಂದಾಗಿ ಕನಿಷ್ಠ 2 ಲಕ್ಷ ಅಧಿಕ ಲಾಭ !

-ಮೂಲ ಲೇಖನ : ವಸಂತ ಮಾಲನಿ

ಕೃಪೆ : ಪ್ರಜಾವಾಣಿ 6-1-99

ವಿಶೇಷ ಸೂಚನೆ

ಹಿತ್ತಲ ಗಿಡದಲ್ಲಿ ದಾಖಲಿಸಿರುವ ವಿವಿಧ ಮಾಹಿತಿಗಳನ್ನು ವಾಣಿಜ್ಯ ದೃಷ್ಟಿಯಿಂದ ಬಳಸಬಯಸುವವರು ಮೊದಲು ಅದನ್ನು ಹಿತ್ತಲಗಿಡದ ಗಮನಕ್ಕೆ ತರಬೇಕಾಗಿ ಈ ಮೂಲಕ ಸೂಚಿಸಲಾಗಿದೆ.

ರೈತರು ಮೊದಲು ಮಾಹಿತಿಗಳನ್ನು ನೀಡಿರುವ ಅಥವಾ ಸೃಷ್ಟಿಸಿರುವ ವ್ಯಕ್ತಿಗಳು, ಪ್ರದೇಶದೊಡನೆ ಸಂಪರ್ಕ ಏರ್ಪಡಿಸಿ, ಸಂಪೂರ್ಣ ವಿವರಗಳನ್ನು ಪಡೆಯುವುದು ಸೂಕ್ತ. ನಂತರ ತಮ್ಮ ಅನುಭವವನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳಬೇಕಾಗಿ ಕೋರಲಾಗಿದೆ.


ಈ ಬಗ್ಗೆ ಆಗುವ ಯಾವುದೇ ನಷ್ಟ, ಅನಾಹುತಗಳಿಗೆ ಹಿತ್ತಲಗಿಡ ಜವಾಬ್ದಾರಿಯಲ್ಲ.

ಸಂ.

ಪುಣ್ಯ ಕೋಟಿ

1. ಮೀನಿಗೆ ಊಟ - ಹಸುವಿಗೆ ತಪ್ಪಿತು ಕಾಟ

ಪ್ರಾಣಿಗಳ ಮೈಮೇಲೆ ಆಗುವ ಹೇನು, ಉಣ್ಣೆ ಇವುಗಳ ಕಾಟ ತಪ್ಪಿಸಲು ಹುಣ್ಣಿಮೆ ಮತ್ತು ಅಮಾವಾಸ್ಯೆಯ ದಿನ ಅವುಗಳಿಗೆ ತಪ್ಪದೆ ಸ್ನಾನಮಾಡಿಸಬೇಕು. ಹಸುವಿನ ಮೈಮೇಲಿನ ಉಣ್ಣೆ ಕಾಟ ತಪ್ಪಿಸಲಿಕ್ಕೆ ಮುಳ್ಳು ಅಥವಾ ಮುಳ್ಳು ಮುತ್ತುಗ (*Erythrina suberosa*) ಔಷಧಿಯಂತೆ. ಮಹಾರಾಷ್ಟದ ಜನರ ಪ್ರಕಾರ ಈ ಮುಳ್ಳು ಮುತ್ತುಗ ರಸದೊಂದಿಗೆ ಸ್ವಲ್ಪ ಉಪ್ಪು ಬೆರೆಸಿ ದನಗಳ ಮೈಗೆ ಹಚ್ಚುತ್ತಾರಂತೆ. ಅದಾದ ಮೇಲೆ ಹಸುಗೆ ಸ್ನಾನ. ಸ್ನಾನದ ನಂತರ ಕೆರೆಯ ನೀರಿನಲ್ಲಿ ಸ್ವಲ್ಪ ಹೊತ್ತು ಹಸುವನ್ನು ನಿಲ್ಲಿಸುತ್ತಾರೆ. ಆಗ ಕೆರೆಯಲ್ಲಿನ ಮೀನುಗಳು ಬಂದು ಅದರ ಮೈಮೇಲಿನ ಉಣ್ಣೆಯನ್ನು ತಿನ್ನುತ್ತವಂತೆ.



2. ಹಾಲಿನ ಧಾರೆ :

ಹಾಲಿಗೆ ಸ್ವಲ್ಪ ಬೆಲ್ಲ, ಜೊತೆಗೆ ಇಸಬ್‌ಗೋಲಾ (*Plantago ovata*) ಸೇರಿಸಿ ಹಸುವಿಗೆ ತಿನ್ನಿಸಿದರೆ ಹಾಲು ಹೆಚ್ಚಾಗುತ್ತೆ. ಸೋಂಪು (*Carum carvi*), ತುಪ್ಪ, ಬೆಲ್ಲ ಇವುಗಳ ಮಿಶ್ರಣದ ಉಂಡೆ ಮಾಡಿ ಬೆಳಿಗ್ಗೆ, ಸಂಜೆ ಎರಡು ಹೊತ್ತು ಒಂದೊಂದು ಉಂಡೆ ತಿನ್ನಿಸಿದರೆ ಕೂಡಾ ಹಾಲು ಹೆಚ್ಚಾಗುತ್ತಂತೆ. ಇವು ಮಹಾರಾಷ್ಟ್ರದ ಕೊಂಕಣದ ಆ ಮಹಾಜನರ ಅನುಭವ.


3. ಆಡು ಮುಟ್ಟದ ಸೊಪ್ಪಿಲ್ಲ !

ಆದರೆ, ಮರಗಳ ಮೇಲಿನ ಸೊಪ್ಪನ್ನು ಪಾಪದ ಆಡು ಮುಟ್ಟುವುದಾದರೂ ಹೇಗೆನ್ನುತ್ತೀರಾ ? ಉತ್ತರ ಪ್ರದೇಶದ ಮೆಡಿನಾಪುರದ ಪ್ರಿಯಾಂತ ಹಂಡ್ಸಾ, ಹಲಸಿನ ಎಲೆಯನ್ನು ಮರಿಹಾಕಿದ ಆಡಿಗೆ ತಿನ್ನಿಸಿದಾಗ ಕಸ ಸುಲಭವಾಗಿ ಹೊರಗೆ ಬಂದಿದ್ದು ಗಮನಿಸಿದರಂತೆ. ಹೀಗಾಗಿ ಈಗ ಅವರು ಮರಿ ಹಾಕಿದ ಕೊಡಲೇ ಹಲಸಿನ ಎಲೆ ತಿನ್ನಿಸಿ ಕಸ (Placenta) ಹೊರ ಬರುವುದರ ಬಗ್ಗೆ ನಿಶ್ಚಿಂತೆಯಿಂದಿರುತ್ತಾರಂತೆ.

4. ಮೂಳೆ ಮುರಿತಕ್ಕೆ :

ಪಶುಗಳ ಎಲುಬು ಮುರಿದಾಗ ಒಟ್ಟು ಸೇರಿಸಿ ಫ್ರಾಕ್ಚರ್ ಹಾಕಲು ಗುಜರಾತಿನ ನಾಟೀ ಪಶುವೈದ್ಯ ಜಮಾಲಬಾಯಿಗೆ ಹೆಚ್ಚೇನೂ ಬೇಕಿಲ್ಲ. 200 ಗ್ರಾಂ. ಅರಿಶಿಣ, ಅರ್ಧ ಕೆ.ಜಿ. ಮನುಷ್ಯರ ತಲೆಗೂದಲು ಜೊತೆಗೆ ಸುಮಾರು 250 ರಿಂದ 500 ಗ್ರಾಂ. ನಷ್ಟು ಎಳ್ಳೆಣ್ಣೆ ಇದಿಷ್ಟೆ ಅವರು ಬಳಸುವ ಸಾಮಾಗ್ರಿ. ಇವನ್ನೆಲ್ಲಾ ಒಟ್ಟಾಗಿ ಮಿಶ್ರಣಮಾಡಿ ಪೇಸ್ಟ್‌ನ ಹದಕ್ಕೆ ಸಿದ್ಧಗೊಳಿಸುತ್ತಾರೆ. ಈ ಪೇಸ್ಟ್‌ನ್ನು ಮೂಳೆ ಮುರಿದ ಜಾಗಕ್ಕೆ ಹಚ್ಚಿ ಬೆತ್ತದ ಕಡ್ಡಿಗಳಿಂದ ಮುರಿದ ಮೂಳೆಗಳಿಗೆ ಆಧಾರ ಕೊಟ್ಟು ಬಿಗಿಯಾಗಿ ಪಟ್ಟು ಹಾಕುತ್ತಾರೆ. ಮೂರು ದಿನಗಳ ನಂತರ ಈ ಬ್ಯಾಂಡೇಜ್ ಬಿಚ್ಚಿ ಇನ್ನೊಂದು ಬ್ಯಾಂಡೇಜ್ ಹಾಕುತ್ತಾರೆ. ಎರಡನೆಯ ಬಾರಿ ಹಾಕಿದ ಬ್ಯಾಂಡೇಜನ್ನು ಸುಮಾರು ಒಂದು ತಿಂಗಳ ನಂತರ ಬಿಚ್ಚುತ್ತಾರೆ. ಹೀಗೆ ಮಾಡುವುದರಿಂದ ಮುರಿದ ಮೂಳೆ ಒಟ್ಟು ಸೇರುವುದಂತೆ.

ಮೂಲ : ಹನಿಬೀ.ಸಂ.9(4) 1998



5. ಕೋಳಿ ಹೇನುಗಳನ್ನು ನಿವಾರಿಸುವ ಕ್ರಮ :

ಜೂನ್ - ಜುಲೈ ತಿಂಗಳುಗಳಲ್ಲಿ ಕೋಳಿಗಳಿಗೆ ವಿಪರೀತ ಹೇನುಗಳು ಬೀಳುತ್ತವೆ. ಕೋಳಿಗಳ ಮರಿಗಳಿಗಂತೂ ಈ ಹೇನುಗಳ ಕಾಟ ವಿಪರೀತ. ಮೈಗೆ ಅಂಟಿಕೊಂಡು ರಕ್ತ ಹೀರುವ ಈ ಹೇನುಗಳಿಂದ ಸಣ್ಣ ಮರಿಗಳು ಸಾಯುವುದೂ ಉಂಟು. ಹೇನುಗಳು ಬಿದ್ದಾಗ ಕೋಳಿಮರಿಗಳ ಕಣ್ಣಿನ ರೆಪ್ಪೆ ಕೆಂಪಾಗಿರುತ್ತದೆ. ಅವು ತೂಕಡಿಸುತ್ತಾ ಹಾಗೇ ಸಾಯುತ್ತವೆ.

ಈ ಹೇನುಗಳನ್ನು ಸಾಯಿಸಲು ಕೋಳಿ ಗೂಡಿನ ಪಕ್ಕದಲ್ಲಿ ಬೆಂಕಿಹಾಕಿ ಅದರ ಮೇಲೆ ಉರುಗಲಿ (*Chloroxylon switenia*) ಸೊಪ್ಪು ಹಾಕಿದರೆ ಹೊಗೆ ಮತ್ತು ವಾಸನೆ ದಟ್ಟವಾಗಿ ಹರಡಿ ಹೇನುಗಳು ಸಾಯುತ್ತವೆ. 3 ರಿಂದ 4 ದಿವಸ ಈ ರೀತಿ ಮಾಡಿದರೆ ಕೋಳಿ ಗೂಡಿನಲ್ಲಿರುವ ಹೇನುಗಳು ಸಂಪೂರ್ಣ ನಾಶವಾಗುತ್ತವೆ.

-ಮಾಹಿತಿ : ರಾಜಶೇಖರ ಹೊನ್ನಿಗನಹಳ್ಳಿ
ಸಂಗ್ರಹ : ಚಂದ್ರು

ಕರು ಮರೆತ ಹಸುಗಳಿಗೆ ರೈತರ ಚಿಕಿತ್ಸೆ : ಮುಡಿಹಾಕುವುದು

ಮಾಹಿತಿ : ವೀರಭದ್ರಪ್ಪ, ಪ್ರಸನ್ನಯ್ಯ, ಸಿದ್ದಪ್ಪನ ದೊಡ್ಡಿ
ಸಂಗ್ರಹ: ಮಲ್ಲಿಕಾರ್ಜುನ, ಗ್ರೀನ್ ಪ್ರತಿಷ್ಠಾನ, ಮಾರುಪಲ್ಲಿ, ತಳಿ.

ಕೆಲವು ಹಸು, ಎಮ್ಮೆಗಳು ಮೊದಲ ಸಲ, ಅಂದರೆ ಮೊದಲಬಾರಿಗೆ ಕರುಹಾಕಿದಾಗ ಕರುವಿಗೆ ಹಾಲುಕುಡಿಸದೆ. ಕರುವಿನ ಮೈ ನೆಕ್ಕದೆ ಮೊಂಡು ಹಿಡಿಯುತ್ತವೆ. ಕೆಚ್ಚಲಿಗೆ ಕೈಹಾಕಿದರೆ ಕಾಲು ಝಾಡಿಸಿ ಅತ್ತಿತ್ತ ಓಡಾಡುತ್ತಾ ರಂಪಾಟ ಮಾಡುತ್ತವೆ. ಇದು ಪಶು ಪಾಲಕರಿಗಿಂತಲೂ ಎಳೆಯದಾದ ಕರುವಿನ ದೃಷ್ಠಿಯಿಂದ ಬಹು ಅಪಾಯಕಾರಿ. ಪಶುವೈದ್ಯರಲ್ಲಿ ಇದಕ್ಕೆ ಯಾವ ಬಗೆಯ ಚಿಕಿತ್ಸೆಯೂ ಇದ್ದಂತೆ ಕಾಣೆ. ಆದರೆ ನಮ್ಮ ರೈತರಲ್ಲಿ ಈ ಹಠಮಾರಿ ಹಸುಗಳನ್ನು ಸರಿದಾರಿಗೆ ತರುವ ಸುಲಭ ಮತ್ತು ವಿಶೇಷವಾದ ವಿಧಾನವೊಂದು ಬಳಕೆಯಲ್ಲಿದೆ. ಕನಕಪುರ-ಡೆಂಕಣಕೋಟೆ ತಾಲ್ಲೂಕುಗಳ ಕಾಡುಹಳ್ಳಿಗಳಲ್ಲಿ ಈಗಲೂ ಉಳಿದುಕೊಂಡಿರುವ ಇದನ್ನು "ಮುಡಿ ಹಾಕುವುದು" ಎನ್ನುತ್ತಾರೆ.

25 ರಿಂದ 30 ಈಜಿ ಅಥವ ನಾರ್ವೆ (*Premna olotusitolia*) ಎಲೆಗಳನ್ನು ತಂದು ಸುಮಾರು 2 ಬಿಂದಿಗೆ (10 ರಿಂದ 15 ಲೀಟರ್) ಮಜ್ಜಿಗೆಯಲ್ಲಿ ನೆನೆಹಾಕಿ ಅದಕ್ಕೆ ಈರುಳ್ಳಿ, ಬೆಳ್ಳುಳ್ಳಿ, ಜೀರಿಗೆ, ಅರಿಶಿನ, ಮೆಣಸು, ಉಪ್ಪು, ಇವನ್ನೆಲ್ಲಾ ಸ್ವಲ್ಪ ಸ್ವಲ್ಪ ಪ್ರಮಾಣದಲ್ಲಿ ಚೆನ್ನಾಗಿ ಕುಟ್ಟಹಾಕಿ ಬೆರೆಸಬೇಕು. ಇಡೀ ಒಂದು ಹಗಲು ಕರುವನ್ನು, ಹಸು/ಎಮ್ಮೆಯ ಕಣ್ಣಿಗೆ ಕಾಣದಂತೆ ಬಚ್ಚಿಟ್ಟು ರಾತ್ರಿ ಚೆನ್ನಾಗಿ ಕತ್ತಲಾದ ನಂತರ ಎಲ್ಲರೂ ಮಲಗಿದ ಮೇಲೆ ನಿಶ್ಯಬ್ಧ ವಾತಾವರಣದಲ್ಲಿ ಇಬ್ಬರು ಈ ವಿಧಾನದಲ್ಲಿ ಚೆನ್ನಾಗಿ ಅನುಭವವಿರುವವರು (ನಾಟೀ ವೈದ್ಯರಾದರೆ ಒಳ್ಳೆಯದು) ಸೇರಿಕೊಂಡು ಮಜ್ಜಿಗೆಯಲ್ಲಿ ನೆನೆಹಾಕಿದ್ದ ಎಲೆಗಳನ್ನು ವೀಳ್ಯದೆಲೆ ಕಟ್ಟನಂತೆ ಜೋಡಿಸಿ ಕಟ್ಟಿ ಹಸು/ಎಮ್ಮೆಯ ಕಣ್ಣುಗಳನ್ನು ಭದ್ರವಾಗಿ ಮುಚ್ಚಿಕೊಂಡು ಈಜಿ ಎಲೆಯ ಕಟ್ಟನ್ನು ನಿಧಾನವಾಗಿ ಯೋನಿಯೊಳಕ್ಕೆ(ಮಡಿಲು) ತೂರಿಸಿ ಮೆಲ್ಲಗೆ ಈಚೆ ಎಳೆಯಬೇಕು. ನಂತರ ಬಚ್ಚಿಟ್ಟಿದ್ದ ಕರುವನ್ನು ತಂದು ಈಜಿ ಎಲೆಗಳನ್ನು ನೆನೆಹಾಕಿದ್ದ ಮಜ್ಜಿಗೆಯನ್ನು ಕರುವಿನ ಮೈಮೇಲೆ ಸುರಿದು ಹಸು/ಎಮ್ಮೆಯ ಮುಂದೆ ನಿಲ್ಲಿಸಿ ಅದರ ಮುಚ್ಚಿದ್ದ ಕಣ್ಣುಗಳನ್ನು ಬಿಡಬೇಕು. ಇದರಿಂದ ಜಾನುವಾರುಗಳಿಗೆ ಹೊಸದಾಗಿ ಕರುಹಾಕಿದಂತೆ ಅನುಭವವಾಗುವುದಲ್ಲದೆ ಮೈಮೇಲೆ ಉಪ್ಪು, ಮಸಾಲೆ ಪದಾರ್ಥಗಳನ್ನು ಬೆರೆಸಿದ ಮಜ್ಜಿಗೆಯನ್ನು ಹುಯ್ದುಕೊಂಡ ಕರುವಿನ ಮೈ ಉಪ್ಪುಪ್ಪಾಗಿ ಇರುವುದರಿಂದ ಜಾನುವಾರು ಅದನ್ನು ನೆಕ್ಕುತ್ತಾ ನೆಕ್ಕುತ್ತಾ ಅದು ತನ್ನ ಕರುವೆಂದು ಗುರುತಿಸಿ ಹಾಲುಕುಡಿಸುತ್ತದೆ.

ಈ ಮುಡಿಹಾಕುವ ವಿಧಾನ ಇಡೀ ದಿನ ನಡೆಯುವ ಕ್ರಿಯೆ. ಇದು ಎಂತಹ ಖಾಯಿಲೆಗಳನ್ನೂ, ಸನ್ನಿವೇಶಗಳನ್ನೂ ಎದುರಿಸಲು, ಪರಿಹರಿಸಿಕೊಳ್ಳಲು ನಮ್ಮ ಗ್ರಾಮೀಣ ಜನತೆ ಕಂಡುಕೊಂಡ ಬಂದಂತಹ ಯಶಸ್ವಿ ಕ್ರಮಗಳೆನ್ನಬಹುದು.



ಈಗೀಗ ಕಾಲ ಬದಲಾಗುತ್ತಿದೆ. ಪಶು ಸಹಜ ಕ್ರಿಯೆಗಳಾದ ಮಮತೆ, ಸಿಟ್ಟು, ಸೆಡವು, ಒದೆಯುವಿಕೆ ಮುಂತಾದವುಗಳನ್ನು ಹೊಂದಿರುವ ನಾಟೀ ಹಸು / ಎಮ್ಮೆಗಳ ಬದಲು ಕೇವಲ ಹಿಂಡಿ-ಬೂಸಾ ತಿನ್ನುವ, ಹಾಲು ಕರೆಯುವ ಯಂತ್ರಗಳಂತಿರುವ ಹೈಬ್ರಿಡ್ ತಳಿಗಳ ಪ್ರವೇಶದಿಂದಾಗಿ ಇಂತಹ ಹಲವಾರು ಸ್ಥಳೀಯ ವಿಧಾನಗಳು ಕಡಿಮೆಯಾಗುತ್ತಿವೆ. ಇನ್ನೂ ಹಲವಾರು ನಿರ್ನಾಮವೇ ಆಗಿಬಿಟ್ಟಿವೆ.

★ ★ ★

ಗಂಟುಗಳಲ್ಲಿ ಊತ :


ಜಾನುವಾರಗಳ ಕಾಲಿನ ಗೊರಸಿನ ಮೇಲಿನ ಗಂಟುಗಳಲ್ಲಿ ಊತ ಬಂದಿದ್ದು, ಓಡಾಡಲು ಆಗುವುದಿಲ್ಲ. ಇದಕ್ಕೆ ಬೇಲ (Wood Apple - *Feromia elephanta*) ಕೆಂಡದಲ್ಲಿ ಬೇಯಿಸಿ, ಒಡೆದು, ಒಳಗಿರುವ ತಿರುಳನ್ನು ಊದಿದ ಜಾಗಕ್ಕೆ ಹಚ್ಚಬೇಕು. ನಂತರ ಬಟ್ಟೆಯನ್ನು ಕಟ್ಟಿದರೆ, ಕೆಲಕಾಲದಲ್ಲಿ ಗುಣವಾಗಬಹುದು.

ಸಂಗ್ರಹ : ಕೆ. ಮಧು, 10ನೇ ತರಗತಿ, ಕನಕಪುರ.
ಮಾಹಿತಿ : ಶ್ರೀ ನಾರಾಯಣಗೌಡರು, ದೊಡ್ಡ ಮರಳವಾಡಿ.

1. ಆಧುನಿಕ ಬೆರ್ಚಪ್ಪ :

ಗದ್ದೆಯ ಮಧ್ಯದಲ್ಲಿ ನಿಂತ ಬೆರ್ಚಪ್ಪನನ್ನು ರಾತ್ರಿಯಲ್ಲಿ ನೋಡಿ ದೆವ್ವವೆಂದು ಓಡಿದ್ದು ನಾವು ಸಣ್ಣವರಾಗಿದ್ದಾಗಿನ; ಆಧುನಿಕತೆಯ ಗಾಳಿ ಈಗಿನಷ್ಟು ವೇಗವಾಗಿ ಬೀಸದೇ ಇದ್ದಕಾಲದ ಕಥೆ. ಕಾಲಕ್ಕೆ ತಕ್ಕ ಕೋಲ. ಆಧುನಿಕ ಕಾಲಕ್ಕೆ ತಕ್ಕಂತೆ ಆಧುನಿಕ ಬೆರ್ಚಪ್ಪನನ್ನು ರೂಪಿಸಿದ್ದಾರೆ; ಗುಜರಾತಿನ ಪ್ರಾಥಮಿಕ ಶಾಲೆಯೊಂದರಲ್ಲಿ ಅಧ್ಯಾಪಕರಾಗಿರುವ ಕಾಂತೀಬಾಯಿ ಪಟೇಲ್‌ರವರ ನೇತೃತ್ವದಲ್ಲಿ, ಅವರೂ ಜೊತೆಗೆ ಅವರ ಇನ್ನಿಬ್ಬರು ವಿದ್ಯಾರ್ಥಿ ಮಿತ್ರರಾದ ಜಯೇಶ್ ಪಟೇಲ್ ಹಾಗೂ ಸಚಿನ್ ಪಟೇಲ್ ಒಟ್ಟಾಗಿ.

ಹಳೆಯದಾದ ತಗಡಿನ ಡಬ್ಬದಲ್ಲಿ ಮನುಷ್ಯನ ಮುಖ ಹಾಗೂ ತಲೆ ರೂಪಿಸಿದ್ದಾರೆ. ಡಬ್ಬದ ತಗಡಿನ ಚೂರುಗಳನ್ನು ಕೈಯ ಬೆರಳುಗಳಂತೆ ಅಲಂಕರಿಸಿದ್ದಾರೆ. ಈ ಬೆರ್ಚಪ್ಪನ ತಲೆಯ ಮೇಲೊಂದು ಬೇರಿಂಗ್, ಅದಕ್ಕೆ ಅಂಟಿಕೊಂಡು ತಿರುಗುವ ತಗಡಿನ ರೆಕ್ಕೆಗಳು. ಆ ರೆಕ್ಕೆಗಳಿಗೆ ಗಂಟೆ ಕಟ್ಟಿದ್ದಾರೆ. ಇನ್ನು ಬೆರ್ಚಪ್ಪನ ಅಲಂಕಾರವೋ ? ಒಡೆದ ಗಾಜಿನ ಚೂರುಗಳನ್ನು ಮೈತುಂಬಾ ಅಂಟಿಸಿದ್ದಾರೆ. ಉಳಿದಂತೆ ಹೊಳೆಯುವ ಹಳದಿ ಬಣ್ಣ. ಗಾಜಿಗೆ ಬಿದ್ದು ಪ್ರತಿಫಲಿಸುವ ಬೆಳಕು ಹಕ್ಕಿಗಳನ್ನು ಓಡಿಸುತ್ತದೆ. ತಲೆಯ ಮೇಲೆ ತಿರುಗುವ ರೆಕ್ಕೆಗಳು, ತಗಡಿನ ಬೆರಳಿಗೆ ತಗಲಿ ಅದು ಮಾಡುವ ಶಬ್ದ, ಜೊತೆಗೆ ಗಂಟೆಯ ಶಬ್ದ. ಇವೆಲ್ಲಾ ಕಾಡುಪ್ರಾಣಿಗಳನ್ನು ಓಡಿಸಲು ಬೇಕಾದಷ್ಟಾಯಿತು. ಇಷ್ಟು ಸಾಲದೆ ರಾತ್ರಿ ಈ ಡಬ್ಬದಲ್ಲಿ ದೀಪ ಹಚ್ಚಿದರೆ ದೀಪದ ಬೆಳಕಿಗೆ ಆಕರ್ಷಿತವಾಗಿ ಬಂದು, ಬೆಂಕಿಗೆ ಬಿದ್ದು ಇನ್ನಷ್ಟು ಹುಳುಗಳು ಸಾಯುತ್ತವೆ. ಹೀಗೆ ಬೆರ್ಚಪ್ಪನ ಪರಿಪೂರ್ಣ ಕಾವಲು.



2. ಮೀನಿಗೆ ಮತ್ತು !

ಹಿಂದಿನ ಸಂಚಿಕೆಯಲ್ಲಿ [3(4) 1998] ಮೀನಿಗೆ ಮತ್ತು ಬರಿಸಿ ಅದನ್ನು ಹಿಡಿಯುವ ಕರ್ನಾಟಕ ಜನರ ದೇಶೀಯ ಜಾಣ್ಮೆಯ ಬಗ್ಗೆ ಓದಿದ್ದೀರಿ. ಅದೇರೀತಿಯ ಒಂದು ವಿಧಾನ ಗುಜರಾತಿನ ಸುಕಾ ಬಾಯಿ ಕಾನಾಭಾಯಿಯವರದ್ದೂ ಕೂಡ.

ಇಂಗಳೀಕ ಅಥವಾ ಇಂಗಳದ ಮರದ *(Balanites roxburghii)* ಹಣ್ಣನ್ನು ನೀರಿಗೆ ಎಸೆಯುತ್ತಾರೆ. ಹಣ್ಣು ತಿಂದ ಮೀನಿಗೆ ಮತ್ತೇರಿ ತಲೆ ತಿರುಗುತ್ತದೆ. ಎಚ್ಚರ ತಪ್ಪಿ ತೇಲಾಡ ತೊಡಗುತ್ತದೆ. ಸುಕಾಬಾಯಿಯವರು ಆಗ ತಾನೇ ಕೊಯ್ದ ಹಣ್ಣು ಸಿಗದ ಸಮಯದಲ್ಲಿ ಒಣಗಿದ ಹಣ್ಣುಗಳನ್ನು ಕೂಡಾ ಉಪಯೋಗಿಸುತ್ತಾರಂತೆ. ಅವರ ಅನುಭವದ ಪ್ರಕಾರ ಹೆಚ್ಚು ಹೆಚ್ಚು ಹಣ್ಣು ನೀರಿಗೆ ಎಸೆದಂತೆ ಹಿಡಿಯಲು ಸಿಗುವ ಮೀನುಗಳ ಪ್ರಮಾಣವು ಹೆಚ್ಚುತ್ತದೆ.

3. ಭತ್ತದ ಬೀಜಮೊಳಕೆ ಬರಿಸುವುದು :

ಸಸಿಮಡಿಯಲ್ಲಿನ ಭತ್ತದ ಸಸಿಗಳು ಕೊಳೆತೋ, ರೋಗಪೀಡಿತವಾಗಿಯೋ ಒಟ್ಟಾರೆ ನಾಟಿ ಸಮಯದಲ್ಲಿ ಸಾಕಷ್ಟು ಸಸಿಗಳು ಸಿಗದೆ ರೈತರು ಒದ್ದಾಡುವುದುಂಟು. ಮಹಾರಾಷ್ಟ್ರದ ಕೊಂಕಣ ಪ್ರಾಂತ್ಯದ ಜನರು ಇಂತಹ ಸಮಯದಲ್ಲಿ ಏನು ಮಾಡುತ್ತಿದ್ದರಂತೆ ಗೊತ್ತೇ ? ರಾತ್ರಿಯಿಡೀ ಭತ್ತವನ್ನು ನೀರಿನಲ್ಲಿ ನೆನೆಸಿಡುತ್ತಾರಂತೆ. ನಂತರ ಬೀಜಗಳನ್ನು ಕಟ್ಟಿ ಭಾರ ಹೇರುತ್ತಾರಂತೆ. ಗಂಟಿನೊಳಗೆ ಶಾಖ ಹೆಚ್ಚಾಗಿ ಬೀಜಗಳು ಮೊಳಕೆಯೊಡೆಯುತ್ತವೆ. ಹೀಗೆ ಮೊಳಕೆಯೊಡೆದ ಬೀಜಗಳನ್ನು ಗದ್ದೆಯಲ್ಲಿ ಎರಚುತ್ತಾರಂತೆ.

ಅಷ್ಟೇ ಅಲ್ಲ, ಅಲ್ಲಿನ ಜನರ ಅನುಭವದ ಮಾತು ಕುತೂಹಲಭರಿತವಾದದ್ದು. ಸಸಿ ನಾಟಿ ಮಾಡುವ ಮೊದಲು ಅದರ ಬೇರುಗಳನ್ನು ಚೆನ್ನಾಗಿ ತಿಕ್ಕಿ ಬಿಳಿಮಾಡಿದರೆ, ಅಂತಹ ಸಸ್ಯಗಳಿಂದ ಬರುವ ಅಕ್ಕಿ ಕೂಡಾ ಅಚ್ಚ ಬಿಳುಪಂತೆ !

ಮೂಲ: ಹನೀಬೀ 9(4) 1998

4. ಹನಿ ನೀರಾವರಿಗೆ ತೂತು ಮಡಿಕೆಗಳು :

ಮಡಿಕೆಗೆ ನೀರು ತುಂಬಿಸಿ ನೀರಾವರಿಗೆ ಬಳಸುವುದು ಈಗಾಗಲೇ ಅನೇಕರಿಗೆ ಗೊತ್ತಿರುವ ನೀರಾವರಿ ವಿಧಾನ. ತಿಪಟೂರಿನ ರೈತರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಈ ತೂತು ಮಡಕೆಗಳನ್ನು ಮಣ್ಣಿನಲ್ಲಿ ಹೂತಿಟ್ಟಿದ್ದಾರೆ. ಭೂಮಿಯ ಮೇಲ್ಗಡೆ ಮಡಿಕೆ ಇಟ್ಟಾಗ ವಾರಕ್ಕೊಮ್ಮೆ ನೀರು ತುಂಬ ಬೇಕಿತ್ತಂತೆ. ಆದರೆ ಈಗ ಭೂಮಿಯಲ್ಲಿ ಹುಗಿದಿಟ್ಟ ಮಡಿಕೆಗೆ 15 - 20 ದಿನಗಳಿಗೊಮ್ಮೆ ನೀರು ಹಾಕಿದರೂ ಸಾಕಂತೆ. ಅಷ್ಟೇ ಅಲ್ಲ, ಹೀಗೆ ಭೂಗತವಾದ ನಂತರ ಜಾನುವಾರಗಳ ಕಾಲಿಗೆ ತಗಲಿ ಮಡಿಕೆಗಳು ಒಡೆಯುವ ಸಮಸ್ಯೆಯೂ ದೂರವಾಗಿದೆಯಂತೆ.

- ಮೂಲ ಲೇಖನ: ಶಿವಾನಂದ ಕಳವೆ

ಕೃಪೆ: ಪ್ರಜಾವಾಣಿ 24-2-1999

ಧಾನ್ಯ ಸಂರಕ್ಷಣೆ

ಕಾಳುಗಳೆ ನಿಮಗಿಲ್ಲವಿನ್ನು ಕೀಟಗಳ ಕಾಟ

1. ತೊಗರಿ, ಅವರೆ ಮೊದಲಾದ ದ್ವಿದಳ ಧಾನ್ಯಗಳಿಗೆ ಸಂಗ್ರಹಣ ಕೀಟ (Storage pests) ಜಾಸ್ತಿ. ಹಸುವಿನ ಗಂಜಲದಲ್ಲಿ ಬಿತ್ತನೆ ಬೀಜಗಳನ್ನು ತೊಳೆದು, ನೆರಳಲ್ಲಿ ಒಣಗಿಸಿ ಸಂಗ್ರಹಿಸಿಟ್ಟರೆ ಕೀಟಗಳ ಕಾಟ ಇರುವುದಿಲ್ಲ.

2. ಆರಕ (Kodomillet) ದ ಜೊತೆಯಲ್ಲಿ ದ್ವಿದಳ ಧಾನ್ಯಗಳನ್ನು ಸಂಗ್ರಹಿಸಿಟ್ಟರೆ ಹುಳು ಬೀಳುವುದಿಲ್ಲ.

3. ಹರಳು ಬೀಜಗಳನ್ನು ಹುಳು ಬೀಳುವ ಯಾವುದೇ ಬೀಜಗಳ ಜೊತೆ ವಿಶೇಷವಾಗಿ ಅಲಸಂದೆ, ಅವರೆ ಮತ್ತು ತೊಗರಿಯ ಜೊತೆ ಬೆರೆಸಿ ಇಡುವುದರಿಂದ ಹುಳುಗಳ ಕಾಟವನ್ನು ನಿವಾರಣೆ ಮಾಡಿಕೊಳ್ಳಬಹುದು.

ಮಾಹಿತಿ : ಭೂತಲಿಂಗಪ್ಪ, ದ್ಯಾವರ ಹಳ್ಳಿ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ

4. ತೊಗರಿ ಬೀಜಗಳಿಗೆ ಸಂಗ್ರಹಣಾ ಕೀಟಗಳ ಹಾವಳಿ ತೀರಾ ಜಾಸ್ತಿ. ಇದರ ನಿವಾರಣೆಗೆ ರೈತರೇ ಕಂಡುಕೊಂಡ ಸುಲಭ ಪರಿಹಾರ ಹೀಗಿದೆ. ತೊಗರಿ ಬೀಜಗಳನ್ನು ಚೆನ್ನಾಗಿ ಬಿಸಿಲಲ್ಲಿ ಒಣಗಿಸಿ. ರಾತ್ರಿ ಪೂರ್ತಿ ಬಯಲಲ್ಲೆ ಬಿಡಬೇಕು. ಮುಂಜಾನೆ ಇಬ್ಬನಿಯಲ್ಲಿ ನೆನೆದ ಮರಳನ್ನು ಮಣ್ಣಿನ ಕುಡಿಕೆಯ ತಳಭಾಗದಲ್ಲಿ ಸ್ವಲ್ಪ ಹಾಕಿ ಅದರ ಮೇಲೆ ತೊಗರಿ ಬೀಜ ಹರಡಬೇಕು. ನಂತರ ಬೀಜದ ಮೇಲೆ ಮತ್ತಷ್ಟು ಮರಳು ತುಂಬಿ ಎತ್ತಿಟ್ಟರೆ ಕೀಟಗಳ ಕಾಟ ಇರುವುದಿಲ್ಲ.

5. ಹರಳು ಬೀಜಗಳನ್ನು ಹುರಿದು, ಕುಟ್ಟಿದ ಪುಡಿಯಿಂದ ತೊಗರಿ ಬೀಜಗಳನ್ನು ತಿಕ್ಕಿ ಸಂಗ್ರಹಿಸಿದರೆ, ಹುಳು ಬೀಳುವುದಿಲ್ಲ.

ಮಾಹಿತಿ : ಗೌರಮ್ಮ, ಗೊಲ್ಲಪಲ್ಲಿ, ತಳಿ, ತಮಿಳು ನಾಡು.

ಸಂಗ್ರಹ : ಜಿ. ಕೃಷ್ಣಪ್ರಸಾದ್

6. ಭತ್ತದ ಹೊಟ್ಟನ್ನು ರಾಶಿ ಮಾಡಿ ಅದರ ಮೇಲೆ ಉರಿಯುತ್ತಿರುವ ಸೆಗಣಿಯ ಬೆರಣಿಯನ್ನಿಡಬೇಕು. ಭತ್ತದ ಹೊಟ್ಟಿನ ರಾಶಿ ಹಾಗೇ ನಿಧಾನವಾಗಿ ಉರಿದು ಭಸ್ಮವಾಗುತ್ತದೆ. ಹೀಗೆ ಹೊತ್ತಿ ಉರಿದ ಹೊಟ್ಟಿನ ರಾಶಿ ತಣ್ಣಗಾಗಲು ಬಿಡಬೇಕು. ಅನಂತರ ಮೇಲ್ಭಾಗದ ಕಪ್ಪು ಬೂದಿಯನ್ನು ಬಿಸಾಕಿ, ಮಧ್ಯದ ಬಿಳಿ ಬೂದಿಯನ್ನು ಸೂರ್ಯನ ಬಿಸಿಲಿನಲ್ಲಿ ಒಣಗಿಸಬೇಕು. ಹೀಗೆ ಒಣಗಿದ ಬೂದಿಯನ್ನು ಬೀಜ ಅಥವಾ ದಾನ್ಯದೊಂದಿಗೆ ಬೆರೆಸಿ ಶೇಖರಿಸಿದರೆ, ಕೀಟಗಳ ಕಾಟ ಕಡಿಮೆಯಾಗುವುದಂತೆ.

ಮೂಲ : ಪನಿಬೀ 9(4) : 1998

'ಮೂಡೆ' - ಕಾಳು ಸಂಗ್ರಹಣೆಯ ಪರಂಪರಾಗತ ವಿಧಾನ

ರೈತರು ಬೆಳೆದ ದವಸಧಾನ್ಯಗಳಿಗೆ ಕ್ರಿಮಿ-ಕೀಟಗಳ ಹಾವಳಿ ಹೆಚ್ಚು. ಅದರಲ್ಲಿಯೂ ಕಾಳುಗಳಿಗೆ ವಿಪರೀತ. ಇವುಗಳಿಂದ ರಕ್ಷಿಸಲು ರೈತರು ತಮ್ಮದೇ ಆದ ಹಲವಾರು ವಿಧಾನಗಳನ್ನು ಹಿಂದಿನಿಂದ ಬಳಸುತ್ತಿದ್ದಾರೆ. ಅವುಗಳಲ್ಲಿ ಮೂಡೆಕಟ್ಟುವ ವಿಧಾನವೂ ಒಂದಾಗಿದ್ದು; ರಾಗಿ ಬೆಳೆಯುವ ಬಹುತೇಕ ಎಲ್ಲಾ ಕಡೆ ಇದು ಸಾಮಾನ್ಯ. ತುಂಬಾ ಸುರಕ್ಷಿತ ಮತ್ತು ಕಡಿಮೆ ಖರ್ಚಿನದೂ ಸಹ.

ಮೂಡೆಯನ್ನು ಭತ್ತದ ಹುಲ್ಲು, ಅರ್ಕ (Kodomillet) ದ ಹುಲ್ಲು, ಕಾಡು ಹಂದಿ ಹುಲ್ಲು, ಬಿದಿರು, ಜೊಂಡು ಮುಂತಾದವುಗಳಿಂದ ರೈತರೇ ನಿರ್ಮಿಸಿಕೊಳ್ಳುತ್ತಾರೆ. ಮೂಡೆ ಕಟ್ಟುವುದು ಎಲ್ಲರಿಗೂ ಬರುವುದಿಲ್ಲ. ಕೇವಲ ಅನುಭವ ಇರುವವರು ಮಾತ್ರ ಕಟ್ಟಲು ಸಾಧ್ಯ. ಅದನ್ನು ಕಟ್ಟುವ ವಿಧಾನ ಹೀಗಿದೆ.

ನಾಲ್ಕೈದು ಅಡಿ ಉದ್ದದ ಮೂರು ಕಟ್ಟುಗಳನ್ನು ಒಂದು ಅಡಿ ಅಂತರದಲ್ಲಿ ಹಾಸಿ ಮೇಲೆ ಒಂದು ಇಂಚು ದಪ್ಪ ನೆನೆಸಿದ ಹುಲ್ಲನ್ನು ಹರಡಿ ಮಧ್ಯೆ ಬಿದಿರಿನ ಸುಂಟವನ್ನು ಇಟ್ಟು ಹುಲ್ಲಿನ ಸಮೇತ ಹಾಸಿಗೆ ಸುತ್ತಿದಂತೆ ಸುತ್ತುತ್ತಾರೆ.

(ಸುಂಟ = ಬಿದಿರಿನಲ್ಲಿ ಹೆಣೆದ ಎರಡೂ ಕಡೆ ಬಾಯಿಯಿರುವ ಒಂದು ಅಡಿ ವ್ಯಾಸದ ಎರಡು, ಎರಡೂವರೆ ಅಡಿ ಉದ್ದದ ಕೊಳವೆ)

ಸುತ್ತಿದ ನಂತರ ಒಂದು ಬಿದಿರಿನ ಬುಟ್ಟಿಯನ್ನು ಬೋರಲು ಹಾಕಿ ಅದರ ಮೇಲೆ ನಿಲ್ಲಿಸಿ; ಮೇಲಿನ ಹುಲ್ಲನ್ನು ಕೊಳವೆಯ ಒಳಕ್ಕೆ ಮಡಿಚಿ ಅದರ ಮೇಲೆ ನೆನೆಸಿದ ಜೊಂಡನ್ನು ಬುಡಕಟ್ಟಿ ನಿಲ್ಲಿಸಿ ಸಮಾನಾಗಿ ಸುತ್ತಲೂ ಹರಡುತ್ತಾರೆ. ನಂತರ ಅದನ್ನು ತಲೆಕೆಳಗು ಮಾಡಿ ನೆಲದ ಮೇಲೆ ನಿಲ್ಲಿಸಿ ತಳಕ್ಕೆ ರಾಗಿ ಹೊಟ್ಟನ್ನು ಸುರಿದು ತಾವು ಹಾಕುವ ಕಾಳಿಗೆ ಮೆಣಸಿನಕಾಯಿ, ಉಪ್ಪು ನೀರು ಬೆರೆಸಿ ಮೂಟೆಗೆ ಹುಯ್ಯುತ್ತಾ ಒನಕೆಯಿಂದ ಒಳಗೆ ಎಲ್ಲಾ ಕಡೆ ಸರಿಯಾಗಿ ಕಾಳು ಹರಡುವಂತೆ ಕುಟ್ಟುತ್ತಾ ಒಳಗಿನ ಸುಂಟವನ್ನು ಮೂಡೆ ತುಂಬಿದಂತೆ ನಿಧಾನವಾಗಿ ಹೊರಗೆ ಎಳೆಯುತ್ತಾರೆ. ಮೇಲ್ಭಾಗದಲ್ಲಿ ಮತ್ತೆ ರಾಗಿ ಹೊಟ್ಟು ಸುರಿದು ಹುಲ್ಲು ಜೊಂಡಿನಿಂದಲೇ ಬಿಗಿಯಾಗಿ ಬಾಯಿ ಕಟ್ಟುತ್ತಾರೆ.

ಈಗ ಮೂಡೆಯನ್ನು ಮಲಗಿಸಿ ಕಟ್ಟುಗಳನ್ನು ಬಿಗಿಮಾಡಲು ಅದು ಕಣ ಕಣ ಸದ್ದು ಬರುವವರೆಗೂ ಕಟ್ಟಿಗೆ ತುಂಡಿನಿಂದ ಕುಟ್ಟಿ ಮನೆಯೊಳಗೆ ಸೂಕ್ತ ಜಾಗದಲ್ಲಿಡುತ್ತಾರೆ. ಒಂದು ಮೂಡೆಗೆ ಒಂದೇ ಜಾತಿಯ ಕಾಳನ್ನಾದರೂ ಹಾಕಬಹುದು ಅಥವಾ ಪದರ-ಪದರವಾಗಿ ಎರಡು ಮೂರು ಜಾತಿ ಕಾಳು ಬೇಕಾದರೂ ಹಾಕಬಹುದು. 1 ರಿಂದ 2 ವರ್ಷ ಕಾಲ

ಮೂಡೆಯಲ್ಲಿನ ಕಾಳು ಸುರಕ್ಷಿತ ಎಂಬುದು ರೈತರ ಅಭಿಪ್ರಾಯ. ಇತ್ತೀಚೆಗೆ ಬಹುಬೆಳೆ ಪದ್ಧತಿ ನಶಿಸುತ್ತಿರುವುದರಿಂದ ಕಾಳು ಬೆಳೆಯುವುದೂ ಕಡಿಮೆ ಮೂಟೆ ಕಟ್ಟುವುದೂ ಕಡಿಮೆ.

ಸಂಗ್ರಹ: ಪ್ರಸನ್ನಯ್ಯ, ಸಿದ್ದಪ್ಪನ ದೊಡ್ಡಿ

ಹುಣಿಸೆ ಹಣ್ಣು ಸಂರಕ್ಷಿಸುವ ಕ್ರಮ :

ಮಾರ್ಚ್-ಏಪ್ರಿಲ್ ತಿಂಗಳು ಹುಣಿಸೆ ಹಣ್ಣು ಬರುವ ಕಾಲ. ವರ್ಷಪೂರ್ತಿ ಹುಣಿಸೆ ಹಣ್ಣನ್ನು ಸಂರಕ್ಷಿಸಿಡಲು ಗ್ರಾಮೀಣ ಮಹಿಳೆಯರು ಹಲವಾರು ಕ್ರಮಗಳನ್ನು ಅನುಸರಿಸುತ್ತಾರೆ. ಸುಲಭವಾದ ವಿಧಾನವೊಂದು ಹೀಗಿದೆ:

ಹುಣಿಸೆ ಹಣ್ಣನ್ನು ತೊಗಟೆ, ಬೀಜ, ನಾರುಗಳಿಂದ ಬೇರ್ಪಡಿಸಿ ಸ್ವಲ್ಪ ನೀರು ಹಾಕಿಕೊಂಡು ಒರಳಿನಲ್ಲಿ ಚೆನ್ನಾಗಿ ಕುಟ್ಟಿ ನಂತರ ಮುದ್ದೆಯಾಕಾರವಾಗಿ ಕಟ್ಟಿ ಹುಣಿಸೆಹಣ್ಣಿನ ನಾರನ್ನು ಬಲೆಯಂತೆ ಹರಡಿ ಅದರ ಮೇಲೆ ಹುಣಿಸೆ ಹಣ್ಣಿನ ಮುದ್ದೆಗಳನ್ನಿಟ್ಟು 3-4 ದಿವಸ ಮನೆಯ ಮಾಡಿನ ಮೇಲೆ ಒಣಗಿಸಬೇಕು, ನಂತರ ಎತ್ತಿ ಸಂಗ್ರಹಿಸಿ ಅಡುಗೆಗೆ ಬಳಸುತ್ತಾರೆ.

ಮಾಹಿತಿ : ರಾಜಶೇಖರ್, ಹೊನ್ನಿಗನಹಳ್ಳಿ
ಸಂಗ್ರಹ : ಚಂದ್ರು, ಹೊನ್ನಿಗನಹಳ್ಳಿ

'ಹಿತ್ತಲು' ಬೆಳಸಲು ಒಂದಿಷ್ಟು ಪ್ರೋತ್ಸಾಹ!

ಮನೆಗೆ ಅತ್ಯಗತ್ಯವಾಗಿರುವ ತರಕಾರಿ, ಹಣ್ಣು, ಹೂವು, ಔಷಧಿ ಸಸ್ಯಗಳ ಪೂರೈಕೆಗಾಗಿಯೇ ಇರುವ ಈ ಹಿತ್ತಲು ಒಂದರ್ಥದಲ್ಲಿ ಸ್ವಾವಲಂಬನೆಯ ಸಂಕೇತವಾಗಿದೆ. ಮಲೆನಾಡಿನಾದ್ಯಂತವಿರುವ ಈ ಹಿತ್ತಲುಗಳಲ್ಲಿ ಜೀವವಿವಿಧತೆ ದಟ್ಟವಾಗಿದ್ದು ಇದರ ಮೇಲ್ವಿಚಾರಣೆಯಲ್ಲಿ ಮಹಿಳೆಯರದ್ದೆ ಪ್ರಮುಖ ಪಾತ್ರವಾಗಿದೆ. ಈ ಹಿತ್ತಲಿನ ಜೀವವಿವಿದತೆಯನ್ನು ಅರಿತು ಗಟ್ಟಿಮಾಡುವ ಸಲುವಾಗಿ ಹಿತ್ತಲಗಿಡದ ಸಂಪಾದಕರಿಗೆ 'ಕೃಷಿ ವಿವಿಧತೆ ಸಂಶೋದನಾ ಬಳಕೆ'(Using Agricultural Diversity Award) ಪ್ರಶಸ್ತಿ ದೊರೆತಿರುತ್ತದೆ. ಇದರ ಮೂಲ ನಿಧಿ ಕೆನಾಡಾ ದೇಶದ International Development Research Centre ನಿಂದ ಬಂದಿದ್ದು ಇದರ ಮೇಲ್ವಿಚಾರಣೆಗೆ ಭಾರತವೂ ಸೇರಿದಂತೆ ಉಪಖಂಡದ ಇತರ ರಾಷ್ಟ್ರಗಳ 12 ಜನರ ಸಮಿತಿವೊಂದಿರುತ್ತದೆ. ಈ ಪ್ರಶಸ್ತಿ ಹಿತ್ತಲಗಿಡ ಇದುವರೆಗೂ ಎತ್ತಿ ಹಿಡಿದಿರುವ ತತ್ವಗಳಿಗೆ ದೊರೆತ ಗೌರವವಾಗಿರುತ್ತದೆ.

ಸಂ.

ಹರಳು ಬೇಯಿಸುವ ಕಲೆ

ಹರಳನ್ನು (Caster) ಬೇಯಿಸಿ ಎಣ್ಣೆ ತೆಗೆಯುವುದು ಅಪಾರ ಸಹನೆ ಮತ್ತು ಅನುಭವಗಳನ್ನು ಬೇಡುವ ಒಂದು ಕಲೆ. ಹಳ್ಳಿಗರ ಪಾಲಿಗೆ ಇದೊಂದು ಶ್ರದ್ಧಾಪೂರಕ ಆಚರಣೆ.

ಹರಳನ್ನು ಚೆನ್ನಾಗಿ ಹುರಿದು ಅಥವಾ ಬಿಸಿನೀರಲ್ಲಿ ಕುದಿಸಿ ಹಸಿ ಇರುವಾಗಲೇ ಒರಳಿನಲ್ಲಿ ಕುಟ್ಟುತ್ತಾರೆ ಅಥವಾ ಕಲ್ಲಿನ ಮೇಲೆ ಕುಟ್ಟುತ್ತಾರೆ. ನಂತರ ಅದನ್ನು ದಪ್ಪ ಉಂಡೆಗಳನ್ನಾಗಿ ಮಾಡಿ, ಅದಕ್ಕೆಂದೇ ಹೂಡಿದ ಒಲೆಯಮೇಲೆ ಅಗಲ ಬಾಯಿಯ ಪಾತ್ರೆ ಇಟ್ಟು ಅಳತೆಗೆ ತಕ್ಕ ನೀರು ಹಾಕಿ (10 ಸೇರು ಹರಳಿಗೆ 3 ಬಿಂದಿಗೆ ನೀರು) ಚೆನ್ನಾಗಿ ಕುದಿಯುವಾಗ ಉಂಡೆಗಳನ್ನು ಹಾಕಿ ಉರಿ ಜಾಸ್ತಿ ಮಾಡಿ ತಿರುವುತ್ತಾರೆ. ಉಂಡೆಗಳನ್ನು ನೀರಿಗೆ ಹಾಕುವಾಗ ಸೂರ್ಯ-ಚಂದ್ರರಿಗೆ ನೀವಳಿಸುವುದು ರೂಢಿ. ರಾತ್ರಿ 10 ಗಂಟೆಗೆ ಶುರುಮಾಡಿ ಕೆಲವರು ಬೆಳಿಗ್ಗೆ 6 ಗಂಟೆಗೆಲ್ಲಾ ಎಣ್ಣೆ ತೆಗೆದರೆ ಮತ್ತೆ ಕೆಲವರು ಬೆಳಗಿನ ಜಾವ ಶುರುಮಾಡಿ ಬಿಸಿಲೇರುವ ಹೊತ್ತಿಗೆ ಮುಗಿಸುತ್ತಾರೆ. ಅಷ್ಟು ದೀರ್ಘಕಾಲ ಬೇಕು ಎಣ್ಣೆ ಬರಲು.

ಚೆನ್ನಾಗಿ ಕಾದ ನಂತರ ನೀರಿನ ಮೇಲೆ ಹಸಿರು ಬಣ್ಣದ ಎಣ್ಣೆ ತೇಲುತ್ತದೆ. ಅದನ್ನು ಬೇರೆ ಪಾತ್ರೆಗೆ ಬಗ್ಗಿಸಿ ಕಾಯಿಸುತ್ತಾರೆ. ಪಾತ್ರೆಯ ತಳದ ಸೊಕ್ಕನ್ನು ಹಸು-ಎಮ್ಮೆಗಳಿಗೆ ಬೆನ್ನಿಗೆ ತಿಕ್ಕುತ್ತಾರೆ. ಹರಳಿಗೆ ಏಳು ಕಂಟಕ ಎಂಬ ಗಾದೆಯೇ ಇದೆ. ಎಣ್ಣೆ ಉಕ್ಕುವುದು, ಸಿಡಿಯುವುದು ಮುಂತಾದವುಗಳಿಂದ ಇದು ಅಪಾಯದ ಕೆಲಸ.

ಈ ರೀತಿ ಬೇಯಿಸಿದ ಎಣ್ಣೆ ತುಂಬಾ ಶುದ್ಧವಾದದು. ಇಡೀ ವರ್ಷ ಇಡಬಹುದು. ಹಲವಾರು ಉಪಯೋಗಗಳಿಗೆ ಬರುತ್ತದೆ. ಆದರೆ ಕಾಲ ಬದಲಾದಂತೆ ಸೂಕ್ಷ್ಮ ಪ್ರವೃತ್ತಿಯವರಾಗಿ ಇಡೀ 2 ದಿನ ತಿನ್ನುವ ಹರಳು ಬೇಯಿಸುವ ಕಲೆ ಕಡಿಮೆಯಾಗುತ್ತಿದೆ.

-ಅಶೋಕ್, ಹೇರಿದ್ಯಾಪನಹಳ್ಳಿ

'ಹಿತ್ತಲಗಿಡ'ದ ಕುಟುಂಬ

Hony Bee	ಇಂಗ್ಲೀಷ್
Nam Vazhi Velanmai	ತಮಿಳು
Lokasarvani	ಗುಜರಾತಿ
Dzongkha Honey Bee	ಭೂತಾನಿ
Thenetiga	ತೆಲುಗು
Sujh Bujh	ಹಿಂದಿ
Khoj Bhal	ಪಂಜಾಬಿ

ಹಾಸನದ ಅಗ್ನಿಯಲ್ಲಿನ ಔಷಧೀಯ ಸಸ್ಯಗಳು

ವಾಲ್ಮೀಕ ಶ್ರೀನಿವಾಸ ಅಯ್ಯಂಗಾರ್.

ಪಶ್ಚಿಮ ಘಟ್ಟದ, ನಿತ್ಯನಾಶವಾಗುತ್ತಿರುವ ನಿತ್ಯಹರಿದ್ವರ್ಣದ ಕಾಡಿನಲ್ಲಿ ಈಗಲೂ ನೈಸರ್ಗಿಕವಾಗಿ ವನಸ್ಪತಿಗಳು ಬೆಳೆಯುತ್ತವೆ ಹಾಗೂ ಜೀವ ವೈವಿಧ್ಯತೆಯಿದೆ.

ಅದರ ಸಂರಕ್ಷಣೆಗೆ ಎಲ್ಲರೂ ಕೈಗೂಡಿಸಬೇಕೆಂಬ ಕೂಗು ಎಲ್ಲೆಲ್ಲೂ ಸದಾ ಮೊಳಗುತ್ತಿರುತ್ತದೆ. ಆದರೆ, ಅದನ್ನು ಗುರುತಿಸಿ, ಸಂರಕ್ಷಿಸಿ, ಔಷಧಿ ಬಳಕೆಗೆ ಬಳಸುವಂತಹಾ ಸಂಗತಿಗಳು ನನಗೆಲ್ಲೂ ಕಂಡುಬರುತ್ತಿಲ್ಲಾ. ಈ ಜೀವ ವೈವಿಧ್ಯತೆಯನ್ನು ಕಾಪಾಡಬೇಕೆಂಬ ಕೂಗು ಹಾಕುವವರೆಷ್ಟು ಮಂದಿ ಇಲ್ಲಿನ ವಾಸ್ತವತೆಯ ಆಳವನ್ನರಿತಿರುವರೋ ನನಗಂತೂ ಗೊತ್ತಿಲ್ಲಾ. ಇನ್ನು ಇಲ್ಲಿರುವ ಮೂಲನಿವಾಸಿಗಳೋ ತಮ್ಮ ಸಾಂಪ್ರದಾಯಿಕ ಬದುಕಿಗೆ ಲವಲೇಶವೂ ಬೆಲೆಗೊಡದೆ, ಈ ಜೀವ ವೈವಿಧ್ಯತೆಯನ್ನು ನಾಶಮಾಡಿ ಕೇವಲ ಆರ್ಥಿಕ ಬೆಳೆಯಾದ ಕಾಫಿ, ಏಲಕ್ಕಿ ಮತ್ತು ಸಂಕರ ತಳಿ ಭತ್ತಗಳನ್ನು ವೈಜ್ಞಾನಿಕವಾಗಿ ಅಂದರೆ ರಾಸಾಯನಿಕಗಳ ಮೂಲಕ ಬೆಳೆಯುತ್ತಾರೆ. ಇವರಿಗೆ ಬೇರೆಲ್ಲವು ಹಳ ಅಥವಾ ಕಾಡು. ಯಾವ ಸಸ್ಯ ಅಥವಾ ಸಸ್ಯದ್ರವ್ಯವು ಸುಲಭವಾಗಿ, ಅತಿ ಶೀಘ್ರವಾಗಿ, ಅತಿ ಹೆಚ್ಚಿನ ಹಣವನ್ನು ತರಬಲ್ಲದೋ ಅದು ಮಾತ್ರ ಸಸ್ಯವು.

ಬಹುಶಃ ಮಹಾ ಸಂಪತ್ತಿನ ಜೈವಿಕ ಗೊಬ್ಬರದ ಮೂಲಗಳಾದ ತರಗು, ಸೊಪ್ಪು ಹಾಗೂ ಕಡ್ಡಿಗಳು ಬೇಸಿಗೆಯಲ್ಲಿ ಬೆಂಕಿಗೆ ಆಹುತಿಯಾಗುತ್ತವೆ. ಇದು ತಪ್ಪಿದರೆ, ಮಳೆಗೆ ಸಿಲುಕಿ ಹೊಳೆ ಸೇರಿ, ಬೇರೆಲ್ಲೋ ಸೇರುತ್ತವೆ. ಈ ನೈಸರ್ಗಿಕ ಸಸ್ಯಗಳು ಮಳೆಗಾಲದಲ್ಲಿ ಹುಟ್ಟುತ್ತಲೆ ಕೆಲಸಗಾರರ ದಬ್ಬೆ-ಕತ್ತಿಗಳ ಹೊಡೆತಕ್ಕೆ ಸಿಕ್ಕಿ ಬಾಲ್ಯಮರಣವನ್ನಪ್ಪುತ್ತವೆ. ಇಲ್ಲಿ ಈ ರೀತಿ ಬಾಲ್ಯಮರಣವನ್ನಪ್ಪುವ ಔಷಧೀಯ ಸಸ್ಯಗಳ ಸಂಖ್ಯೆ ಅಗಣಿತ. ಕಳೆನಾಶಕಗಳನ್ನು ಬಿಡದೆ ಉಪಯೋಗಿಸುತ್ತಿದ್ದರೂ ಸಹ, ಈ ಸಸ್ಯಗಳು ತಾವಾಗಿಯೇ ಬೆಳೆಯುತ್ತವೆಯೆಂದರೆ, ಇವುಗಳ ಪುನರುತ್ಪಾದನಾ ಶಕ್ತಿಯ ಕುರಿತು ವಾಚಕರೆ ಊಹಿಸಿಕೊಳ್ಳಬಹುದು.

ಇಂತಹ ಅತ್ಯಂತ ಹಿಂಸಾತ್ಮಕ ವಾತಾವರಣವನ್ನೆದುರಿಸಿ ಈ ಔಷಧೀಯ ಸಸ್ಯಗಳು ತಾವಾಗಿಯೇ ಬೆಳೆಯುತ್ತಾ ಬದುಕುತ್ತಿರುವಂತೆಯೇ ನಾನೂ ಸಹ ಈ ಔಷಧೀಯ ಸಸ್ಯಗಳ ಕುರಿತು ಆಸಕ್ತಿ ವಹಿಸುತ್ತಾ, ಆ ಸಸ್ಯಗಳು ಆಯುಷ್ಯ ಪೂರ್ಣ ಜೀವನ ನಡೆಸಲು ಆಶೀರ್ವಾದ ಮಾಡುತ್ತಾ, ಅವುಗಳ ಉಪಯೋಗವನ್ನು ನನ್ನ ಜೀವನ ಕ್ರಮದಲ್ಲಿ ಅಳವಡಿಸಿಕೊಂಡು ಬರುತ್ತಾ, ಎಂತಹಾ ಭಾರೀ ಮಳೆ-ಶೀತದ ಹವಾಮಾನದಲ್ಲಿಯೂ ಸಹ ಬಾಳುತ್ತಿರುವುದು ಇಲ್ಲಿರುವ ಸುತ್ತ ಮುತ್ತಲಿನವರಿಗೆಲ್ಲಾ ಆಶ್ಚರ್ಯದಾಯಕ ಸಂಗತಿಯಾಗಿರುತ್ತದೆ. ಇಲ್ಲಿ ಹೇಮಾವತಿಯ ಒಂದು ಜಲ ಮೂಲವಿದ್ದು, ವರ್ಷವಿಡೀ ನದೀ ಜಲ ಲಭ್ಯ. ಸುತ್ತಲಿನ ಯಾರಿಗೂ ಅಷ್ಟೇನೂ ಉಪಯೋಗವಿಲ್ಲದ ಈ 'ಬೆಟ್ಟ ಹಳ್ಳ' ವೆ ನನ್ನ ಜೀವನಕ್ಕೆ ಆಧಾರವೆಂದರೆ ನೀವಾರೂ ನಂಬಲಾರಿರಿ. ಪೇಟೆಯ ಜನರು ದುಬಾರಿ ಹಣ ತೆತ್ತು ಮುದ್ರೆಯ ಸೀಸೆಯಲ್ಲಿ ಪಡೆಯುವ 'ಖನಿಜ ಯುಕ್ತಜಲ' ವು ನನಗಿಲ್ಲಿ ಪ್ರಕೃತಿದತ್ತ ಕೃಪೆ-ವರವಾಗಿದೆ. ಈ 'ಬೆಟ್ಟನ ಹಳ್ಳ' ದ ಖನಿಜಯುಕ್ತ ಜಲವೆ ನನ್ನ ತ್ರಿಕಾಲ ಸ್ನಾನ-ಸಂಧ್ಯಾವಂದನೆ, ಅಡಿಗೆ, ಪಾನೀಯ, ಬಟ್ಟೆ ತೊಳೆಯಲು ಮೂಲವೆಂದರೆ ನೀವೆಲ್ಲರೂ ಖಂಡಿತಾ ಅಸೂಯೆ ಪಡುವಿರಲ್ಲವೆ ? ಈ ಹಳ್ಳದಲ್ಲಿ ಸ್ನಾನ ಮಾಡಿದರೆ ಸಾಕು ಮೈಯ್ಯಲ್ಲಿರುವ ಕೊಳೆಗಳೆಲ್ಲವೂ ತೊಲಗಿ ಹೋಗಿ ಬಿಡುತ್ತವೆ. ನದೀ ಮೂಲದ ಋತು ಜಲವಾದುದರಿಂದ ಅಕಲುಷಿತ ಜಲವಾಗಿದೆ ಇದು. ಇನ್ನು ಮಳೆಗಾಲದಲ್ಲಂತೂ ಎಲ್ಲೆಲ್ಲೂ ನೀರೆ. ರವಿಯ ದರುಶನವಂತೂ ಅಪರೂಪ. ಮಳೆಗಾಲದ ರವಿ ದರ್ಶನಕ್ಕಾಗಿ ನಾವು ಪಡುವ ಸಂತೋಷಕ್ಕೆ ಸಾಟಿಯೇ ಇಲ್ಲಾ.

ಇಂತಹ ಪ್ರಕೃತಿದತ್ತ ವರವನ್ನು ನಾವೆಲ್ಲರೂ ಶಾಪವೆಂದು ಹಳಿಯುತ್ತಾ, ಕಾಡಿನ ನಾಶವಾದರೆ ಮಾತ್ರ ನಮಗೆ ಒಳ್ಳೆಯದಾಗುವುದೆಂದು ಭಾವಿಸುತ್ತಾ, ನಮ್ಮ ಶಕ್ತಿಯಿರುವವರೆಗೂ ಎಲ್ಲವನ್ನೂ ನಾಶಮಾಡುವುದರಲ್ಲೇ ಸರ್ವದಾಕಾಲ ಕಳೆಯುತ್ತೇವೆ. ಕಾಡು ಕಡಿದು, ನಾಶಮಾಡಲು ನಮಗೆ ಹಣ ನೀಡುವವರಿದ್ದರೆ, ಈ ಕಾಡನ್ನು ನಾವೇಕೆ ಉಳಿಸುತ್ತೇವೆ? ಮರ ಕಡಿಯಲು ಹಣ ನೀಡುವವರಿದ್ದರೆ, ಮರವನ್ನು ಕಡಿಯಲು ನಾವೇಕೆ ಹಿಂಜರಿಯಬೇಕು ? ನಮಗೆ ಬೇಕಾಗಿರುವುದು ಹಣ. ಹಣ ಸಾಲ ನೀಡುವವರಿದ್ದರೆ, ಮಾಡಲು ನಾವೇಕೆ ಹಿಂಜರಿಯುತ್ತೇವೆ ?

ಇಂತಹ ಸರ್ವನಾಶಕರ ವಾತಾವರಣದಲ್ಲಿ ಈ ಔಷಧೀಯ ಸಸ್ಯಗಳು ನನ್ನನ್ನು ತಮ್ಮ ಆಶ್ರಯಕ್ಕಾಗಿ ಮೊರೆಯಿಸುತ್ತಿರುವುದು ನನ್ನ ಅರಿವಿಗೆ ಬರುತ್ತದೆ. ನನ್ನನ್ನು ಪರಿಚಯ ಮಾಡಿಕೊಳ್ಳಲಾಸೆ. ಆದರೆ ನನಗಿನ್ನೂ ಅವುಗಳ ಪರಿಚಯವಾಗಿಲ್ಲ. ಇದಕ್ಕೆ ನನ್ನ ಮಾನವ ಸಹಜ ಮೌಢ್ಯವೂ ಸಹ ಕಾರಣವು. ಇಂತಹ ನನ್ನ ಮೌಢ್ಯವಿರುವ ಸಂದರ್ಭದಲ್ಲಿಯೇ ಅದನ್ನು ತೊಡೆದು ಕೊಳ್ಳುವ ಆಶಯ ಅನುಷ್ಠಾನವೂ ಸಹ ನನ್ನಿಂದಾಗುತ್ತಿದೆಯೆಂದರೆ ನಿಮಗೆ ಸಂತೋಷವಾಗುವುದೋ ದುಃಖವಾಗುವುದೋ ನಾಕಾಣೆ. ನನಗಂತೂ ಸಂತೋಷವಾಗುತ್ತದೆ. ಈ ನನ್ನ ಮೌಢ್ಯ ತೊಡೆದುಕೊಳ್ಳಲು ನನಗಿರುವ ಅವಕಾಶಗಳೆಂದರೆ, ಈ ಸಸ್ಯಗಳ ಬಗ್ಗೆ ಅರಿವಿರುವವರ ಒಡನಾಟ, ಹಾಗೂ ಈ ಸಸ್ಯಗಳ ಕುರಿತು ತಿಳಿಸುವ ಪುಸ್ತಕಗಳು.

ಈ ಸಂದರ್ಭದಲ್ಲಿ ನಾನಾವಾಗಲೋ ಮೂರು-ನಾಲ್ಕು ವರ್ಷಗಳ ಹಿಂದೆ ಖರೀದಿಸಿದ್ದ 'ಔಷಧಿ ಕೋಶ' ಸಂಪುಟ - 1 ಎಂಬ ಪುಸ್ತಕ ಇತ್ತೀಚೆಗೆ ನನಗೆ ನನ್ನ ಸುತ್ತಲಿರುವ ಔಷಧಿಸಸ್ಯಗಳನ್ನು ಅತ್ಯಂತ

ಸನಿಹವಾಗಿ ಪರಿಚಯ ಮಾಡಿಸಿತು. ಇದಕ್ಕೂ ಮೊದಲೇ ನಾನಿಲ್ಲಿ ಗುರುತಿಸಿ ಬಳಸಿದ ಔಷಧಿ ಸಸ್ಯಗಳೆಂದರೆ - ಬ್ರಾಹ್ಮೀ (*Centella asiatica*) ಕವಟೆಕಾಯಿ (ಕಹಿ ಸೌತೆಕಾಯಿ - *Cucumis melo*), ವನ ಹರಿದ್ರಾ - (ಕಸ್ತೂರಿ ಅರಿಸಿನ - *Curcuma aromatica*), ಸುರವಾಳ ಸೊಪ್ಪು, ತಗಟೆ ಸೊಪ್ಪು (*Cassia tora*), ಕಾಡು ಕೊತ್ತಂಬರಿ, ನಾಗರ ಹುಳಿ, ಮೆಂತು ಹುಳಿ, ನಿಂಬೆ ಹುಳಿ, ನೆಲ್ಲಿಕಾಯಿ, ನೇರಳೆಮರ, ಉಮ್ಮತ್ತಿ, ದಾಸವಾಳ, ಶತಾವರೀ (*Asparagus racemoses*) ಲಂಟಾನಾ ಅಥವಾ ಸೀಮೇ ಸೀಗೆ, ಗರಿಕೆ ಹುಲ್ಲು, ಕರಿಬೇವು, ತುಂಬೆ, ಪುದೀನಾ ಸೊಪ್ಪು, ಸುದರ್ಶನ ಬಳ್ಳಿ, ಕಾಡುಶುಂಠಿ, ಮಲ್ಲೇಬೀಳು, ರಾಮಗುಳ್ಳ, ಹುಳಿ ಸೊಪ್ಪು ಇತ್ಯಾದಿ. ಈ ಪುಸ್ತಕ ಲಭಿಸಿದ ಕೂಡಲೇ ನಾನು ಗುರುತಿಸಿದ ಔಷಧಿ ಸಸ್ಯಗಳು ಭಾರಂಗೀ (*Clerodendron serratum*), ರಾಮತುಳಸಿ (*Ocimum gratissimum*) ಬಕುಳ ಮರ (*Mimusops elengi*), ಬಲಾ (*Sida cordifolia*) ಮಹಾ ಬಲ (*Sida rhombifolia*), ಭೃಂಗರಾಜ (*Eclipta phonicla*), ಸರ್ಪಗಂಧಿ(*Rauwolfia serpentina*), ಮದ್ದರಸ, ಗರಗತ್ತಿಮರ (ಈ ಮರವು ತಾನಾಗಿಯೇ ಹುಟ್ಟುತ್ತದೆ. ಎಲೆಗಳು ಎರಡೂ ಕಡೆಯಲ್ಲಿಯೂ ಉಪ್ಪಿನ ಕಾಗದದಂತೆ ಒರಟಾಗಿದ್ದು, ಲೋಹ, ಮರ ಪದಾರ್ಥಗಳನ್ನು ನುಣುಪು ಮಾಡಲು ಉಪಯೋಗಿಸುವರು) ಹಸ್ತಿಪಾದ (ನೆಲ ಮುಚ್ಚಳ - *Elephantopus scaber*) ಗೋವೇಧುರ (*Coix lach ryma*) ಗಣಿಕೆಯ ಗಿಡ (*Solanum nigrum*), ಆಕಾಶವಲ್ಲಿ (ಗೆಣಸು - ಬಳ್ಳಿಯಲ್ಲಿ ಕಾಯಿ, ಬುಡದಲ್ಲಿ ಗೆಣಸು ಇರುತ್ತದೆ. (*Assytha filifonris*) ಕಕ್ಕೆ ಮರ - (*Cassia fistula*), ಅಂಟುವಾಳಮರ, ಅತಿಬಲಾ (*Abutilon indicum*) ನಾಗಾಬಲಾ (*Sida cordota*) ಮಾದಳ ಹಣ್ಣು (*Citrus medica*), ಚಿತ್ರಮೂಲ (*Plumbago zeylanica*) ಅಶೋಕ (*Soraca asoca*), ಮಡಹಾಗಲ ಇತ್ಯಾದಿ. ಈ ಸಸ್ಯಗಳಿಗೇ ಅಲ್ಲದೆ; ಇನ್ನೂ ಅನೇಕ ಔಷಧೀಯ ಸಸ್ಯಗಳು ನನಗೆ ಪ್ರತಿನಿತ್ಯ ಕಂಡು ಬರುತ್ತಿವೆ. ನನ್ನೊಡನೆ ಕೆಲಸ ಮಾಡುತ್ತಿರುವ ಗಿರಿಜನರು ಸಹ ನನಗಪ್ಪು ಔಷಧಿ ಸಸ್ಯಗಳ ಪರಿಚಯ ಮಾಡಿಸಿರುವರು. ಅವರು ಹೇಳುವ ಸಸ್ಯಗಳ ಹೆಸರು ಕರ್ನಾಟಕದ ಇತರೆಡೆಯ ಹೆಸರುಗಳಿಗೂ ಬೇರೆಯಾಗಿವೆ. ಶತಾವರಿಗೆ ಇವರು ಹೇಳುವ ಹೆಸರು ತುಪ್ಪದ ಕುಡಿ, ಸುದರ್ಶನ ಬಳ್ಳಿಗೆ ಸೋಗಲು ಬೀಳು, ಬಲಾಗೆ ಕಡಲೆ ಗಿಡ, ರಾಮತುಳಸಿಗೆ ತುಳಸಿ, ಅಶೋಕ ಮರಕ್ಕೆ ಅಚ್ಚಂಗಿ ಮರ, ಇಂದ್ರಾವಾರುಣಿಗೆ ಕವಟೆಕಾಯಿ, ಇತ್ಯಾದಿ.

ಈ ಔಷಧಿ ಕೋಶದ ಮೊದಲನೆಯ ಸಂಪುಟದಲ್ಲಿ ಈ ಸಸ್ಯೌಷಧಿಗಳ ಬಳಕೆಯ ಬಗ್ಗೆ ಮಾಹಿತಿಯಿದೆ. ದಾಸವಾಳದ ಹೂವು - ಪತ್ರೆಗಳು ಪೋಷಕಾಂಶ ನೀಡುತ್ತವೆ. ಬ್ರಾಹ್ಮೀ ರಕ್ತದೋಷ ನಿವಾರಿಸುತ್ತದೆ. ಕೆಂಪು ಗುಲಾಬಿಯಿಂದ ಜ್ವರ ನಿವಾರಣೆ ಆಗುತ್ತದೆ. ಬಕುಳ ಬೀಜ - ಎಲೆಗಳು; ಚರ್ಮರೋಗ, ಹಲ್ಲುಬೇನೆ ನಿವಾರಿಸುತ್ತದೆ. ಬಕುಳ ಪುಷ್ಪವು ರಕ್ತದೋಷ ನಿವಾರಿಸುತ್ತದೆ. ಬಕುಳದ ಹಣ್ಣು ಹಲ್ಲುಗಳನ್ನು ಗಟ್ಟಿಮಾಡುತ್ತವೆ. ಬಲಾ ಬಲ ನೀಡುತ್ತದೆ. ಜೀರ್ಣಕಾರಿ, ಭೇದಿ ನಿವಾರಿಸುತ್ತದೆ. ನಾಗಬಲ ಜ್ವರ ನಿವಾರಣೆಗೆ ಸಹಕಾರಿ. ಭಾರಂಗೀ ಎಲೆಗಳು ಜ್ವರ, ಉರಿಕೆ, ಕೆಮ್ಮುಗಳನ್ನು ನಿವಾರಿಸುತ್ತದೆ. ಅಶೋಕ ಮರದ ಚಕ್ಕೆಯ ರಸವು ಹೃದಯದ ಮದ್ದು, ಮುರಿದ ಮೂಳೆಗಳು ಬೇಗ ಕೂಡಿಕೊಳ್ಳಲು ಸಹಕಾರಿ. ನೋವು ನಿವಾರಕವೂ ಹೌದು. ಅಶೋಕ ಹೂವುಗಳಿಂದ ಮಾಡಿದ ಅಂಜನವು ನೇತ್ರರೋಗಗಳನ್ನು ನಿವಾರಿಸುತ್ತದೆ. ಅಶೋಕದ ಎಲೆಗಳಿಂದ ಸಹ ಇದುವೇ ಉಪಯೋಗ. ಸುದರ್ಶನ ಬಳ್ಳಿ ಪೆಟ್ಟಾದಾಗ ಉಂಟಾಗುವ ಆಯಾಸವನ್ನು ನೀಗಿಸುತ್ತದೆ. ಶತಾವರಿಯ ಬೇರುಗಳು ದೇಹಕ್ಕೆ ಬಲ ನೀಡುತ್ತವೆ. ಜೀರ್ಣಶಕ್ತಿ ವೃದ್ಧಿಸುತ್ತವೆ. ತಾಯಂದಿರ ಎದೆ ಹಾಲು ವೃದ್ಧಿಸುತ್ತದೆ. ರಾಮ ತುಳಸಿ ಎಲೆಯ ರಸವು, ಹೃದಯ ಬೇನೆಗೆ ಮದ್ದು ಹಾಗೂ ಶೀತ ಸಂಬಂಧಿ ವ್ಯಾಧಿಗಳನ್ನು ತೊಲಗಿಸುತ್ತದೆ. ಚಿತ್ರಮೂಲವು ಮಲಬದ್ದತೆಯನ್ನು ನಿವಾರಿಸುತ್ತದೆ; ಜೀರ್ಣಕಾರಿ, ನೋವು ನಿವಾರಕ ಹಾಗೂ ಬಾವುಗಳ ನಿವಾರಿಸುತ್ತದೆ.

ಕಹಿಸೌತೆಕಾಯಿನ್ನು ವಾಂತಿಯಾಗಬೇಕಾದರೆ ಬಳಸಬಹುದು. ಯಾವುದೇ ರೀತಿಯ ಹೊರಗಿನ ಗಾಯ-ಹುಣ್ಣುಗಳ ನಿವಾರಣೆಗೆ ಇದು ಬಲು ಸಹಕಾರಿ. ಹಾಗೆಯೇ ಇದನ್ನು ಕ್ರಿಮಿನಾಶಕವನ್ನಾಗಿ ಬಳಸಬಹುದು. ಇದರ ಪೊರೆಯಿರುವಾಗ ಬೇರಾವ ಕ್ರಿಮಿ-ಕೀಟಗಳೂ ಹತ್ತಿರ ಸುಳಿಯಲಾರವು. ಕಸ್ತೂರಿ ಅರಿಸಿನವು, ಅರಿಸಿನದಂತೆಯೇ ಉಪಯೋಗವು. ಸುರವಾಳ ಸೊಪ್ಪು ಜೀರ್ಣಕಾರಿ, ಪಿತ್ತ ನಿವಾರಕವು. ತಗಟೆ ಸೊಪ್ಪು ತ್ರಿದೋಷಗಳ ನಿವಾರಕವು. ಹೃದಯ ಬೇನೆಗೆ ಮದ್ದು. ಅಸ್ತಮಾ ನಿವಾರಕ. ತಲೆನೋವು, ಅಂತರ್ವ್ರಣ, ಮೇದಸ್ಸು ಸಂಬಂಧಿ ರೋಗಗಳಿಗೆ ಔಷಧಿ. ಸೀಮೇ ಸೀಗೆಯ ರಸವು ಗಾಯ- ಹುಣ್ಣುಗಳು ಕೀವು ಕಟ್ಟದಂತೆ ಮಾಡಿ, ಮಾಗಿಸುತ್ತದೆ. ಗರಿಕೆಯ ಹುಲ್ಲು ಜೀರ್ಣಕಾರಿ. ನಾಗರ ಹುಳಿ ರಕ್ತದೋಷನಿವಾರಕ. ಮೆಂತು ಹುಳಿಯು ರಕ್ತದ ಕೊಬ್ಬನ್ನು ನಿವಾರಿಸಿ, ರಕ್ತ ಶುದ್ಧಿ ಮಾಡುತ್ತದೆ. ಮಲ್ಲೆಬೀಳಿನ ತುಂಡನ್ನು ಕಡಿದು ಉರುವಿದರೆ, ರಸಸೋರಿ ಯಾವುದೇ ನೇತ್ರರೋಗಗಳನ್ನು ತೊಡೆದು ಹಾಕುತ್ತವೆ.

ಈ ರೀತಿ ನಾನಾ ವಿಧವಾದ ಮಾನವ-ಪ್ರಾಣಿ, ಸಸ್ಯಗಳ ರೋಗಗಳ ನಿವಾರಣೆಗೆ ಕಾರಣವಾಗುವ ಸಹಾಯಕವಾಗುವ ಈ ದೈವದತ್ತ ಮೂಲ ವನಸ್ಪತಿಗಳನ್ನು ನನ್ನ ವಿನಾ ಇತರರೆಲ್ಲರೂ ಇಡೀ ವರ್ಷಕಾಲ ಕೊಚ್ಚಿ ಹಾಕುವುದರಲ್ಲಿಯೇ ನಿರತರು. ನಾನೊಬ್ಬನೇ ಇವುಗಳನ್ನು ನನ್ನ ನಿತ್ಯ ಜೀವನದಲ್ಲಿ ಬಳಸುವವನು. ಇದು ಜನರಿಗೆಲ್ಲರಿಗೂ ಹಾಸ್ಯಸ್ಪದ ಸಂಗತಿಯಾಗಿದೆ.

ಈ ವನಸ್ಪತಿಗಳನ್ನು ಬೆಳೆಯಲು ಮಾನವ ಹಸ್ತಕ್ಷೇಪವೇನೂ ಅಗತ್ಯವಿಲ್ಲ. ಇವುಗಳು ಬೆಳೆಯಲಾವ ಗೊಬ್ಬರ,ಔಷಧಿಗಳ ಅಗತ್ಯವಿಲ್ಲ. ಇದು ವಾಸ್ತವವಾಗಿ ನೈಸರ್ಗಿಕವಾಗಿ ಬೆಳೆಯುವಂತಹವು. ಇವುಗಳನ್ನು ಉಪಯೋಗಿಸಿಕೊಳ್ಳುವ ವಿಧಾನವನ್ನು ನಾವರಿಯ ಬೇಕಷ್ಟೇ. ನಾನು ಬಳಸುವ ಈ ವನಸ್ಪತಿಗಳನ್ನು ಅನೇಕರು ನನಗೆ ಹಾಸ್ಯಾಸ್ಪದ ಮಾಡಲು ಈ ಸಸ್ಯ ಅಲ್ಲದೆ, ಇಲ್ಲಿದೆಯೆಂದು ನನಗೆ ಉಚಿತ ಸಲಹೆ ನೀಡಿ, ತಾವು ಬುದ್ಧಿವಂತರೆಂದೆನಿಸಿಕೊಳ್ಳಬಯಸುತ್ತಾರೆ. ಆದರೆ, ಒಬ್ಬರೂ ಸಹ ತಾವಾಗಿಯೇ ಲವಲೇಶ ಮಾತ್ರವೂ ತಂದು ಕೊಡಲಾರರು. ಅದನ್ನು ತಂದು ಕೊಡುತ್ತೇನೆ ನನಗೀಗ ಹಣ ಬೇಕು ಎಂದು ಹತ್ತಿರದ ಮಾರುಕಟ್ಟೆಗೆ ಹೋಗಲು ಹಣ ಕೇಳುತ್ತಾರೆ. ನನ್ನಿಂದ ಲಭಿಸದೆ, ನನ್ನನ್ನು ಮನಸ್ಸಿನಲ್ಲಿಯೇ ಶಪಿಸಿಕೊಂಡು ಹೋಗುತ್ತಾರೆ.

ಈ ವನಸ್ಪತಿಗಳನ್ನು ಬೃಹತ್ ಪ್ರಮಾಣದಲ್ಲಿ ಕೊಳ್ಳುವಂತಹ ವ್ಯಾಪಾರಿಗಳು ಸಹ ದೂರದಲ್ಲಿರುತ್ತಾರೆ. ಇವರು ಕೊಡುವ ಬೆಲೆಯೂ ಸಹ ಬಹಳ ಅಲ್ಪ. ಇವರಿಗೆ ಸರಬರಾಜು ಮಾಡಲು ನನಗಿಷ್ಟವಿಲ್ಲಾ. ನಮ್ಮಲ್ಲಿರುವ ಜನರೋ ಕೇವಲ ಕೆಮ್ಮಿಗಾಗಿ ಆಲೋಪತಿ ವೈದ್ಯರತ್ತಲೇ ಹೋಗಬಯಸುತ್ತಾರೆ. ಹಾಗೂ ಅದಕ್ಕಾಗಿ ಹಣವನ್ನು ಅನವಶ್ಯಕವಾಗಿ ವೆಚ್ಚ ಮಾಡಬಯಸುತ್ತಾರೆ. ಅನೇಕರು ಅಲೋಪತಿ ವೈದ್ಯರಿಂದ ನಿರಂತರವಾಗಿ ಪಡೆದರೂ ಸಹ ಗುಣಮುಖರಾಗದೆ, ಸದಾ ರೋಗಿಗಳಾಗಿಯೇ ಇರುವರು. ಇಂತಹ ದೀರ್ಘರೋಗಿಗಳಲ್ಲಿ ಒಂದಿಬ್ಬರು ನನ್ನಲ್ಲಿ ಬಂದು ನನ್ನನ್ನು ನಗೆಪಾಟಲು ಮಾಡಲು ಔಷಧಿ ಬೇಡಿರುವ ಸಂಗತಿಗಳೂ ಇವೆ. ನಾನು ಕೊಟ್ಟ ಚೂರ್ಣಗಳನ್ನು ಸೇವಿಸುವೆವೆಂದು ಹೇಳುತ್ತಾ, ನನ್ನಿಂದ ಹೊರಟ ಕೂಡಲೇ ಬಿಸಾಡಿರುವ ಸಂಗತಿಗಳೂ ಇವೆ. ಈ ಔಷಧಿಗಳನ್ನು ನಾನಾರು ಬಂದರೂ ನೀಡುವೆನು. ಯಾವುದೇ ಪ್ರತಿಫಲಾಪೇಕ್ಷೆ ನನಗಿಲ್ಲಾ. ಈಗ ಯಾರಾದರು ರೋಗಿಗಳೆಂದು ಬಂದರೆ, ರೋಗಿಯು ಪ್ರತಿದಿನ ಬೆಳಿಗ್ಗೆ - ಸಂಜೆಕಾಲ ನನ್ನಲ್ಲಿಗೆ ಬಂದು ನಾನು ಕೊಟ್ಟ ಔಷಧಿಯನ್ನು ನನ್ನೆದುರಿಗೆ ಸೇವಿಸಿ ಹೊರಡಬೇಕು. ಅನೇಕ ಮದ್ದುಗಳು ಕಹಿ ಇಲ್ಲವೆ ಒಗರು ರುಚಿಯಿಂದ ಕೂಡಿರುತ್ತವೆ.

ಇಂತಹ ವನಸ್ಪತಿ ಸಂಪತ್ತು ತಾನಾಗಿಯೇ ಲಭಿಸುವ ಈ ಸಂಗತಿ ಇಲ್ಲಿನ ಸುತ್ತ ಮುತ್ತಲಿನವರಿಗಾರಿಗೂ ಅರಿವಿಲ್ಲ. ಅರಣ್ಯ ಇಲಾಖೆ ಹಾಗೂ ಮತ್ತಿತರ ಸಂಘ-ಸಂಸ್ಥೆಗಳು ವನಸ್ಪತಿಗಳನ್ನು ಬೆಳೆಸುವತ್ತ ಬೃಹತ್ ಕಾರ್ಯಕ್ರಮಯೋಜನೆಯಡಿಯಲ್ಲಿ ಹಣ ವ್ಯಯ ಮಾಡುತ್ತವೆ. ಅಬ್ಬರದ ಪ್ರಚಾರಗಳನ್ನು, ಖ್ಯಾತ ಪತ್ರಿಕೆಗಳಲ್ಲಿ ಲೇಖನ ಮಂಡನೆ, ವಿಚಾರ ಸಂಕಿರಣಗಳಲ್ಲಿ ಪ್ರತಿಪಾದನೆ ಇತ್ಯಾದಿಗಳನ್ನು ಮಾಡುತ್ತಲಿವೆ. ಆದರೆ, ಇಂತಹ ನೈಸರ್ಗಿಕ ಪರಿಸರದಲ್ಲಿ ತಾವಾಗಿಯೇ ಹುಟ್ಟುವ, ಬೆಳೆಯಲು ಮಾನವನಿಂದ ಏನನ್ನೂ ಬೇಡದ ಸಸ್ಯಗಳ ಗುರುತಿಸುವಿಕೆ, ಸಂರಕ್ಷಣೆ, ಉಪಯೋಗ ಇವುಗಳಲ್ಲಿ ಯಾರೂ ಆಸಕ್ತಿವಹಿಸುತ್ತಿಲ್ಲಾ. ನನ್ನ ಈ ಗುರುತಿಸುವ, ಸಂರಕ್ಷಿಸುವ, ಉಪಯೋಗಿಸುವ ಕಾರ್ಯವು ಯಾರಿಂದಲೂ ಯಾವ ಪ್ರತಿ ಫಲಾಪೇಕ್ಷೆಯಿಲ್ಲದೆ ಮಾಡಲೂ ಸಹ ತೊಡಕುಗಳು ಬಹಳವಾಗಿ ಆಗುತ್ತಿವೆಯೆಂದರೆ ನೀವು ಪರಿಸ್ಥಿತಿಯನ್ನು ಊಹಿಸಿಕೊಳ್ಳಬಹುದು.

ಅರಣ್ಯ ಇಲಾಖೆ - ಸಂಘ ಸಂಸ್ಥೆ - ವ್ಯಕ್ತಿಗಳು ಈ ದಿಸೆಯಲ್ಲಿ ಕಾರ್ಯಪ್ರವೃತ್ತರಾಗಬೇಕು, ಪಶ್ಚಿಮ ಘಟ್ಟಗಳ ಜೀವ ವೈವಿಧ್ಯತೆಯ ಕುರಿತು ಧ್ವನಿ ಮೊಳಗುವಂತೆಯೇ ಅದರ ಸಂರಕ್ಷಣೆಗೂ ಸಹ ಕಾರ್ಯಪ್ರವೃತ್ತರಾಗಬೇಕು. ಈ ಸ್ಥಳಗಳು ಬಹಳ ಮೂಲೆಯಲ್ಲಿದ್ದು, ಇಲ್ಲಿ ವಾಹನ ಸೌಕರ್ಯಗಳು ಅಷ್ಟಾಗಿರುವುದಿಲ್ಲವೆಂಬ ನೆಪವೇ ಜನರನ್ನು ಇಲ್ಲಿಂದ ದೂರ ಮಾಡುತ್ತದೆ. ಇದಾಗಬಾರದು. ಇಲ್ಲಿ ಕೆಲಸದಲ್ಲಿ ಆಸಕ್ತಿ ಬೇಕು.

ಇನ್ನು ಈ ವನಸ್ಪತಿಗಳೇ ಎಷ್ಟೋದಿನ ನನಗೆ ಆಹಾರವಾಗಿವೆ. ಈಗಲೂ ಸಹ ನನ್ನ ಪ್ರಾತಃಕಾಲ ಪಾನೀಯವೆಂದರೆ, ಹಳ್ಳದ ನೀರು ಬೊಗಸೆಯಿಂದ ಕುಡಿಯುವುದು. ಬ್ರಾಹ್ಮೀ, ದಾಸವಾಳ, ಗೋಜಿಹ್ವಾ, ಕಾಡು ಕೊತ್ತಂಬರಿ, ಭೃಂಗರಾಜ ಇತ್ಯಾದಿ ಎಲೆಗಳೇ ನನ್ನ ಪ್ರತಿ ನಿತ್ಯದ ಪ್ರಾತಃಕಾಲದ ಉಪಹಾರ. ನಾನು ಪರಸ್ಥಳದಿಂದ ಹಿಂದಿರುಗಿ ಬಂದಾಗ ನನಗೆ ಲಭಿಸುವ ಆ ಕ್ಷಣದ ನೇರ ಆಹಾರಗಳು ಈ ವನಸ್ಪತಿಗಳೇ ಆಗಿರುತ್ತವೆ. ನನಗೆ ವನಸ್ಪತಿ ಸಸ್ಯಗಳೇ ದೇವರು, ಒಡನಾಡಿಗಳು. ಇವುಗಳ ಗುರುತಿಸುವಿಕೆಯೇ ಮಂತ್ರವು. ಇವುಗಳ ಉಪಯೋಗ ವಿಧಾನವೇ ಈ ದೇವರಿಗೆ ನೈವೇದ್ಯ. ಇವುಗಳ ಬಳಕೆಯೇ ನನ್ನ ಪೂಜೆ.

ಇನ್ನೊಂದು ಆಶ್ಚರ್ಯಕರ ಸಂಗತಿಯೆಂದರೆ, ಈ ಅನೇಕ ವನಸ್ಪತಿಗಳು ನನಗೆ ವರ್ಷವಿಡೀ ನಿಸರ್ಗದಲ್ಲಿ ಲಭ್ಯವು. ಯಾವುವು ಅಲ್ಪಾಯುಷ್ಯವುಳ್ಳವೋ ಅವುಗಳು ತಮ್ಮನ್ನು ನನ್ನ ಸೇವೆ ಮಾಡಲು ತಾವು ಉತ್ಸುಕರೆಂದೂ, ಯಾವಾಗಲೂ ಅವುಗಳನ್ನು ನಾನು ಹತ್ತಿರ ಇಟ್ಟು ಕೊಳ್ಳಬೇಕೆಂದೂ ತಿಳಿಸುತ್ತವೆ. ವನಸ್ಪತಿಗಳೊಡನೆ ಮಾತನಾಡುವ - ಮಾನವೇತರ ಭಾಷೆಯ ಅರಿವು - ಅನುಭವವಾಗುತ್ತಲೇ ಇರುತ್ತದೆ.

ಹಿತ್ತಲಗಿಡಕ್ಕೆ ಮಾಹಿತಿ

ಹಿತ್ತಲಗಿಡಕ್ಕೆ ಸೂಕ್ತ ಎನಿಸಿದ ವ್ಯಕ್ತಿಗಳು, ವಿಚಾರ, ಪದ್ಧತಿ, ಗಾದೆ, ಲಾವಣಿ, ಕತೆಗಳನ್ನು ಬರೆದು ಕಳುಹಿಸಿರಿ. ಸೂಕ್ತ ಮಾಹಿತಿಗಳಿಗೆ ಪ್ರೋತ್ಸಾಹಕರ ಬಹುಮಾನವಿರುತ್ತದೆ.


ಸಂ.

ವೈವಿಧ್ಯಮಯ ಪೊರಕೆಗಳು

- ಬಿ. ನಾಗರಾಜು. ಕುಣಗಲ್ ಗ್ರಾಮ, ತಳಿ

ಪೊರಕೆಗಳು ರೈತರ, ಅದರಲ್ಲೂ ಮುಖ್ಯವಾಗಿ ಹೆಂಗೆಳೆಯರ ಬದುಕಿನ ಅವಿಭಾಜ್ಯ ಅಂಗಗಳು. ನಮ್ಮ ನಿತ್ಯದ ಬದುಕು ಚಾಲೂ ಆಗುವುದೇ ಪೊರಕೆಗಳಿಂದ. ಅವು ಸ್ವಚ್ಛತೆಯ ಸಾಧನಗಳು. ಪಟ್ಟಣಗಳಲ್ಲಿ ಕೇವಲ ಒಂದು ಜಾತಿಪೊರಕೆ ಮಾತ್ರ ಗೊತ್ತು. ಆದರೆ ಪ್ರತಿಯೊಂದರಲ್ಲೂ ವೈವಿಧ್ಯತೆಯನ್ನು ಪಡೆದಿರುವ ಹಳ್ಳಿಗರು ಪೊರಕೆಗಳಲ್ಲೂ ಅಚ್ಚರಿಯಾಗುವಷ್ಟು ವೈವಿಧ್ಯತೆ ಹೊಂದಿದ್ದಾರೆ. ಮನೆ ಒಳಗೆ, ಹೊರಗೆ, ಕೊಟ್ಟಿಗೆಗೆ, ಹಟ್ಟಿಗೆ, ಕಣಕ್ಕೆ ಈ ರೀತಿ ಪ್ರತಿಯೊಂದು ಸ್ಥಳಕ್ಕೂ ಬೇರೆ ಬೇರೆ ರೀತಿಯ ಗಿಡಗಳಿಂದ ಕಟ್ಟಿದ ಅವುಗಳದೇ ಆದ ಗುಣವಿಶೇಷ ಹೊಂದಿದ ಪೊರಕೆಗಳಿವೆ. ಪೊರಕೆ, ಬರಲು, ಹಿಪ್ಪು, ಕಸಬರಿಗೆ, ಸಿಂಧಿಬರಿಗೆ, ಹಿಡಿಸೂಡಿ, ಹಿಡಿ ಮುಂತಾದ ಪ್ರದೇಶವಾರು ವಿವಿಧ ಹೆಸರು ಪಡೆದಿರುವ ಇವನ್ನು ಗ್ರಾಮೀಣರು ಸ್ಥಳೀಯವಾಗಿ ಆದಷ್ಟು ಲಭ್ಯವಿರುವ ಕಡ್ಡಿಗಳಿಂದಲೇ ಮಾಡಿಕೊಳ್ಳುತ್ತಾರೆ. ಅವರಿಗೆ ಬೇಸಿಗೆಯ ಬಿಡುವಿನ ದಿನಗಳಲ್ಲಿ ವರ್ಷಕ್ಕಾಗುವಷ್ಟು ಪೊರಕೆ ಕಡ್ಡಿ ಕುಯ್ದು ಕಟ್ಟುವುದೂ ಒಂದು ಕೆಲಸ.

1. ಹಂಚಿಪೊರಕೆ : ಎಲ್ಲಾ ಕಡೆ ಬಳಕೆಯಲ್ಲಿರುವ ಹೆಚ್ಚು ಉಪಯುಕ್ತ ಮತ್ತು ಜನಪ್ರಿಯ ಪೊರಕೆ ಇದು. ಬಯಲುಸೀಮೆಯ ಕಾಡು, ಹೊಲ, ಬದುಗಳಲ್ಲಿ ಬೆಳೆಯುವ ಹಂಚಿ ತೆಂಡೆಗಳ ಕಡ್ಡಿಯನ್ನು ಹೆಂಗಸರು ಬೇಸಿಗೆಯಲ್ಲಿ ಕುಯ್ದು ಒಣಗಿಸಿ, ತುದಿಯಲ್ಲಿನ ಊಗು ಮುಳ್ಳನ್ನು ಉದುರಿಸಿ ಕಟ್ಟಿ ಎತ್ತಿಡುತ್ತಾರೆ. ಮಕ್ಕಳಿಗೆ ದೃಷ್ಟಿಯಾದಾಗ, ಹೊಟ್ಟೆನೋವು ಬಂದಾಗ ಇದರ ಕಡ್ಡಿಗಳನ್ನು ನೀವಳಿಸಿ ಸುಡುತ್ತಾರೆ.



2. ಅಂಗರು ಅಥವಾ ಬಂದರೆ *(Odoneea viscosa)* **ಪೊರಕೆ:** ಪೊದೆಯ ರೀತಿ ಕಾಡು, ಬಯಲುಗಳಲ್ಲಿ ಹೆಚ್ಚಾಗಿ ಬೆಳೆಯುವ ಈ ಗಿಡದ ಕಡ್ಡಿಗಳು ಒರಟಾಗಿದ್ದು ದನ, ಕುರಿ, ಮೇಕೆಗಳ ಕೊಟ್ಟಿಗೆ ಗುಡಿಸಲು ಹೆಚ್ಚು ಬಳಕೆಯಲ್ಲಿವೆ. ತುಂಬಾ ದಿವಸ ಸಹ ಬರುತ್ತವೆ.

3.ಇಡುಗನ ಬರಲು : ಇದನ್ನು ಕರಿ ಈಚಲು ಗಿಡದ ಗರಿಗಳಿಂದ ಕಟ್ಟುತ್ತಾರೆ. ನುಣುಪು ನೆಲಗುಡಿಸಲು, ಗೋಡೆಗೆ ಸುಣ್ಣ ಹೊಡೆಯಲು ಬಳಸುತ್ತಾರೆ. ಈ ಈಚಲು ಗರಿಗಳು ಸಂಕ್ರಾಂತಿವರೆಗೆ ಮಾತ್ರ ಸಿಗುತ್ತವೆ. ನಂತರ ಕಾಡಿಗೆ ಬೆಂಕಿ ಬಿದ್ದರೆ ನಾಶವಾಗುತ್ತವೆ.

4. ಎರೋಸ್ ಅಥವ ಸೀರೆಕಡ್ಡಿ *(Tamarix gallica)* **ಪೊರಕೆ:** ರಸ್ತೆ ಬದಿ, ಹೊಲದ ಬದುಗಳಲ್ಲಿ ಬೆಳೆಯುವ ಚಿಕ್ಕ ಗಿಡದ ಕಡ್ಡಿಗಳನ್ನು ಡಿಸೆಂಬರ್ - ಜನವರಿಯಲ್ಲಿ ಕುಯ್ದು ಪೊರಕೆ ಕಟ್ಟಿ ವರ್ಷವಿಡೀ ಇಡುತ್ತಾರೆ. ಕೊಟ್ಟಿಗೆ, ಬೀದಿ ಮತ್ತು ಕಣ ಗುಡಿಸಲು ಇವು ಸೂಕ್ತ. ಬಾಳಿಕೆಯೂ ಹೆಚ್ಚು.



5. ಉತ್ತರಾಣಿ ಕಡ್ಡಿ *(Stachytarphcte indica)* **ಪೊರಕೆ :** ಕಾಂಡಪೂರಾ ಕೊಂಕಿಯಂತಹ ಮುಳ್ಳು ಹೊಂದಿರುವ ಈ ಕಡ್ಡಿಪೊರಕೆ ರಾಗಿ ರಾಶಿ ಮತ್ತು ರಾಗಿ ತೂರುವಾಗ ಹೊಟ್ಟು ಗುಡಿಸಲು ತಕ್ಕುದಾದುದು. ರಾಗಿ ಕಣಗಳಲ್ಲಿ ಇದನ್ನು ಪೂಜ್ಯ ಭಾವನೆಯಿಂದ ಕಾಣಲಾಗುತ್ತದೆ.

6. ಬಿದಿರು ಪೊರಕೆ : ಹೆಚ್ಚು ಬಾಳಿಕೆ ಬರುವ ಬಿದಿರು ಪೊರಕೆಗಳನ್ನು ಕೊಟ್ಟಿಗೆ ಗುಡಿಸಲು ಬಳಸಲಾಗುತ್ತದೆ.

7. ತೆಂಗಿನ ಕಡ್ಡಿ ಪೊರಕೆ : ಇತರ ಜಾತಿಯ ಪೊರಕೆ ಕಡ್ಡಿಗಳು ಸಿಗುವುದು ಕಡಿಮೆಯಾದಂತೆ, ಸುಲಭವಾಗಿ ಸಿಗುವ ತೆಂಗಿನ ಕಡ್ಡಿ ಪೊರಕೆ ಬಳಕೆ ಹೆಚ್ಚುತ್ತಿದೆ. ಮೃದುವಾಗಿಲ್ಲದ ಈ ಪೊರಕೆಗಳ ಬಳಕೆಗೆ ತುಂಬಾ ಮಿತಿಯಿದೆ. ಪಟ್ಟಣಗಳಲ್ಲಿ ಹೆಚ್ಚು ಬಳಕೆಯಲ್ಲಿದೆ.

ನಮ್ಮ ಗಮನಕ್ಕೆ ಬರದಂತೆ ಇನ್ನೂ ಎಷ್ಟೋ ಜಾತಿಯ ಪೊರಕೆಗಳನ್ನು ಬಳಸುವ ಹಳ್ಳಿಗರು ಅವುಗಳ ಬಗ್ಗೆ ತುಂಬಾ ಗೌರವಯುತವಾಗಿಯೂ ನಡೆದುಕೊಳ್ಳುತ್ತಾರೆ. ಸವೆದ ಪೊರಕೆಗಳನ್ನು ಸುಡುವುದಿಲ್ಲ. ಅದರಿಂದ ಹೊಡೆದವರೆ ಕೆಟ್ಟರೆಂಬ ನಂಬಿಕೆಯಿದೆ. ಇಡೀವರ್ಷ ಸಾಮಾನ್ಯ ಪೊರಕೆಯಾಗಿಯೇ ಇರುವ ಇವು 'ಕಣ'ದಲ್ಲಿ ಮಾತ್ರ 'ಬುದ್ಧಿವಂತ' ಎಂಬ ಹೆಸರಿನ ಮರ್ಯಾದೆ ಪಡೆಯುತ್ತವೆ. ಏಕೆಂದರೆ ಕಣದಲ್ಲಿ ರೈತರು ಪ್ರತಿಯೊಂದು ವಸ್ತುಗಳಿಗೂ ಬೇರೆ ಹೆಸರಿಟ್ಟು ಕರೆಯುತ್ತಾರೆ. ಅಲ್ಲದೆ ಎದುರಾಳಿಗಳನ್ನು ಬೈಯಲು ಮತ್ತು ಹೊಡೆಯಲು ಹಳ್ಳಿ ಹೆಂಗಸರ ಮುಖ್ಯ ಅಸ್ತ್ರವೇ ಪೊರಕೆಗಳು. ಕಡೆಯದಾಗಿ ಹೇಳಬೇಕೆಂದರೆ ಈ ಪೊರಕೆಗಳು ನಗರದ ಏಕತಾನತೆ ಮತ್ತು ಗ್ರಾಮಗಳ ವೈವಿಧ್ಯತೆಯನ್ನು ಪ್ರತಿಬಿಂಬಿಸುವ ಸಾಕ್ಷಿ ಮತ್ತು ಸಂಕೇತಗಳಾಗಿವೆ.

ದೇಶೀಯ ತಂತ್ರಜ್ಞಾನ :


ಅಣ್ಣಾ ಸಾಹೇಬರ 'ಚಂದ್ರ ಪ್ರಭಾ' ನೀರುಗನ್

ಡಾ. ಟಿ.ಎನ್ ಪ್ರಕಾಶ ಕಮ್ಮರಡಿ.

ಮದ್ದುಗುಂಡುಗಳಿಂದ ಸಿಡಿಯುವ ಕೋವಿ, ಫಿರಂಗಿಗಳನ್ನು ನೀವು ಕಂಡಿರಬಹುದು. ಆದರೆ ನೀರು ತುಂಬಿ ನೂರಾರು ಅಡಿಗಳಷ್ಟು ದೂರ ಸಿಡಿಸುವ ವಿನೂತನ ಜಗಿ ನೀರಾವರಿ (Sprinkler irrigaron) ಯಂತ್ರ ಒಂದನ್ನು ನೋಡಲು ಉತ್ತರ ಕರ್ನಾಟಕದ ಬೆಳಗಾವಿಯ ಚಿಕ್ಕೋಡಿ ತಾಲ್ಲೂಕಿನ ಸಡಲ್ಗದ ರೈತ ಅಣ್ಣಾ ಸಾಹೇಬ್ ಬಾವೊ ಸಾಹೇಬ ಉದ್ಗಾವಯ ಕುಲುಮೆಗೆ ಹೋಗಬೇಕು. ಒಂದೇ ಹೊಡೆತಕ್ಕೆ 140 ಅಡಿ ದೂರ ನೀರು ಚಿಮ್ಮಿಸುವ, ವಿದ್ಯುತ್ ಅಭಾವದ ನಡುವೆಯೂ ಒಂದು ಗಂಟೆ ಸಿಕ್ಕರೆ ಸಾಕು ಒಂದೇ ಒಂದು ಈ ವಿನೂತನ 'ಜಗಿಮೂತಿ' (Sprinkler Head) ಒಂದೆಕರೆಗೆ 6 ಅಂಗುಲ ನೆಲ ಒದ್ದೆಯಾಗುವಷ್ಟು ನೀರು ಚೆಲ್ಲುವುದು ! ತನ್ನ ಈ ಆವಿಷ್ಕಾರಕ್ಕೆ ಭಕ್ತಿಯಿಂದ ಅಣ್ಣಾಸಾಹೇಬ್ 'ಚಂದ್ರಪ್ರಭೆ' ಎಂದು ನಾಮಕರಣ ಮಾಡಿದ್ದಾರೆ. ಇದರ ಪ್ರಭಾವ ಕಂಡು ಬೆರಗಾದ ತಜ್ಞರು ಇದನ್ನು ನೀರುಗನ್ (Rain Gun) ಎಂದು ಕರೆದಿರುವುದು ಸೂಕ್ತವಾಗಿದೆ. ಆದರೆ ಈ ಗನ್ನು ಹಿಂಸೆಗೆ ಬಾರದೆ ಹಸಿರುಕ್ರಾಂತಿಗೆ, ಪ್ರಗತಿಗೆ ಸಂಕೇತವಾಗಿದೆ.

ಸಾದಾಬಿಳಿ ಉಡುಪು, ಗಾಂದಿ ಟೋಪಿ ಧರಿಸುವ, ಈಗಾಗಲೇ ಮುದಿ ವಯಸ್ಸು ಕಂಡಿರುವ ಅಣ್ಣಾಸಾಹೇಬ್‌ರಿಗೆ ಗ್ರಾಮೀಣ ಕೃಷಿ ಕೈಗಾರಿಕೆ ಯಂತ್ರೋಪಕರಣಗಳ ಬಗ್ಗೆ ಆಸಕ್ತಿ ಹುಟ್ಟಿನಿಂದ ಬಂದಿರುವಂತಹದ್ದು. ಜೋಳದ ದಂಟಿನ ಬೆಂಡಿನ ಸಹಾಯದಿಂದ ನೀರು ಹನಿಗಡಿಯಾರವೊಂದನ್ನು ಚಿಕ್ಕವನಿರುವಾಗಲೇ ತಯಾರಿಸಿ ಅದನ್ನು 1960 ರ ಐತಿಹಾಸಿಕ ಬೆಂಗಳೂರು ಕಾಂಗ್ರೆಸ್ ಅಧಿವೇಶನದಲ್ಲಿ ಪ್ರದರ್ಶಿಸಿದ ಅಣ್ಣಾಸಾಹೇಬ್ 6000 ರೂ ಬಹುಮಾನ ಗಿಟ್ಟಿಸಿದ್ದರು. ಹಾಗೇ ಅಣ್ಣಾಸಾಹೇಬರಿಗೆ ಕಲ್ಲು ಕೆತ್ತನೆ ವಿದ್ಯೆಯೂ ಕರಗತ. ಮುರಿದ ಬುದ್ಧನ ವಿಗ್ರಹವೊಂದನ್ನು ರಿಪೇರಿಮಾಡುವಂತೆ ಇತ್ತೀಚೆಗೆ ಜಪಾನಿನಿಂದ ಆಹ್ವಾನ ಬಂದಿದ್ದು ಅದನ್ನೂ ಅಣ್ಣಾಸಾಹೇಬ್ ಯಶಸ್ವಿಯಾಗಿ ಮುಗಿಸಿ ಹಿಂದಿರುಗಿರುವರು.

ಜಗಿ ನೀರಾವರಿ ಅಣ್ಣಾಸಾಹೇಬರ ಪ್ರಾಂತಕ್ಕೆ ಈಗ್ಗೆ 15-20 ವರ್ಷಗಳ ಹಿಂದೆ ತಲುಪಿದ್ದರೂ, ಪದೇ ಪದೇ ಕೈಕೊಡುವ ವಿದ್ಯುತ್‌ನಿಂದ ಅಷ್ಟೇನು ಉಪಕಾರಿಯಾಗಿರಲಿಲ್ಲ. ಜೊತೆಗೆ ಹೊಲದಲ್ಲಿ ತಂಬಾಕಿಗೆ ವಿಪರೀತ ಜಗಿ ಹುಳ (Aphids) ಮತ್ತು ಬಿಳಿ ಹುಳ (White flies) ಗಳ ಕಾಟವಾಗಿದ್ದರೆ ಕಬ್ಬಿನ ಹೊಲಕ್ಕೆ ಸತತ ನೀರುಕಟ್ಟಿ ಅತೀ ಲವಣಯುಕ್ತ (Salanity) ಸಮಸ್ಯೆ ತಲೆದೋರಿತ್ತು. ಇದಾವುದಕ್ಕೂ ಧೃತಿಗೆಡದ, ತಾಂತ್ರಿಕತೆ ಕಲೆಗಾರಿಕೆಗಳು ವರಪ್ರಧಾನವಾಗಿ ಪಡೆದಿದ್ದ ಅಣ್ಣಾಸಾಹೇಬರು ಸಮಸ್ಯೆಯ ಪರಿಹಾರಕ್ಕೆ ಯೋಚಿಸುತ್ತಲೇ ಇದ್ದರು. ಅಂದು ಚಾಲ್ತಿಯಲ್ಲಿದ್ದ ಜಗಿ ನೀರಾವರಿಯಂತ್ರವನ್ನು ಈ ನಿಟ್ಟನಲ್ಲಿ ಮಾರ್ಪಾಡಿಸುವ ಯೋಚನೆ ಅಣ್ಣಾಸಾಹೇಬರಿಗೆ ಬಂದಿದ್ದೇ ಆ ಸಮಯದಲ್ಲಿ.



ಚಂದ್ರಪ್ರಭಾ ನೀರು ಗನ್ನಿನ ಹುಟ್ಟು

ಚಾಲ್ತಿಯಲ್ಲಿರುವ ಜಗಿ ನೀರಾವರಿಯಂತ್ರವನ್ನು ಅಭ್ಯಸಿಸಿ, ಅಲ್ಪಾವಧಿಯಲ್ಲಿ ಸಿಗುವ ವಿದ್ಯುತ್ ಬಳಸಿ ನೂರಾರು ಅಡಿಗಳಷ್ಟು ದೂರಕ್ಕೆ ರಭಸದಿಂದ ನೀರು ಚಿಮ್ಮಿಸಿ ನೆಲ ಹದಮಾಡುವ, ನೀರು ಚಿಮ್ಮುವ ರಭಸಕ್ಕೆ ಬೆಳೆಗಳಿಗೆ ಬಿದ್ದಿರುವ ಕ್ರಿಮಿಕೀಟಗಳನ್ನೂ ಕೊಚ್ಚಿಹಾಕುವಂತೆ ಮಾರ್ಪಡಿಸಿದ ಸ್ಪ್ರಿಂಕ್ಲರ್ ಮೂತಿಯೊಂದರ ವಿನ್ಯಾಸವನ್ನು ಕಲ್ಪಿಸಿ ತಯಾರಿಸಿ ಅಣ್ಣಾಸಾಹೇಬರು ತಮ್ಮ ಕಬ್ಬಿನ ಹೊಲದಲ್ಲೇ ಪರೀಕ್ಷಿಸಿ ನೋಡಿದರು. ನಂತರ, ತಮ್ಮ ಮನೆಯನ್ನೇ ಕಾರ್ಯಾಗಾರ ಮಾಡಿಕೊಂಡು ವಿವಿಧ ದೂರಕ್ಕೆ ನೀರು ಚಿಮ್ಮಿಸುವ ಮೂತಿಗಳನ್ನು ತಯಾರಿಸಿದರು. ನೀರು ಬೇರೆಯವರ ಹೊಲಕ್ಕೆ ಚಿಮ್ಮಿ ವ್ಯಯವಾಗುವುದನ್ನು ತಡೆಯಲು ಒಂದು ಬೀಗ ಹಾಕುವಂತಹ ವ್ಯವಸ್ಥೆ ಕೂಡ ಮಾಡಿದರು. ಅಂತಿಮವಾಗಿ ತಮ್ಮ ಕನಸಿನ ಕೂಸಾದ 'ಚಂದ್ರಪ್ರಭೆ' ನೀರು ಗನ್ನನ್ನು ಸಾಕಾರಗೊಳಿಸಿದರು.

ಅಣ್ಣಾಸಾಹೇಬರ ಈ ಸಾಧನೆ ಹೇಗೋ ದಾವಣಗೆರೆಯ ಕೃಷಿ ಸಹಾಯಕ ನಿರ್ದೇಶಕರಾದ ಶ್ರೀ ಬಿ.ಡಿ. ಆದಿಮನಿಯವರ ಗಮನಕ್ಕೆ ಬಂದಿತು. ಅವರು ತಕ್ಷಣ ಧಾರವಾಡ ಕೃಷಿ ವಿಶ್ವವಿದ್ಯಾನಿಲಯದ ವಿಸ್ತರಣಾ ಪ್ರಾಧ್ಯಾಪಕರಾದ ಪ್ರೊ. ಸುಂದರ

ಸ್ವಾಮಿಯವರ ಗಮನಕ್ಕೆ ಬರುವಂತೆ ಮಾಡಿದರೆ, ಪ್ರೊಫೆಸರ್‌ರವರು ಹಿಂದೆ ಮುಂದೆ ನೋಡದೆ ತಮ್ಮ ಶಿಷ್ಯ ಅರುಣ್ ಬಲಮಟ್ಟಿಗೆ ಈ ನಿಟ್ಟಿನಲ್ಲಿ ಸಂಶೋಧನೆ ನಡೆಸುವಂತೆ ಪ್ರೇರೇಪಿಸಿದರು. ಈ ಸಂಶೋಧನೆಯ ಪ್ರಾಥಮಿಕ ವರದಿಯ ಪ್ರಕಾರ, ಅಣ್ಣಾಸಾಹೇಬರ ನೀರುಗನ್ನು ಏನಿಲ್ಲಾ ಅಂದರೂ ಶೇ20 ರಷ್ಟು ಸಾಗಾಣಿಕೆಯಲ್ಲಾಗುತ್ತಿರುವ ನೀರಿನ ವ್ಯಯವನ್ನು ತಪ್ಪಿಸುವಂತಿದ್ದು, ಸಾಂಪ್ರದಾಯಿಕವಾದ ಹಾಯು ತೋಡುನೀರಾವರಿಗೆ ಹೋಲಿಸಿದಲ್ಲಿ ಶೇ70 ರಷ್ಟು ನೀರಿನ ಉಳಿತಾಯ ಮಾಡಬಲ್ಲದ್ದಾಗಿದೆ! ಇದರ ಪೈಪಿನ ಮತ್ತು ಮೂತಿಯ ವ್ಯಾಸ 3 ಇಂಚಿನಷ್ಟು ವಿಶಾಲವಾಗಿದ್ದು, ಇದರ ಮೂಲಕ ನೀರುಹಾಯಿಸುವಾಗ ದ್ರವಗೊಬ್ಬರ, ಕ್ರಿಮಿಕೀಟನಾಶಕಗಳು ಅಷ್ಟೇಕೆ ಗೋಬರ್ ಗ್ಯಾಸ್ ಸರಿಯಂತಹ ಸಾವಯವಗೊಬ್ಬರಗಳನ್ನು ಸುಲಭವಾಗಿ ಸಿಂಪಡಿಸಬಹುದು. ಈ ಹಿಂದೆ ತಿಳಿಸಿರುವಂತೆ, ಈ ನೀರುಗನ್ನಿನ ರಭಸಕ್ಕೆ ಬೆಳೆಗಳಿಗೆ ಬೀಳುವ ಕ್ರಿಮಿಕೀಟಗಳನ್ನು ಹೇಳಹೆಸರಿಲ್ಲದಂತೆ ಕೊಚ್ಚಿಹಾಕಬಹುದು.

ಈ ರೀತಿಯ ಸ್ಪಿಂಕ್ಲ್‌ರ್ ಜಗಿಮೂತಿಯೊಂದಕ್ಕೆ ತಗುಲುವ ವೆಚ್ಚ ಸುಮಾರು 3000 ರೂ. ಗಳಾಗಿದ್ದು ಒಂದು ಎಕರೆ ಕಬ್ಬಿನ ಹೊಲಕ್ಕೆ ನೀರು ಜಗಿಸಲು ಇಂತಹಾ ಒಂದು ಮೂತಿ ಸಾಕಾಗುತ್ತದೆ. ಈಗ್ಗೆ ಕಳೆದ ಎರಡು ವರ್ಷಗಳಲ್ಲಿ ಅಣ್ಣಾಸಾಹೇಬ್ ಸುಮಾರು 100 ಈ ರೀತಿಯ ಜಗಿ ಮೂತಿಗಳನ್ನು ತಯಾರಿಸಿ ಕೊಟ್ಟಿರುವರು. ಅಣ್ಣಾಸಾಹೇಬರಿಗೇನು ಇದರಿಂದ ಲಾಭಮಾಡಬೇಕೆನ್ನುವ ಅಥವಾ ಆ ದುರಾಸೆಯ ಪೇಟೆಂಟ್ ಹುಚ್ಚೇನೂ ಇಲ್ಲ. ಆದರೆ, ಸರ್ಕಾರ ಈ ನಿಟ್ಟಿನಲ್ಲಿ ಸಹಾಯ ಪ್ರೋತ್ಸಾಹ ನೀಡಿ ಸ್ವಲ್ಪ ಸಬ್ಸಿಡಿ ನೀಡಿದಲ್ಲಿ ಇದರ ಈಗಿನ ಬೆಲೆ ಇಳಿಸಬಹುದೆಂದು ಆಸೆ ಇದೆ. ಇವರ ಈ ಸಾಧನೆ ದೇಶದ ಹಲವು ಮೂಲೆಗಳಿಗೆ ತಲುಪಿ, ಬೇಡಿಕೆಗಳು ಬರಲು ಶುರುವಾಗಿದೆ. ನಮ್ಮ ಕೇಂದ್ರ ಕೃಷಿಮಂತ್ರಿ ಶ್ರೀ ಸೋಮಪಾಲ್ ಸ್ವಯಂ ಇವರ ಫಾರಂಗೆ ಬಂದು ಈ ನೀರುಗನ್ನನ್ನು ಮೆಚ್ಚಿ ಒಂದು ಯಂತ್ರವನ್ನು ಖರೀದಿಸಿರುವರಂತೆ. ಗುಜರಾತಿನ ರೈತರು ಇದನ್ನು ಮೆಚ್ಚಿರುವುದು ಮಾತ್ರವಲ್ಲ ಕಳೆದ ತಿಂಗಳು ಗುಜರಾತಿನ ಹಿರಿಯ ಕುಶಲಕರ್ಮಿಗಳ ಸನ್ಮಾನ ಸಭೆಯೊಂದು ಅಹ್ಮದಾಬಾದಿನ ಭಾರತೀಯ ನಿರ್ವಹಣಾ ಸಂಸ್ಥೆಯಲ್ಲಿ ಏರ್ಪಡಿಸಿದ್ದು ; ಇದಕ್ಕೆ ಅಣ್ಣಾಸಾಹೇಬರನ್ನು ಆಹ್ವಾನಿಸಿ ಶಾಲುಹೊದಿಸಿ ಸನ್ಮಾನ ಮಾಡಿರುವರು. ಆದರೆ ಅಣ್ಣಾಸಾಹೇಬರ ಈ ಅನ್ವೇಷಣೆ ನಮ್ಮ ರೈತರ ಗಮನಕ್ಕಂತೂ ಬಂದಂತಿಲ್ಲ. ಇವರಿಗೆ ಪ್ರೋತ್ಸಾಹ, ಸನ್ಮಾನಗಳ ದಿನವೂ ಕೂಡಿಬರಬೇಕಾಗಿದೆ.

ಪುಟಾಣಿ ಅಣೆಕಟ್ಟುಗಳು :

ಇದ್ದ ಜನರನ್ನು ಗುಳೆಎಬ್ಬಿಸದ, ಊರು-ಗದ್ದೆಗಳನ್ನು ಮುಳುಗಿಸದ ಈ ಪುಟಾಣಿ ಅಣೆಕಟ್ಟುಗಳ ಉದ್ದೇಶ ಅಡಿಕೆತೋಟಗಳನ್ನು ಬೇಸಿಗೆಯಲ್ಲಿ ತಂಪಾಗಿ ಇಡುವುದು.

ಉತ್ತರ ಕನ್ನಡ ಜಿಲ್ಲೆಯ ಕಾನಸೂರ ಬಳಿಯ ಹುಕ್ಕಳ್ಳಿ ಊರಿನ ಅಡಿಕೆ ಕೃಷಿಕ ವೆಂಕಟ್ರಾಮ್ ಹೆಗಡೆಯವರು ತೋಟದ ಕಾಲುವೆಗಳಲ್ಲಿ ಅಲ್ಲಲ್ಲಿ ಈ ತಡೆಗಟ್ಟುಗಳನ್ನು ನಿರ್ಮಿಸಿದ್ದಾರೆ. ಕಾಲುವೆಯ ಅಗಲಕ್ಕೆ ತಕ್ಕಂತೆ ಸಿಮೆಂಟ್ ಹಲಗೆಗಳನ್ನು ಮಾಡಿಸಿ, ಒಂದರ ಮೇಲೊಂದರಂತೆ ಜೋಡಿಸಿ, ಪೆಟ್ಟಿಗೆಯಂತೆ ಮಾಡಿ ಅದರಲ್ಲಿ ಮಳೆಯ ನೀರನ್ನು ನಿಲ್ಲಿಸುತ್ತಾರೆ. ಮೇಲಿನ ಮತ್ತು ಕೆಳಗಿನ ಹಲಗೆಗಳಲ್ಲಿ ರಂಧ್ರ ಮಾಡಿ, ನೀರು ಹರಿಸುವ ವ್ಯವಸ್ಥೆ ಮಾಡುತ್ತಾರೆ. ಪೆಟ್ಟಿಗೆಯ ತಳಭಾಗದಲ್ಲಿ ಮಣ್ಣು, ಬಾಳೆದಿಂಡು ಹಾಕಿ ನೀರು ಸೋರಿಹೋಗುವ ಪ್ರಮಾಣ ತಡೆಗಟ್ಟುತ್ತಾರೆ. ಮಳೆ ಮುಗಿದು, ಚಳಿಗಾಲ ಆರಂಭವಾಗುವಾಗ ಕಟ್ಟುವ ಈ ಪುಟಾಣಿ ಅಣೆಕಟ್ಟು ಬೇಸಿಗೆಯಲ್ಲಿ ಅಡಿಕೆಯ ತೋಟವನ್ನು ತಂಪಾಗಿ ಇಟ್ಟದೆಯಂತೆ.

ಮೂಲ ಲೇಖಕರು : ಜಿ.ಎಂ. ಹೆಗಡೆ, ಬೊಮ್ನಳ್ಳಿ

ಕೃಪೆ : ಪ್ರಜಾವಾಣಿ 3/3/99

ಸಾಮಾನ್ಯರ ಅಸಾಮಾನ್ಯರ ಶೋಧನೆಗಳಿಗೊಂದು ಪುರಸ್ಕಾರ

ಜನಸಾಮಾನ್ಯರ ಈ ರೀತಿಯ ಅಸಾಮಾನ್ಯ ಶೋಧನೆಗಳನ್ನು ಪ್ರೋತ್ಸಾಹಿಸಿ, ಅವರನ್ನು ತಾಂತ್ರಿಕ ಉದ್ದಿಮೆದಾರರಾಗಿ (Technopreneurs) ಪರಿವರ್ತಿಸಲು ಕೇಂದ್ರ ಸರ್ಕಾರದ ವಿಜ್ಞಾನ ಇಲಾಖೆ (Department of Science & Technology - DST) ವಿಜ್ಞಾನ ಮತ್ತು ಕೈಗಾರಿಕೆ ಸಂಶೋಧನಾ ಇಲಾಖೆ (Deparement of Science & Industrial Research) ಸಹಯೋಗದಿಂದ ಹೊಸದೊಂದು ಯೋಜನೆ ಹಾಕಿಕೊಂಡಿದ್ದು ಈ ಬಗ್ಗೆ ಈ ವರ್ಷದಲ್ಲಿ 50 ಲಕ್ಷ ರೂ. ಗಳನ್ನು ತೆಗೆದಿಡಲಾಗಿದೆ. ಇದು ಅಣ್ಣಾಸಾಹೇಬ್‌ರಂತಹವರಿಗೆ ತಂದ ಗೌರವವಾಗಿದೆ.

ಸಂ.

1. ತಲೆನೋವೇ ? ಗ್ಯಾಸ್ಟ್ರಿಕ್ ತೊಂದರೆಯೇ ?

ಯಾರಿಗಿಲ್ಲ ಈ ತೊಂದರೆ ಎನ್ನುತ್ತೀರಾ ? ಹಿಮಾಚಲ ಪ್ರದೇಶದ ಗೌರಾಚೈನ್ ಕೌರ್ ಬಳಿ ಇದಕ್ಕೆ ಔಷಧಿಯಿದೆ. ಕಹಿ ಔಷಧಿಯಲ್ಲ. ಸೇಬಿನ ಹಣ್ಣು ಅವರು ಹೇಳುವ ಔಷಧಿ. ಆಗಾಗ್ಗೆ ಕಾಡುವ ತಲೆನೋವನ್ನು ಗುಣಪಡಿಸಲು ಬೆಳಿಗ್ಗೆ ಹಸೀ ಹೊಟ್ಟೆಗೆ, ಉಪ್ಪು ಸವರಿದ ಸೇಬಿನ ತುಂಡುಗಳನ್ನು ತಿನ್ನಬೇಕು. ಈ ರೀತಿ ಹದಿನೈದು ದಿನ ಸೇಬು ತುಂಡುಗಳನ್ನು ತಿನ್ನುವುದರಿಂದ ಎಡಬಿಡದೆ ಕಾಡುವ ತಲೆನೋವು ಗುಣವಾಗುವುದಂತೆ.

ಹತ್ತು ಗ್ರಾಂ ಲವಂಗವನ್ನು ಒಂದು ಸೇಬು ಹಣ್ಣಿನ ಚೂರುಗಳೊಂದಿಗೆ ಬೆರೆಸಿ, ಹತ್ತು ದಿನ ಇಡಬೇಕು. ಹತ್ತು ದಿನಗಳ ನಂತರ ಲವಂಗವನ್ನು ತೆಗೆದು ಚಹಾದ ಜೊತೆಗೆ ಸೇವಿಸುವುದರಿಂದ ಗ್ಯಾಸ್ಟ್ರಿಕ್ ತೊದರೆಯಿಂದ ಪಾರಾಗಬಹುದಂತೆ.

2. ಅಮೃತವೀ ಅಮೃತ ಬಳ್ಳಿ :

ಹಿಮಾಚಲ ಪ್ರದೇಶದ ಜನರ ಅನುಭವದ ಪ್ರಕಾರ ಅಮೃತ ಬಳ್ಳಿ *(Tinospora cordifolia)*ಯ ಔಷಧೀಯ ಗುಣಗಳು ಹಲವಾರು.

ಅಂಕುಕ ಸೂದ್ ಎನ್ನುವವರ ಪ್ರಕಾರ, ಅಮೃತಬಳ್ಳಿಯ ಎಲೆಯನ್ನು ಸಕ್ಕರೆಯೊಂದಿಗೆ ಸೇವಿಸುವುದರಿಂದ ಅಸಿಡಿಟಿ, ಅಥವಾ ಗ್ಯಾಸ್ಟ್ರಿಕ್ ತೊಂದರೆ ದೂರವಾಗುವುದು. ಬೆಣ್ಣೆ ಅಥವಾ ತುಪ್ಪದೊಂದಿಗೆ ಸೇವಿಸುವುದರಿಂದ ಮಲಶೋಧನೆ ಸರಾಗವಾಗಿ ಆಗಿ ಅಜೀರ್ಣದ ತೊಂದರೆಯಿಂದ ದೂರವಾಗಬಹುದು. ಜೇನಿನೊಂದಿಗೆ ಸೇವಿಸಿದರೆ ಕೆಮ್ಮು ದೂರ. ಹಾಗೆಯೇ ಶುಂಠಿಯೊಂದಿಗೆ ತಿಂದರೆ, ಮೈ-ಕೈ ನೋವು ಮಾಯ.

ಮನೋಜ್ ದಿಮ್ಮಾನರ ಪ್ರಕಾರ ಅಮೃತಬಳ್ಳಿಯ ಎಲೆಯನ್ನು ಏಲಕ್ಕಿ, ಹಾಗೂ ಜೇನಿನೊಂದಿಗೆ ಬೆರೆಸಿ ಟಿ.ಬಿ. ರೋಗಿಗಳಿಗೆ ಕೊಟ್ಟರೆ, ರೋಗ ಮುಕ್ತರಾಗಲು ಸಹಾಯ. ನಾರಾಯಣ ದರಿಯಾಲರ ಹೇಳಿಕೆಯಂತೆ, ಅಮೃತ ಬಳ್ಳಿಯ ಎಲೆಯನ್ನು ನೀರಿನಲ್ಲಿ ಕುದಿಸಿ, ಸ್ವಲ್ಪ ಉಪ್ಪು ಬೆರೆಸಿ ಸೇವಿಸುವುದರಿಂದ, ಜ್ವರ ನಿಯಂತ್ರಣವಾಗುವುದಲ್ಲದೇ, ರಕ್ತ ಶುದ್ಧಿಗೂ ಇದು ಸಹಾಯಕ.

3. ಔಷಧಿಯಾಗಿ ನೆಕ್ಕಿ ಗಿಡ :

ಅಕ್ಕಿಲ ಗಿಡ ಅಥವಾ ನೆಕ್ಕಿಗಿಡ, ಸಂಸ್ಕೃತದಲ್ಲಿ ನಿರ್ಗಂಧಿ ಎಂದು ಕರೆಯಲ್ಪಡುವ *(Vitex negundo)* ಈ ಸಸ್ಯದ ಔಷಧೀಯ ಗುಣಗಳ ಪಟ್ಟಿಯೇ ಇದೆ, ಹಿಮಾಚಲ ಪ್ರದೇಶದ ಜನರ ಬಳಿ. ಎಲೆಯನ್ನು ಬೆಲ್ಲದೊಡನೆ ಸೇವಿಸುವುದರಿಂದ ಹೊಟ್ಟೆನೋವು ದೂರವಾಗುವುದಂತೆ. ಎಲೆಯನ್ನು ಚೆನ್ನಾಗಿ ಜಜ್ಜಿ ಅದರ ವಾಸನೆಯನ್ನು ಮೂಸುವುದರಿಂದ ತಲೆನೋವು ದೂರವಾಗುವುದಂತೆ. ಹಾಗೆಯೇ, ಜಜ್ಜಿದ ಎಲೆ ಹಾಗೂ ರಸವನ್ನು ಕಣ್ಣಿಗೆ ಹಚ್ಚುವುದರಿಂದ ಕಣ್ಣು ನೋವು ಹಾಗೂ ಕಣ್ಣು ತುರಿಕೆ ದೂರವಾಗುವುದಂತೆ. ಇನ್ನು ಮೈ-ಕೈ ನೋವು ಅಥವಾ ಬಿದ್ದು ಉಂಟಾದ ಊತವಿದ್ದರೆ, ಇದರ ಎಲೆಯನ್ನು ನೀರಿನಲ್ಲಿ ಕುದಿಸಿ, ಉಪ್ಪು ಬೆರೆಸಿ ಶಾಖ ಕೊಡುವುದರಿಂದ ಊತ ಮಾಯವಾಗಿ, ಮೈ-ಕೈ ನೋವು ದೂರವಾಗುವುದಂತೆ.

4. ದಾಳಿಂಬೆಯಲ್ಲೂ ಔಷಧೀಯ ಗುಣ :

20ಗ್ರಾಂ. ದಾಳಿಂಬೆಯ ಸಿಪ್ಪೆ, 10ಗ್ರಾಂ. ನಷ್ಟು ಕರಿ ಕಾಳು ಮೆಣಸು, ಜೊತೆಗೆ 10ಗ್ರಾಂ. ಸಕ್ಕರೆ ಮೂರನ್ನೂ ಕುಟ್ಟಿ ಪುಡಿಮಾಡಿ ಬೆರೆಸಿಟ್ಟುಕೊಂಡು ಬಿಸಿನೀರಿನೊಂದಿಗೆ ದಿನಕ್ಕೆ 3-4 ಸಲ ಸೇವಿಸುವುದರಿಂದ ಕೆಮ್ಮು ಗುಣವಾಗುವುದೆಂಬುದು ಹಿಮಾಚಲ ಪ್ರದೇಶದ ಜನರ ಅನುಭವ.

ಅದೇರೀತಿ ದಾಳಿಂಬೆಯ ಹೂವನ್ನು ನೆರಳಿನಲ್ಲಿ ಒಣಗಿಸಿ, ಪುಡಿಮಾಡಿ ಹಲ್ಲುಜ್ಜಲು ಬಳಸುವುದರಿಂದ ವಸಡಿನಿಂದ ರಕ್ತ ಸೋರುವುದನ್ನು ತಡೆಯಬಹುದೆಂಬುದು ಕೂಡಾ ಅಲ್ಲಿಯ ಜನರ ಅನುಭವ.

ಹಿಮಾಚಲ ಪ್ರದೇಶದ ಜನರ ಅನುಭವ ದಾಳಿಂಬೆ ಸಿಪ್ಪೆ ಮತ್ತು ಹೂವಿಗೆ ಸೀಮಿತವಾಗಿದ್ದರೆ, ಕರ್ನಾಟಕದ ಜನರು ಎಲೆಯಲ್ಲೂ ಅದರ ಔಷಧಿಯ ಸತ್ವ ಕಂಡುಕೊಂಡಿದ್ದಾರೆ. ಬೆಂಗಳೂರಿನ ಮೀನಾಕ್ಷಿ ಶರ್ಮರ ಅನುಭವದಂತೆ ದಾಳಿಂಬೆ ಕುಡಿ ಅಥವಾ ಚಿಗುರು ಎಲೆಗಳನ್ನು ನೀರಿನಲ್ಲಿ ಚೆನ್ನಾಗಿ ಕುದಿಸಿ ಕಷಾಯ ಮಾಡಿ, ಒಮ್ಮೆಗೆ ಒಂದೆರಡು ಚಮಚದ ಪ್ರಮಾಣದಲ್ಲಿ ದಿನಕ್ಕೆ 2-3 ಬಾರಿ ಸೇವಿಸುವುದರಿಂದ ಅಜೀರ್ಣದಿಂದುಂಟಾಗುವ ಬೇಧಿ ನಿಲ್ಲುತ್ತದೆ.

ಮೂಲ : ಹನೀಬೀ 9(4), 1998

5. ತೊನ್ನಿಗೆ ಔಷಧಿ :

ಶ್ರೀಗಂಧವನ್ನು ಒಂದು ಚಿಟಿಕೆ Bleaching powder ಹಾಕಿ ವಾಸನೆ ಹೋಗುವವರೆಗೂ ತೇಯ್ದು, ತೊನ್ನಿರುವ ಜಾಗಕ್ಕೆ ಹಚ್ಚಿದರೆ ತೊನ್ನು ಕಡಿಮೆಯಾಗುವ ಸಾಧ್ಯತೆ ಇದೆ.

ದಾಸಪತ್ರೆ, (*Craptophyllum hortense*)ಯ ಬೇರನ್ನು ಗೋಮೂತ್ರದಲ್ಲಿ ತೇಯ್ದು ತೊನ್ನಿರುವವರು ಅರ್ಧ ಚಮಚ ದಿನಾಲು, ಆರು ತಿಂಗಳುಗಳವರೆಗೆ ತೆಗೆದುಕೊಂಡರೆ ಕಡಿಮೆಯಾಗುವುದು.

ಮಾಹಿತಿ : ದಾಕು ಸಕ್ರಗೌಡರು, ಹಾಲಕ್ಕಿಒಕ್ಕಲಿಗ
ಸಂಗ್ರಹ : ಡಾ. ಎಂ.ಜಿ. ಚಂದ್ರಕಾಂತ್, ಜಿ.ಕೆ.ವಿ.ಕೆ.

ನಳಪಾಕ - ಕನಕಪುರ ತಾಲ್ಲೂಕಿನ ವಿದ್ಯಾರ್ಥಿಗಳ ಸಂಗ್ರಹ

1. ಅಣಬೆ ಸಾರು :

ಮೊದಲಿಗೆ ಹಸಿ ಈರುಳ್ಳಿ, ಸುಟ್ಟ ಈರುಳ್ಳಿ, ತೆಂಗಿನ ಕಾಯಿ, ಟಮೋಟಹಣ್ಣು, ದನಿಯ ಪುಡಿ, ಮೆಣಸಿನಕಾಯಿ, ಇವುಗಳೆಲ್ಲವನ್ನು ಚೆನ್ನಾಗಿ ರುಬ್ಬಿಟ್ಟುಕೊಳ್ಳಬೇಕು. ಒಂದು ಮಡಿಕೆಯನ್ನು ಒಲೆಯ ಮೇಲಿಟ್ಟು ಅದಕ್ಕೆ ಎಣ್ಣೆ, ಸಾಸಿವೆ, ಈರುಳ್ಳಿ ಇವುಗಳೆಲ್ಲವನ್ನೂ ಹಾಕಿ ಒಗ್ಗರಣೆ ಮಾಡುವುದು. ಇದಕ್ಕೆ ತೊಳೆದ ಅಣಬೆಯನ್ನು ಹಾಕಿ ಚೆನ್ನಾಗಿ ಹುರಿಯಬೇಕು, ನಂತರ ಇದಕ್ಕೆ ಮೊದಲೇ ರುಬ್ಬಿಕೊಂಡ ಸಂಬಾರವನ್ನು ಒಗ್ಗರಣೆಯಲ್ಲಿ ಹೊಯ್ದು ಚೆನ್ನಾಗಿ ಬೇಯಿಸಬೇಕು. ನಂತರ ಕೆಳಗೆ ಇಳಿಸಿ ಇದನ್ನು ಊಟದಲ್ಲಿ ಬಳಸಬಹುದು.

ಮೂಲ: ವೆಂಕಟ ಲಕ್ಷ್ಮಮ್ಮ, ದೊಡ್ಡಮರಳವಾಡಿ
ಸಂಗ್ರಹ: ವಿ.ಸುಮ

2. ರಾಗಿ ಶಾವಿಗೆ :

ಹೊಸ ತೆನೆ ರಾಗಿಯನ್ನು ತೊಳೆದು ಒಣಗಿಸಿ ರಾಗಿ ಕಲ್ಲಿನಿಂದ ಬೀಸಿ, ಹಿಟ್ಟು ಗಂಟು ಮಾಡಿಕೊಳ್ಳಬೇಕು. ಉಪ್ಪನ್ನು ಸೇರಿಸಿ ಗಂಟು ಮಾಡದೆ ಮುದ್ದೆ ಮಾಡಿಕೊಂಡು ಶಾವಿಗೆ ಒತ್ತುವ ಒರಳಿನಿಂದ ಒತ್ತಬೇಕು. ಹೀಗೆ ಒತ್ತಿಕೊಂಡ ಶಾವಿಗೆಗೆ ಮೊದಲೇ ತಯಾರಿಸಿ ಕೊಂಡಿದ್ದ ಬೇಳೆ ಸಾರಿಗೆ ತುಪ್ಪ ಹಾಕಿಕೊಂಡು ಊಟಮಾಡಬಹುದು.

3. ಗೆಣಸಿನ ಗಿಣ್ಣು :

ಸಿಹಿ ಗೆಣಸನ್ನು (ಬೆಲ್ಲ ಗೆಣಸು) ಚೆನ್ನಾಗಿ ಬೇಯಿಸಿಕೊಂಡು ಮೇಲಿನ ಸಿಪ್ಪೆತೆಗೆದು ಮೊದಲೇ ಕಾಯಿ ಹಾಲನ್ನು ತಯಾರಿಸಿಕೊಂಡಿದ್ದು, ಕುದಿಯುತ್ತಿರುವ ಕಾಯಿ ಹಾಲಿಗೆ ಸಿಪ್ಪೆ ತೆಗೆದ ಗೆಣಸನ್ನು ಪುಡಿಮಾಡಿ ಹಾಕಿ ಕುದಿಸಿ ತಿರುಗಿಸಿ ನಂತರ ಕೆಳಗೆ ಇಳಿಸಿಕೊಳ್ಳಬೇಕು. ಈಗ ಗೆಣಸಿನ ಗಿಣ್ಣು ತಿನ್ನಲು ಸಿದ್ಧವಾಗುತ್ತದೆ.

ಮೂಲ: ಲಕ್ಷ್ಮೀದೇವಮ್ಮ, ಗಿರಿಯಪ್ಪ, ಕನಕಪುರ
ಸಂಗ್ರಹ: ಮಧುರೈವೀರ

4. ಅಣ್ಣೆಸೊಪ್ಪು ರೊಟ್ಟಿ :

ಬೇಕಾಗುವ ಪದಾರ್ಥಗಳು : ಅಣ್ಣೆ ಸೊಪ್ಪು, ರಾಗಿಹಿಟ್ಟು, ಈರುಳ್ಳಿ, ಮೆಣಸಿನಕಾಯಿ.

ವಿಧಾನ: ಅಣ್ಣೆ ಸೊಪ್ಪನ್ನು ನೀರಿನ ಜೊತೆ ಒಂದು ಪಾತ್ರೆಯಲ್ಲಿ ಹಾಕಿ ಚೆನ್ನಾಗಿ ಬೇಯಿಸಬೇಕು. ಬೇಯಿಸಿದಂತಹ ಅಣ್ಣೆಸೊಪ್ಪನ್ನು ಹೊರತೆಗೆದು ಅದನ್ನು ರಾಗಿ ಹಿಟ್ಟಿನ ಜೊತೆ ಪಾತ್ರೆಯಲ್ಲಿ ಚೆನ್ನಾಗಿ ಕಲಕಬೇಕು. ನಂತರ ಈರುಳ್ಳಿ ಮತ್ತು ಮೆಣಸಿನಕಾಯಿಗಳನ್ನು ಸಣ್ಣ ಸಣ್ಣ ಚೂರುಗಳಾಗಿ ಮಾಡಿ ರಾಗಿ ಮಿಶ್ರಣದ ಜೊತೆ ಬೆರಸಿ ರೊಟ್ಟಿ ಹಂಚಿನ ಸಹಾಯದಿಂದ ಅಣ್ಣೇಸೊಪ್ಪು ರೊಟ್ಟಿಯನ್ನು ಮಾಡುತ್ತಾರೆ.

5. ಹುರುಳಿ ಕಾಳಿನ ಜುಮ್ಮ :

ಹುರುಳಿ ಕಾಳು, ಕಡ್ಲೆಬೇಳೆ, ತೊಗರಿ ಬೇಳೆ, ಜೀರಿಗೆ, ಚಕ್ಕೆ, ಲವಂಗ, ಕೊತ್ತಂಬರಿ ಬೀಜ ಹಾಕಿಕೊಂಡು ಹುರಿದು ಅದನ್ನು ಪುಡಿಮಾಡಿಕೊಳ್ಳಬೇಕು. ಇದನ್ನು ಹಸಿ ಮೆಣಸಿನ ಕಾಯಿ, ಹುಣಸೇ ಹಣ್ಣು, ತೆಂಗಿನ ಕಾಯಿ, ಅರೆದುಕೊಂಡು, ಉಪ್ಪು, ಟೊಮಾಟೋ ಹಣ್ಣನ್ನು ಹಾಕಿಕೊಂಡು ಬೇಯಿಸಬೇಕು. ಇದಕ್ಕೆ ಸಾಸಿವೆ, ಬೆಳ್ಳುಳ್ಳಿ, ಕರಿಬೇವಿನ ಸೊಪ್ಪನ್ನು ಹಾಕಿ ಒಗ್ಗರಣೆ ಕೊಡುವುದು. ಇದನ್ನು ಅಕ್ಕಿ ಅಥವಾ ರಾಗಿ ರೊಟ್ಟಿಯೊಂದಿಗೆ ಹಾಕಿಕೊಂಡು ತಿನ್ನಲು ರುಚಿಯಾಗಿರುತ್ತದೆ.

ಮಾಹಿತಿ : ತುಳಸೀಬಾಯಿ, ದೊಡ್ಡ ಮರಳಿವಾಡಿ
ಸಂಗ್ರಹ : ಗೀತಾ

6. ರಾಗಿ ಕಡುಬು :

ರಾಗಿಯನ್ನು ನೀರಿನಲ್ಲಿ ತೊಳೆದು ಒಣಗಿದ ನಂತರ ಹಿಟ್ಟನ್ನು ಮಾಡಿಸಿ. ಒಂದು ಬುಟ್ಟಿಗೆ ತೆಳುವಾದ ಬಟ್ಟೆಯನ್ನು ಕಟ್ಟಿ ಅದನ್ನು ಸ್ವಲ್ಪ ಸ್ವಲ್ಪವೇ ಜರಡಿ ಹಿಡಿಯಬೇಕು. ಅನಂತರ ಕಡ್ಲೆಬೇಳೆ, ಹೆಸರು ಬೇಳೆ, ನೀರಿನಲ್ಲಿ ನೆನಸಿ ಅದು ನೆನೆದ ನಂತರ ಅದನ್ನು ರುಬ್ಬಿ, ಅದರಲ್ಲಿ ಕೊತ್ತಂಬರಿ ಸೊಪ್ಪು, ಈರುಳ್ಳಿ, ಹಸಿಮೆಣಸಿನಕಾಯಿ ಹಾಕಿ. ಒಗ್ಗರಿಸಿ. ಇವೆಲ್ಲವನ್ನೂ ರುಬ್ಬಿದ ಹಿಟ್ಟಿಗೆ ಹಾಕಿ ಕೈಯಿಂದ ಕಲಸಿದ ನಂತರ ಒಲೆಯ ಮೇಲೆ ಇಡಬೇಕು. ಬೆಂದ ನಂತರ ಅದನ್ನು ಕೆಳಗೆ ಇಳಿಸಿ ಉಪಯೋಗಿಸಬಹುದು.

ಸಂಗ್ರಹ: ಆಶಾ, ದೊಡ್ಡಮರಳವಾಡಿ

7. ರಾಗಿ ಶಾವಿಗೆ :

ಒಂದು ಅಳತೆ ನೀರನ್ನು ತೆಗೆದುಕೊಳ್ಳಬೇಕು. ನೀರು ಚೆನ್ನಾಗಿ ಕೊತ ಕೊತ ಕುದಿಯುತ್ತಿರುವಾಗ ಅದಕ್ಕೆ ಸ್ವಲ್ಪ ಜೀರಿಗೆ, ಉಪ್ಪು, ಹಾಗೂ ಹಸಿ ರಾಗಿ ಹಿಟ್ಟನ್ನು ಎಸರಿಗೆ ಹಾಕಬೇಕು. ಆ ಮೇಲೆ ಉಳಿದ ರಾಗಿ ಹಸಿಹಿಟ್ಟನ್ನು ಹಾಕಿ ಚೆನ್ನಾಗಿ ತಿರುವಬೇಕು. ಬೇಯಿಸಿದ ಹಿಟ್ಟನ್ನು ಶಾವಿಗೆ ಪ್ಲೇಟ್ ಅಚ್ಚಿನಲ್ಲಿ ಇಟ್ಟು ಒತ್ತಿದಾಗ ಉದ್ದವಾದ ಎಳೆಗಳು ಬರುತ್ತವೆ. ತೆಂಗಿನ ಕಾಯಿ, ಗಸಗಸೆ, ಶುಂಠಿ, ಕಡಲೆ, ಯಾಲಕ್ಕಿ, ಹಾಕಿ ರುಬ್ಬಿಟ್ಟುಕೊಂಡಿರಬೇಕು. ಒಂದು ಅಳತೆ ನೀರನ್ನು ಕುದಿಸಬೇಕು. ನಂತರ ಕುದಿಯುವ ನೀರಿಗೆ ರುಬ್ಬಿದ್ದನ್ನು ಹಾಕಿ ಕುದಿಸಬೇಕು. ಎಷ್ಟು ಸಿಹಿ ಬೇಕೋ ಅಷ್ಟು ಬೆಲ್ಲ ಹಾಕಬೇಕು. ಇಷ್ಟೆಲ್ಲ ಹಾಕಿ ಚೆನ್ನಾಗಿ ಕುದಿಸಿ ಶಾವಿಗೆ ಎಳೆಗೆ ಕುದಿಸಿರುವ ಕೀರನ್ನು ಹಾಕಿಕೊಂಡು ತುಪ್ಪವನ್ನು ಹಾಕಿಕೊಂಡು ರುಚಿ ನೋಡಬಹುದು.

ಸಂಗ್ರಹ: ಜಯಕೃಪ, ಮರಳವಾಡಿ.

1. ಪರಿಸರ ಪ್ರಿಯ ಕೃಷಿ ಕೈಪಿಡಿ

ಲೇಖಕರು : ವಿಜಯ್ ಅಂಗಡಿ, ಸಂಚಾಲಕರು, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ನಂ.2102/ಎ. ರಂಗೋಲಿ ಹಳ್ಳ, ಹಾಸನ. ಬೆಲೆ - 25 ರೂ.

ಸಾವಯವ ಕೃಷಿ ಆರಂಭಿಸಬೇಕೆಂದು ಮುಂದೆ ಬರುವವರಿಗೆ, ಸಾವಯವದ ಪರಿಚಯ ಮಾಡಿಕೊಡಬಲ್ಲ ಕೈಪಿಡಿ ಇದು. ಸಾವಯವ ಪದಾರ್ಥಗಳ ತಯಾರಕರು, ಸಾವಯವ ಕೃಷಿ ಕುರಿತ ಪುಸ್ತಕಗಳು, ಪತ್ರಿಕೆಗಳು, ಸಂಸ್ಥೆಗಳು, ಜೊತೆಗೆ ಈಗಾಗಲೇ ಸಾವಯವ ಕೃಷಿಯಲ್ಲಿ ತೊಡಗಿರುವ ವ್ಯಕ್ತಿಗಳ ಪರಿಚಯ, ವಿಳಾಸ ಎಲ್ಲವುಗಳ ಪಟ್ಟಿಯೇ ಇದರಲ್ಲಿದೆ. ಇವುಗಳ ಜೊತೆಗೆ ಕೆಲವು ಪದ್ಧತಿಗಳು, ಕಿವಿಮಾತುಗಳು ರೈತರಿಗೆ ಆರಂಭದ ಮಾಹಿತಿ ಒದಗಿಸುವುದರಲ್ಲಿ ಒತ್ತುಕೊಟ್ಟಿದೆ.

ಎಲ್ಲಕ್ಕಿಂತಲೂ ವಿಶಿಷ್ಟವಾದದ್ದು ಹಾಸನ ಜಿಲ್ಲೆಯ ಪರಿಸರ ಪ್ರಿಯ ಕೃಷಿಕರ ಸಂಘಟನೆಯ ಕುರಿತಾದ್ದ ಲೇಖನ. ಹಾಸನ ಜಿಲ್ಲೆಯ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಘಟಕವು ಪ್ರತಿ ತಿಂಗಳು ಪರಿಸರ ಪ್ರಿಯ ಕೃಷಿಕರ ಸಭೆಗಳನ್ನು ಏರ್ಪಡಿಸುತ್ತಾ ಬಂದಿದ್ದು, ಇದೀಗ ಈ ಪರಿಸರ ಪ್ರಿಯ ಕೃಷಿಕರ ಸಂಘಟನೆ, ಬೆಳ್ಳಿ ಹಬ್ಬ ಆಚರಿಸಿದೆ. ಈ ಸಂಘಟನೆಯ ಹುಟ್ಟು, ಬೆಳವಣಿಗೆ, ಯಶಸ್ಸಿನ ಹಿನ್ನೆಲೆಯನ್ನು ಚಿತ್ರಿಸಿರುವ ಲೇಖನ ಇದೇ ರೀತಿಯ ಸಂಘಟನೆ ಇತರ ಜಿಲ್ಲೆಗಳಲ್ಲೂ ಹುಟ್ಟುಹಾಕುವುದಕ್ಕೆ ಪ್ರೇರಣೆ ನೀಡುವಂತಹದ್ದು.

2. ನಿಸರ್ಗದತ್ತ ಆಹಾರ

ಸಂಗ್ರಹ: ವಿದ್ಯಾ ನಾಯಕ್, ಪ್ರಕಾಶಕರು : ನಾಗರಿಕ ಸೇವಾ ಟ್ರಸ್ಟ್ (ರಿ) ಗುರುವಾಯನ ಕೆರೆ - 574 217. ಬೆಲೆ - 10/- ರೂ

ಗೃಹಿಣಿ ಮಾಡುವ ಅತ್ಯಂತ ಮಹತ್ವದ ಕೆಲಸ ಅಡಿಗೆ-ಆಹಾರ ತಯಾರಿಕೆ. ಇಂತಹದೊಂದು 'ಅಡಿಗೆ ಪುಸ್ತಕ' ಈ 'ನಿಸರ್ಗದತ್ತ ಆಹಾರ'ವೆಂದರೆ ಅಷ್ಟೇನೇ, ಇದು ನನಗಲ್ಲ ಎಂದು ತಳ್ಳಿಬಿಡಬೇಡಿ. ಮಾರುಕಟ್ಟೆಯಲ್ಲಿ ದೊರೆಯುವ ಇತರ ಅಡಿಗೆ ಪುಸ್ತಕಗಳಂತಲ್ಲ ಇದು. ರುಚಿಯಷ್ಟೇ, ಆರೋಗ್ಯಕ್ಕೂ ಮಹತ್ವನೀಡುವ ಅಡಿಗೆಗಳ ಸಂಗ್ರಹ ಇದು. ಪೇಟೆಯಲ್ಲಿ ದೊರೆಯುವ ತರಕಾರಿಗಳನ್ನು ಹುಡುಕಿಕೊಂಡು ಹೋಗದೆ ಮನೆಯ ಸುತ್ತ ಮುತ್ತ ದೊರೆಯುವ ಸೊಪ್ಪು, ಚಿಗುರು, ತೊಗಟೆಗಳಿಂದಲೇ ಮಾಡಬಹುದಾದ ಅಡುಗೆಗಳ ಪಟ್ಟಿಯೇ ಇದರಲ್ಲಿದೆ.

ದುಡ್ಡು ಬಿಸಾಕಿದರೆ, ಯಾವ ಹೋಟೇಲಿನಲ್ಲಿಯೂ ಊಟದೊರಕೀತು; ಆದರೆ, ತನ್ನ ಮನೆಮಂದಿಗೆ ಬರೀ ರುಚಿಕರ ಊಟವಷ್ಟೇ ಅಲ್ಲ, ಅವರ ಆರೋಗ್ಯವೂ ಚೆನ್ನಾಗಿರಬೇಕೆಂಬ ಕಾಳಜಿ ಮನೆಯ ಗೃಹಿಣಿಗಲ್ಲದೆ, ಬೇರೆಲ್ಲೂ ಇಲ್ಲ. ಈ ಕಾಳಜಿಗಳೆಲ್ಲಾ ಒಟ್ಟಾಗಿ ಮಹಿಳಾ ಜಾಗೃತಿ ವೇದಿಕೆಯು ಸಹಜ ಆಹಾರದ ಅಡಿಗೆಯನ್ನು ಪುಸ್ತಕರೂಪದಲ್ಲಿ ತಂದಿದ್ದಾರೆ.

3. ಜನತಾ ಜೀವ ವೈವಿಧ್ಯ ರಿಜಿಸ್ಟರ್- ಕಮದೋಡ

ಲೇಖಕರು : ಟಿ.ಎಸ್. ಚನ್ನೇಶ್ ಮತ್ತು ಮಹೇಶ್ವರಗೌಡ ವಿ. ಪಾಟೀಲ್. ಜೀವ ವೈವಿಧ್ಯ ಸಂರಕ್ಷಣಾರ್ಥ ಆದ್ಯತಾ ಯೋಜನೆ (BCPP) ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿ, ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್, ಬೆಂಗಳೂರು.

ಜಗತ್ತಿನಾದ್ಯಂತ ನಿಸರ್ಗ ನಿಧಿ- ಇಂಡಿಯಾ (WWF - India) ಪ್ರಾಯೋಜನೆಯ ಅಡಿಯಲ್ಲಿ ರೂಪುಗೊಂಡ ಪುಸ್ತಕ ಇದು. ಲೇಖಕರ ಮಾತುಗಳಲ್ಲೇ ಹೇಳುವುದಾದರೆ, ಊರಿನ ಇತಿಹಾಸ, ಜೀವಜಾತಿ, ಜನ, ಜನಪದಜ್ಞಾನ, ಜೀವ ಸಂಪನ್ಮೂಲ ಕುರಿತು ಬಳಕೆ ಮತ್ತು ನಿರ್ವಹಣೆಗಿರುವ ಸ್ಥಳೀಯ ಜನಪದ ಜ್ಞಾನವನ್ನು ದಾಖಲು ಮಾಡುವುದು, ಈ ರಿಜಿಸ್ಟರ್‌ನ ಉದ್ದೇಶ. ಜೊತೆಗೆ, ಜನಪರ ಜ್ಞಾನವನ್ನು ಮತ್ತು ಅವರ ಜೀವವೈವಿಧ್ಯ ತಿಳುವಳಿಕೆಯನ್ನು ದಾಖಲು ಮಾಡಿ, ಆಯಾ ಜನತೆಯ ಆಸ್ತಿಯನ್ನಾಗಿ ಮಾಡುವುದು ಕೂಡಾ, ಪುಸ್ತಕದ ಉದ್ದೇಶ.

ಗ್ರಾಮದ ಸಸ್ಯ ಮತ್ತು ಪ್ರಾಣಿ ಸಂಪತ್ತಿನ ಕುರಿತಾದ ದಾಖಲಾತಿ ಮೆಚ್ಚುವಂತಹದ್ದು. ಪೇಟೆಂಟ್ ಕಾಯ್ದೆಯನ್ನು ಎದುರಿಸಲು ನಾವು ಸನ್ನದ್ಧರಾಗಬೇಕಾದರೆ ಇಂತಹ ದಾಖಲಾತಿ ಹಳ್ಳಿ ಹಳ್ಳಿಯಲ್ಲೂ ನಡೆಯಬೇಕು. ಈ ರೀತಿಯ ಸ್ಥಳೀಯ ಸಂಪತ್ತಿನ ಹೆಸರಿನ ದಾಖಲಾತಿಯೊಂದಿಗೆ ಆ ಕುರಿತಾದ ಸ್ಥಳೀಯ ಜ್ಞಾನ ಸಂಪತ್ತನ್ನು ದಾಖಲಿಸುವುದು ಕೂಡಾ ಅಷ್ಟೇ ಪ್ರಾಮುಖ್ಯವಾದದ್ದು. ಹಳ್ಳಿ ಎಂದ ಮೇಲೆ ಅವರದ್ದೇ ಆದ ಕೆಲವೇ ಕೆಲವಾದರೂ ಆಚರಣೆಗಳು, ಜ್ಞಾನಗಳು, ಪದ್ಧತಿಗಳು ಇದ್ದೇ ಇರುತ್ತವೆ. ಅಂತಹ ಯಾವುದೇ ದಾಖಲಾತಿಗಳೂ ಕಾಣಬರದಿರುವುದು ಆಶ್ಚರ್ಯಕರವಾಗಿದೆ. ಲೇಖಕರೇ ಹೇಳಿರುವಂತೆ ಅಧ್ಯಯನ ನಡೆಸಿದ ಗ್ರಾಮ, ಬೀಜೋತ್ಪಾದನ ಕಂಪೆನಿಗಳಿಗೆ ತಂಗುದಾಣ ವಾಗಿಬಿಟ್ಟಿದೆ. ಬಹುಶಃ ಹೀಗಾಗಿ ಹೊರಗಿನಿಂದ ದಾಳಿನಡೆಸುತ್ತಿರುವ ಮಾಹಿತಿಯ ಮಹಾಪೂರ ಸ್ಥಳೀಯ ಜ್ಞಾನವನ್ನೇ ಕೊಚ್ಚಿಹಾಕಿರಬಹುದು. ಬಹುಶಃ ವಯೋವೃದ್ಧ ಹಿರಿಯರಿಂದ ಮಾಹಿತಿ ಸಂಗ್ರಹಣೆಗೆ ಒತ್ತುಕೊಟ್ಟಿದ್ದಲ್ಲಿ ಪುಸ್ತಕ ಹೆಚ್ಚು ಪರಿಪೂರ್ಣವಾಗುತ್ತಿತ್ತೇನೋ ?

ವೈವಿದ್ಯತೆಯ ಅಧ್ಯಯನ ಸ್ವತಪೂರ್ಣವಾಗಬೇಕಾದರೆ; ಹುಡುಕಾಟದ ನಿಜವಾದ ಹಂಬಲ, ಹಸಿವು ಇರಬೇಕು. ಆಗ, ಮನೆಯ ಮಹಿಳೆಯ ಹಿತ್ತಲಿನಲ್ಲಿ, ಕೈ ತೋಟಕ್ಕಾಗಿ ಹುಡುಕಿ ತೆಗೆದಿಟ್ಟ ಬೀಜ ವೈವಿಧ್ಯ ಕಾಣಿಸುತ್ತದೆ. ಸದ್ದಿಲ್ಲದೆ ನಡೆಯುವ ಆಚರಣೆಗಳಲ್ಲಿ ಮಹತ್ವದ ಅರ್ಥಗಳು ಗೋಚರಿಸುತ್ತವೆ. ಕಲೆ, ಆಟ, ಹಬ್ಬ, ಸಂಪ್ರದಾಯಗಳಲ್ಲಿ ಅದರದ್ದೇ ವಿಶೇಷಗಳು ಕಾಣಸಿಗುತ್ತವೆ. ಈ ನಿಟ್ಟಿನಲ್ಲಿ ಲೇಖಕರ ಪ್ರಯತ್ನ ಸಾಲದೆನಿಸುತ್ತದೆ.

ಕೃಷಿ ಬೆಳೆಗಳನ್ನು ದಾಖಲಿಸುವಾಗ ; ಸ್ಥಳೀಯ ತಳಿಗಳ ಗುಣಲಕ್ಷಣಗಳನ್ನೂ ಕೊಟ್ಟಿದ್ದಲ್ಲಿ ಪೇಟೆಂಟ್ ಕಾಯ್ದೆಯನ್ನು ಎದುರಿಸಲು ದಾಖಲಾತಿ ಹೆಚ್ಚು ಸತ್ವಶಾಲಿಯಾಗುತ್ತಿತ್ತೇನೋ ?

ಶಾಲೆಗಳಲ್ಲಿ ಸಂಭ್ರಮಿಸಿದ 'ಹೊನ್ನೇರು'

'ಹೊನ್ನೇರು' ಎಂದರೆ ಹೊನ್ನಿನ ಏರು, ಅರ್ಥಾತ್ ಚಿನ್ನದ ನೇಗಿಲು. ಮುಂಗಾರು ಮಳೆಯ ಮೊದಲು ಉಳುಮೆಕಾಲಕ್ಕೆ ಹಳ್ಳಿಗರು ಆಚರಿಸುವ ವಿಶಿಷ್ಟ ಕೃಷಿ ಆಚರಣೆ 'ಹೊನ್ನೇರು', ಕೃಷಿ ಆರಂಭದ ದ್ಯೋತಕ, ಸಮೃದ್ಧಿಯ ಸಂಕೇತ.

ಕಳೆದ 150 ವರ್ಷಗಳ ಬ್ರಿಟೀಷರು ರೂಪಿಸಿದ ಶಿಕ್ಷಣ 'ಹೊನ್ನೇರು' ವಿನಂತಹ ಸ್ಥಳೀಯ ಆಚರಣೆಗಳನ್ನು, ಅವುಗಳ ಜ್ಞಾನವನ್ನು ಮರೆಮಾಚಿ ಪಾಶ್ಚಿಮಾತ್ಯ ಸಂಸ್ಕೃತಿ ಸೃಷ್ಟಿಸಿದ ವಿಜ್ಞಾನ ಮತ್ತು ಅದರ ಅದ್ಭುತಗಳನ್ನು ಹೇಳಲಷ್ಟೇ ಸೀಮಿತಗೊಂಡಿದೆ. ಗುಮಾಸ್ತರನ್ನು ರೂಪಿಸುವ ಉದ್ದೇಶದ ಈ ಶಿಕ್ಷಣ ಪದ್ಧತಿ ಶತಮಾನಗಳಿಂದ ಸಾಗಿಬಂದ ಹಳ್ಳಿಗರ ಸರಳ, ಸುಸ್ಥಿರ, ಪರಿಸರ ಪ್ರಿಯ ದೇಶೀಪದ್ಧತಿ ಮತ್ತು ಜ್ಞಾನದ ಬಗ್ಗೆ ಏನನ್ನೂ ಕಲಿಸುತ್ತಿಲ್ಲ. ಜನಪದಲೋಕದ ವೈಭವವನ್ನು ತೋರುತ್ತಿಲ್ಲ. ಶಾಲೆ, ಕಲಿಯುವ ಮಕ್ಕಳಿಗೆ ತಮ್ಮದೇ ಲೋಕದ ಅದ್ಭುತಗಳನ್ನು ಕಲಿಸಲಾರದಷ್ಟು ಜಡ್ಡುಗಟ್ಟಿ ಕುಳಿತಿದೆ.

ಈ ನಿಟ್ಟಿನಲ್ಲಿ ಜೀವವೈವಿಧ್ಯ ಮತ್ತು ಜನಪರ ಸಂಸ್ಕೃತಿಯ ಸಂರಕ್ಷಣೆಗೆ ಶ್ರಮಿಸುತ್ತಿರುವ ಗ್ರೀನ್ ಪ್ರತಿಷ್ಠಾನ, ದೇಶೀಯ ತಂತ್ರಜ್ಞಾನ ಮತ್ತು ಸುಸ್ಥಿರ ಕೃಷಿಗೆ ಒತ್ತು ನೀಡುವ ಹಿತ್ತಲ ಗಿಡ, ಸಾವಯವ ಕೃಷಿಯ ಒಲವುಳ್ಳ ಹೇರಿಂದ್ಯಾಪನಹಳ್ಳಿಯ ಸ್ವಾಮಿ ವಿವೇಕಾನಂದ ರೈತಸಮೂಹ ಈ ಮೂವರೂ ಒಗ್ಗೂಡಿ ಕನಕಪುರ ತಾಲ್ಲೂಕಿನ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪರಂಪರಾಗತ ಕೃಷಿ ಮತ್ತು ಜೀವವೈವಿಧ್ಯ ಸಂರಕ್ಷಣಾ ಸ್ಪರ್ಧೆ 'ಹೊನ್ನೇರು - 98' ನ್ನು ಏರ್ಪಡಿಸಿದ್ದವು. ಪ್ರಬಂಧವೆಂದರೆ ಪೇಜುಗಟ್ಟಲೆ ಉರು ಹಚ್ಚಿ ಬರೆಯಬೇಕೆಂದುಕೊಂಡಿದ್ದ ಮಕ್ಕಳು ನಿಮ್ಮ ಅಜ್ಜ-ಅಜ್ಜಿಯರು, ಅಪ್ಪ-ಅಮ್ಮಂದಿರು, ಊರಿನ ಹಿರಿಯರಿಂದ ವಿಷಯ ಸಂಗ್ರಹಿಸಿ ಬರೆಯಿರಿ ಎಂದು ಹೇಳಿದಾಗ ಅಚ್ಚರಿಯಿಂದ ಕಣ್ಣರಳಿಸಿದವು.

ಒಟ್ಟು 14 ಶಾಲೆಗಳಿಂದ 250 ಮಕ್ಕಳು ಸ್ಪರ್ಧೆಯಲ್ಲಿ ಭಾಗವಹಿಸಿ ಅಜ್ಜಂದಿರನ್ನು ಕೇಳಿ ಹಳೇ ಬೀಜಗಳು, ಅಜ್ಜಿಯರನ್ನು ಕೇಳಿ ಜನಪದ ಕತೆಗಳು, ಅಮ್ಮಂದಿರನ್ನು ಕೇಳಿ ಹಳೇ ಅಡಿಗೆ ಪದ್ಧತಿಗಳು ಉರುಳುತ್ತಿರುವ ಊರಿನ ಕೊನೆಯ ತಲೆಗಳನ್ನು ಕೇಳಿ ನಾಟೀವೈದ್ಯ ಪದ್ಧತಿಗಳು, ನೂರಾರು ಗಾದೆ, ಒಗಟುಗಳನ್ನು ಸಂಗ್ರಹಿಸಿದ್ದರು. ಸಂಗ್ರಹಕ್ಕಿಂತಲೂ ಮಿಗಿಲಾಗಿ ಇಷ್ಟೆಲ್ಲಾ ವೈವಿಧ್ಯಮಯ ವಿಚಾರಗಳು ಗಮನಾರ್ಹ. ಪ್ರತಿ ವಿದ್ಯಾರ್ಥಿಗೂ ಎನಿಲ್ಲಾಂದರೂ ಮನುಷ್ಯರು ಮತ್ತು ಪ್ರಾಣಿಗಳ ಬಗ್ಗೆ 7 ನಾಟಿ ಔಷಧಿಗಳು, 20 ವಿಧದ ಆಹಾರದ ಬೀಜ ತಳಿಗಳು, ತರಕಾರಿ, ಮರಗಳೂ. ನಾಲ್ಕು ನಾಟೀ ಅಡಿಗೆಗಳು ಈ ಸ್ಪರ್ಧೆಯ ಮೂಲಕ ಅರಿವಾಗಿರುತ್ತದೆ. ಇನ್ನು ಕೃಷಿ, ಪರಿಸರ ಮತ್ತು ಗ್ರಾಮೀಣ ಬದುಕಿಗೆ ಸಂಬಂದಿಸಿದಂತೆ 128 ಗಾದೆಗಳು, 4 ಜನಪದ ಕಥೆ ಮತ್ತು ಲಾವಣಿಗಳ ಪರಿಚಯವೂ ಆಗಿರುತ್ತದೆ.

ದನಗಳ ನಾಟೀವೈದ್ಯ, ಜೀವವೈವಿದ್ಯ, ಮತ್ತು ಪರಂಪರಾಗತ ಜ್ಞಾನ ಎಂಬ ಮೂರು ವಿಭಾಗಗಳನ್ನೊಳಗೊಂಡಿದ್ದ ಇದರ ಪ್ರಶಸ್ತಿ ವಿಜೇತರ ಮಾಹಿತಿ ಈ ಮುಂದಿನ ಪಟ್ಟಿಯಲ್ಲಿ ಕೊಡಲಾಗಿದೆ.

ವಿಭಾಗ 1 : ನಾಟೀವೈದ್ಯ

I) ಕೆ.ಮಧು, 10ನೇ ತರಗತಿ, ಕನಕಪುರ, ಗ್ರಾಮಾಂತರ ವಿವಿದೋದ್ದೇಶ ಪ್ರೌಢಶಾಲೆ, II) ವೈ.ಎಂ. ಕೃಷ್ಣ 10ನೇ ತರಗತಿ, ವಿಶ್ವೋದಯ ಪ್ರೌಢ ಶಾಲೆ, ಕೃಷ್ಣಯ್ಯನ ದೊಡ್ಡಿ, III) ಎನ್.ಆರ್. ಆಶಾರಾಣಿ ಶ್ರೀ ಮಹಾಲಿಂಗಸ್ವಾಮಿ ಪ್ರೌಢಶಾಲೆ, ಹುಣಸನಹಳ್ಳಿ <u>ಸಮಾಧಾನಕರ ಬಹುಮಾನಗಳು :</u> 1. ವಿ.ಸುಮ, 9ನೇ ತರಗತಿ, ಸರ್ಕಾರಿ ಪ್ರೌಢಶಾಲೆ, ಮರಳವಾಡಿ, 2. ವಿದ್ಯಾರಾಣಿ, 9ನೇ ತರಗತಿ, ಬಾಲಕಿಯರ ಸರ್ಕಾರಿ ಪ್ರೌಢಶಾಲೆ, ಕನಕಪುರ, 3. ಸಿ.ಎಂ. ಚಿಕ್ಕಣ್ಣ, 2ನೇ ತರಗತಿ, ಶಾರದಾ ಹೈಸ್ಕೂಲ್, ಕೋಡಿಹಳ್ಳಿ, 4. ನವೀನ್ ಕುಮಾರ್.ಜಿ, 10 ನೇ ತರಗತಿ, ಸ್ಟಿಂಜ್ ಮೈಕೇಲ್ ಆಂಗ್ಲ ಪ್ರೌಢ ಶಾಲೆ, ಕನಕಪುರ., 5. ಹೆಚ್.ಕೆ. ಮಂಜುನಾಥ, ಮುನ್ಸಿಪಲ್ ಹೈಸ್ಕೂಲ್, ಕನಕಪುರ, 6. ಹೆಚ್. ಇ. ಭಾಗ್ಯ, ಸರ್ಕಾರಿ ಪ್ರೌಢಶಾಲೆ, ಹೇರಿಂದ್ಯಾಪನಹಳ್ಳಿ, 7. ಮಮತ, 8ನೇ ತರಗತಿ, ಸರ್ಕಾರಿ, ಪ್ರೌಢಶಾಲೆ, ದೊಡ್ಡಮರಳವಾಡಿ.

ವಿಭಾಗ 2 : ಜೀವವೈವಿದ್ಯ

I) ಎಂ.ಸಿ. ನರಸಿಂಹಸ್ವಾಮಿ, 9ನೇ ತರಗತಿ, ಸರ್ಕಾರಿ ಪ್ರೌಢಶಾಲೆ, ಮರಳವಾಡಿ II) ಬಿ.ಎಸ್. ಆಶಾ, 9ನೇ ತರಗತಿ; ಸರ್ಕಾರಿ ಪದವಿಪೂರ್ವ ಕಾಲೇಜು, ದೊಡ್ಡಾಲಹಳ್ಳಿ III) ಎಸ್.ಸಿದ್ದರಾಜು, 10ನೇ ತರಗತಿ, ಸರ್ಕಾರಿ ಪ್ರೌಢಶಾಲೆ, ಮರಳವಾಡಿ. <u>ಸಮಾಧಾನಕರ ಬಹುಮಾನಗಳು :</u> 1. ವೈ.ಎಂ. ಕೃಷ್ಣ, 10ನೇ ತರಗತಿ, ವಿಶ್ವೋದಯ ಪ್ರೌಢಶಾಲೆ, ಕೃಷ್ಣಯ್ಯನದೊಡ್ಡಿ, 2. ಕೆ.ದೀಪು, 8ನೇ ತರಗತಿ, ಸರ್ಕಾರಿ ಪದವಿಪೂರ್ವ ಕಾಲೇಜು, ದೊಡ್ಡಾಲಹಳ್ಳಿ, 3. ಹೆಚ್.ಎಂ. ರವಿ, 9ನೇ ತರಗತಿ, ಸರ್ಕಾರಿ ಪ್ರೌಢಶಾಲೆ ಹೇರಿಂದ್ಯಾಪನಹಳ್ಳಿ, 4. ಸೋಮಶೇಖರ್, 9ನೇ ತರಗತಿ, ವಿ.ವಿ.ಟಿ. ಹೈಸ್ಕೂಲ್, ಕೋಡಿಹಳ್ಳಿ 5. ಎಂ.ಕೆ. ಸುಧಾ, 9ನೇ ತರಗತಿ, ಸರ್ಕಾರಿ ಪ್ರೌಢಶಾಲೆ, ಮರಳವಾಡಿ. 6. ಬಿ.ಕೆ. ಕುಮಾರ್, 10ನೇ ತರಗತಿ, ಸರ್ಕಾರಿ ಪ್ರೌಢಶಾಲೆ, ಮರಳವಾಡಿ. 7. ಕೆ.ಎಸ್. ಸೋಮಶೇಖರ್, 9ನೇ ತರಗತಿ, ಸರ್ಕಾರಿ ಪ್ರೌಢಶಾಲೆ, ಮರಳವಾಡಿ.

ವಿಭಾಗ 3: ಪರಂಪರಾಗತ ಜ್ಞಾನ

I) ಅಕ್ಕಮ್ಮ, 9ನೇ ತರಗತಿ, ಸರ್ಕಾರಿ ಪೌಢಶಾಲೆ, ಮರಳವಾಡಿ II) ಹೆಚ್. [illegible] ಶೋಭಾ, 10ನೇ ತರಗತಿ, ಸರ್ಕಾರಿ ಪೌಢಶಾಲೆ, ಹೇರಿಂದ್ಯಾಪನ[illegible] III) ಎಂ. ಮಂಗಳಗೌರಮ್ಮ, 9ನೇ ತರಗತಿ, ಸರ್ಕಾರಿ ಪೌಢಶಾಲೆ, ಮ[illegible] <u>ಸಮಾಧಾನಕರ ಬಹುಮಾನಗಳು</u> : 1. ಎಸ್. ಮಧುರ್ವೈವೀರ, 10[illegible] ಸರ್ಕಾರಿ ಪ್ರೌಢಶಾಲೆ, ಹೇರಿಂದ್ಯಾಪನಹಳ್ಳಿ 2. ಡಿ.ಎನ್. [illegible] ಸರ್ಕಾರಿ ಪದವಿ ಪೂರ್ವ ಕಾಲೇಜು, ದೊಡ್ಡಾಹಳ್ಳಿ, 3. [illegible] ತರಗತಿ, ಸರ್ಕಾರಿ ಪ್ರೌಢಶಾಲೆ, ಹೂಕುಂದ. 4. [illegible] ತರಗತಿ. ಗ್ರಾಮಸ್ವರಾಜ್ಯ ಪ್ರೌಢಶಾಲೆ, ಐನೋರ್ [illegible] 8ನೇ ತರಗತಿ, ಸರ್ಕಾರಿ ಪ್ರೌಢಶಾಲೆ, ಮರ[illegible] ಸರ್ಕಾರಿ ಪ್ರೌಢಶಾಲೆ, ಮರಳವಾಡಿ.

ಪರ್ಯಾಯ [illegible] :
ಸರ್ಕಾರಿ ಪ್ರೌ[illegible] ಮರಳವಾಡಿ.

ಹಿತ್ತಲಗಿಡ ಹಬ್ಬಿಸಿದ ನೆಂಟು

ಕಳೆದ ಬಾರಿಯ ಹಿತ್ತಲಗಿಡದ ಸಂಚಿಕೆಯಲ್ಲಿ ತಳಿಯ ಲೇಖನ ಓದಿದ ಟಿ. ನರಸೀಪುರದ ರೈತ ಶಂಕರ್‌ಗುರು ಅವರಿಗೆ ತಳಿಯಲ್ಲಿನ ಬೀಜಗಳ ಬಗ್ಗೆ ಆಸಕ್ತಿ ಮೂಡಿ ಕೃಷ್ಣಪ್ರಸಾದರಿಗೆ ಪತ್ರ ಬರೆದರು. ಅವರ ಆಸಕ್ತಿ ನೋಡಿ, ತಳಿಯಲ್ಲಿ ನಡೆಯಬೇಕಾಗಿದ್ದ ಬೀಜಮೇಳಕ್ಕೆ ಕೃಷ್ಣಪ್ರಸಾದರು ಶಂಕರ್‌ಗುರು ಅವರನ್ನು ಆಮಂತ್ರಿಸಿದರು. ಆಹ್ವಾನ ಮನ್ನಿಸಿ ಬಂದ ಶಂಕರ್‌ಗುರು ಬರೀ ಕೈಯಲ್ಲಿ ಬರಲಿಲ್ಲ. ಜೊತೆಗೆ ಅವರ ಬಳಿಯಿದ್ದ 'ಸೇಲಂ ಸಣ್ಣ' ಎಂಬ ನಾಟಿ ಭತ್ತದ ತಳಿಯನ್ನೂ ತಂದರು. ಈಗ, ತಳಿಯ ರೈತರಿಗೆ ಶಂಕರ್‌ಗುರು ತಂದ 'ಸೇಲಂ ಸಣ್ಣ' ಭತ್ತ ಬೆಳೆಯಲು ಆಸಕ್ತಿ ಮೂಡಿದೆ. ತಳಿ ಮತ್ತು ಟಿ. ನರಸೀಪುರದ ನಡುವೆ ಬೆಳೆದಂತಹ ಈ ಪರಿಚಯ, ಆಸಕ್ತಿ, ಕೂಡಿಕೊಳ್ಳುವಿಕೆ ಎಲ್ಲೆಡೆಯೂ ಬೆಳೆಯಬೇಕೆಂಬುದೇ ಹಿತ್ತಲಗಿಡದ ಅಭಿಲಾಷ.

ಬೀಜಮೇಳ - 99

ಗ್ರೀನ್ ಪ್ರತಿಷ್ಠಾನದ ವಾರ್ಷಿಕ ಹಬ್ಬ 'ಬೀಜ ಮೇಳ' ಮಾರ್ಚ್ 30 ರಂದು ತಳಿ ಗ್ರಾಮದ ಜೀವ ವೈವಿಧ್ಯ ಸಂರಕ್ಷಣಾ ಕೇಂದ್ರದಲ್ಲಿ ಎಂದಿನ ಸರಳತೆಯೊಂದಿಗೆ ನೆರವೇರಿತು. ಪ್ರತಿವರ್ಷನಡೆಯುವ ಈ ಹಬ್ಬಕ್ಕೆ ಈ ಬಾರಿ ಕೆನಡಾದ ಪತ್ರಕರ್ತ ಬ್ರೂಸ್ಸರ್‌ನೀನ್ ಭಾಗವಹಿಸಿ ತಳಿ ತಂತ್ರಜ್ಞಾನದ ಬಗ್ಗೆ ವಿವರಿಸಿದರು. ಸಂತೇಶಿವರದ ಸಾವಯವ ಕೃಷಿಕ ಬಸವರಾಜು ವಿಶೇಷ ಆಹ್ವಾನಿತರಾಗಿ ತಮ್ಮ ಅನುಭವಗಳನ್ನು ಇಲ್ಲಿನ ರೈತರು, ರೈತಮಹಿಳೆಯರೊಂದಿಗೆ ಹಂಚಿಕೊಂಡರು. ಶ್ರೀಮತಿ ಕಾಥೋರೀನ್ ಅಂತರಾಷ್ಟ್ರೀಯ ಮಟ್ಟದಲ್ಲಿ ರೈತರ ಬೀಜದ ಹಕ್ಕನ್ನು ಪ್ರತಿಪಾದಿಸಲು ಮೆಕ್ಸಿಕೋ ಮುಸುಕಿನ ಜೋಳವನ್ನು ಗ್ರೀನ್‌ಸಂಸ್ಥೆಗೆ ಕೊಡುಗೆ ಸಲ್ಲಿಸಿದರು. ಬೀಜಮೇಳ; ನೇಗಿಲುಪೂಜೆಯೊಂದಿಗೆ ಪ್ರಾರಂಭವಾಗಿ ಕಂಸಾಳೆ ನೃತ್ಯದೊಂದಿಗೆ ಕೊನೆಗೊಂಡಿತು.

ಪ್ರತಿಕ್ರಿಯೆ

ಮಾನ್ಯರೆ,

ನಮ್ಮ ತೋಟದ ಗದ್ದೆಗಳಲ್ಲಿ ಸಾಕಷ್ಟು ಒಂದೆಲಗ ಇದ್ದು, ಅದನ್ನು ಖರೀದಿಸುವವರ ಮಾಹಿತಿ ನಿಮಗೆ ತಿಳಿದಿದ್ದರೆ ವಿಳಾಸ ತಿಳಿಸಬೇಕಾಗಿ ವಿನಂತಿ. ಹಿತ್ತಲ ಗಿಡದ ಅಭಿಮಾನಿಯಾಗಿರುವೆ, ಚೆನ್ನಾಗಿ ಬರುತ್ತಿದೆ.

ಟಿ.ಎನ್. ಹೆಗ್ಡೆ, ಮಗೋಡಿ, ಹೊನ್ನಾವರ ತಾ||, ಉ.ಕ.

(ಬೆಂಗಳೂರಿನ ಜಯನಗರದ Central Ayurvedic Pharmacy ಮತ್ತು ತುಮಕೂರು ರಸ್ತೆಯಲ್ಲಿರುವ Himalayan Drug Company ಇವರನ್ನು ಸಂಪರ್ಕಿಸಬಹುದು. ಸಂ.)

ಮಾನ್ಯರೆ,

ನಾನು ಗುಲಬರ್ಗಾ ವಿಶ್ವವಿದ್ಯಾನಿಲಯದ ಸಸ್ಯಶಾಸ್ತ್ರ ವಿಭಾಗದಲ್ಲಿ ಸಂಶೋಧನೆ ಕೈಗೊಂಡಿದ್ದೇನೆ. ನಿಮ್ಮ ಹಿತ್ತಲ ಗಿಡ ಚಾತುರ್ಮಾಸಿಕ ಪತ್ರಿಕೆ ತುಂಬಾ ಸ್ವಾರಸ್ಯಕರವಾದ ಕೃಷಿ ಹಾಗೂ ಸಸ್ಯಗಳ ಬಗ್ಗೆ ಮೀಸಲಿಟ್ಟ ಪತ್ರಿಕೆಯಾಗಿದೆ. ನಾವು ಒಂದು ಲೇಖನವನ್ನು ನಿಮ್ಮ ಪತ್ರಿಕೆಗೆ ಕಳಿಸಿಕೊಡಬೇಕೆಂದು ಕೊಂಡಿದ್ದೇವೆ. ಅದರ ಪ್ರಕಟಣೆಗೆ ಬೇಕಾದ ಸೂಚನೆಗಳು ಕಳಿಸಿಕೊಟ್ಟರೆ ನಮ್ಮ ಲೇಖನವನ್ನು ಕಳಿಸಲು ಅನುಕೂಲವಾಗುತ್ತದೆ.

ಗುರುರಾಜ. ಸಿ.

ಸಂಶೋಧನಾ ವಿದ್ಯಾರ್ಥಿ, ಸಸ್ಯಶಾಸ್ತ್ರ ಅಧ್ಯಯ ವಿಭಾಗ ಗುಲಬರ್ಗಾ.

(ಧನ್ಯವಾದಗಳು, ಹಿತ್ತಲಗಿಡದ ಹಳೆ ಸಂಚಿಕೆಗಳನ್ನು ನೋಡಿ ಸೂಕ್ತವೆನಿಸಿದ ರೀತಿಯಲ್ಲಿ ಲೇಖನಗಳನ್ನು ಬರೆಯಲು ತಮಗೆ ಸ್ವಾಗತ. ಸಂ.)

Dear Mr. Prakash,

I have seen the Honey Bee Vol.6(3) page 9 which gives control of monkeys in coconut.In our village which is a Town Panchayat consisting of several hundred houses, we have problem with monkeys. Most of the houses have tile roof and in the backyards there are banana and jack fruit trees and monkeys eat the fruits and damage them; apart from this they also dislodge the tiles in the roof causing lost of inconvenience. Is there any proven method of getting rid of the monkeys.

M.V. Murugappan
Chennai - 1.

(Please refer Hittalagida Vol.1 No.1 for more information Ed.)

ಶ್ರೀಯುತರಿಗೆ ನಮಸ್ಕಾರಗಳು,

ನಾನೀಗ ಸುಮಾರು 8 ವರ್ಷಗಳಿಂದ ಸಾವಯವ ತೋಟಗಾರಿಕೆ ಮಾಡುತ್ತಿದ್ದೇನೆ. ಈ ವರ್ಷ ಮಾವಿನ ಫಸಲು ಚೆನ್ನಾಗಿದೆ. ನಾನು ನನ್ನ ಉತ್ಪನ್ನಕ್ಕೆ ಒಳ್ಳೆ ಬೆಲೆ ನಿರೀಕ್ಷಿಸಿರುವೆನು. ಸಾವಯವ ಉತ್ಪನ್ನಗಳನ್ನು ಕೊಳ್ಳುವವರ ವಿಳಾಸಗಳಿದ್ದರೆ ದಯಮಾಡಿ ತಿಳಿಸಿರಿ. ಅದೂ ಅಲ್ಲದೇ ಸಾವಯವ ಬೆಳೆಗಾರರ ಸಂಘಗಳಿದ್ದರೆ ತಿಳಿಸಿರಿ ಅಂಥ ಸಂಘ ಸಂಸ್ಥೆಗಳ ಸದಸ್ಯನಾಗುವೆ. ಮಾವುಗಳ ಪ್ಯಾಕಿಂಗ್ ಮಾಡುವ ಬಗ್ಗೆ ತರಬೇತಿಕೊಡುವವರಿದ್ದರೆ ತಿಳಿಸಿ ಅಥವಾ ಅಂಥ ಮಾಹಿತಿ ತಮ್ಮಲ್ಲಿ ಲಭ್ಯ ವಿದ್ದರೆ ತಿಳಿಸಿ. ಮಾವಿನ ಹಣ್ಣುಗಳನ್ನು ಕಾರ್ಡ್ ಬೋರ್ಡ್‌ನಲ್ಲಿ ಪ್ಯಾಕ್ ಮಾಡಿ ಬೇರೆಕಡೆ ರವಾನಿಸಬಹುದೆ ?. ನಾನು ಬೆಳೆಯುವ ಮಾವು, ಚಿಕ್ಕು, ತೆಂಗು, ಭತ್ತ ಹಾಗೂ ನೆಲಗಡಲೆ ಎಲ್ಲವೂ ಸಾವಯುವ ಪದ್ಧತಿಯಲ್ಲಿ. ನಾನೊಬ್ಬ ಸಾವಯುವ ಬೇಸಾಯಗಾರ ಎಂದು ಹೇಳಿಕೊಳ್ಳಲು ತುಂಬ ಹರ್ಷ ಎನಿಸುತ್ತದೆ. ಬೆಳೆ ಕಡಿಮೆ ಬಂದರೂ ಧೈರ್ಯಗೆಡದೆ ಅದನ್ನೇ ಮುಂದುವರೆಸಿದ್ದೇನೆ. ಧನ್ಯವಾದಗಳು

ಚನ್ನಮಲ್ಲಪ್ಪ ಪಾಟೀಲ, ಪ್ರಭುನಿವಾಸ, ಸುರಪುರ-24.

(ತಾವು ಪ್ಯಾಕೇಜಿಂಗ್ ಬಗ್ಗೆ ಐ.ಐ.ಹೆಚ್.ಆರ್. ಹೆಸರಘಟ್ಟ ಹಾಗೂ ಸಾವಯವ ಉತ್ಪನ್ನಗಳ ಬಗ್ಗೆ ಬೆಂಗಳೂರಿನ ಇಕ್ರಾ ಮತ್ತು ಗ್ರೀನ್ ಫೌಂಡೆಷನ್ ಸಂಸ್ಥೆಗಳನ್ನು ಸಂಪರ್ಕಿಸಬಹುದು. ಸಂ.)

ಪತ್ರಿಕೆ ನೊಂದಣಿ ಸಂಖ್ಯೆ 66842/96

ತೆರದ ಅಂಚೆ

ಚಂದಾ ವಿವರ

	ವಾರ್ಷಿಕ	ಅಜೀವ (ಹತ್ತು ವರ್ಷಗಳ ಕಾಲ)
ವಿದ್ಯಾರ್ಥಿಗಳು / ನಿರುದ್ಯೋಗಿಗಳು	40 ರೂ	400 ರೂ
ರೈತರು	50 ರೂ	500 ರೂ
ಇತರರು	60 ರೂ	600 ರೂ
ಸಂಸ್ಥೆಗಳು	350 ರೂ	2500 ರೂ
ಪೋಷಕರು	ರೂ. 5000/- ಮತ್ತು ಅಧಿಕ	

(ವಿ.ಸೂ. : ಹಿತ್ತಲಗಿಡದ ನೀತಿ ತತ್ವಗಳಿಗೆ ಹೊಂದಿಕೆಯಾಗುವ ಸಮಾನ ಮನಸ್ಕ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮಾತ್ರ)

ಚಂದಾ ಹಣವನ್ನು ಅಂಚೆ (M.O.) ಅಥವಾ ಡ್ರಾಫ್ಟ್ / ಚೆಕ್ ಮೂಲಕ ***"ಸಂಪಾದಕರು, ಹಿತ್ತಲಗಿಡ, ಬೆಂಗಳೂರು"*** ಈ ವಿಳಾಸಕ್ಕೆ ಕಳುಹಿಸಬೇಕು. ತಮ್ಮ ವಿಳಾಸ, ಪಿನ್‌ಕೋಡು ಮತ್ತು ವೃತ್ತಿಯನ್ನು ಸರಿಯಾಗಿ ಬರೆದು ಕಳುಹಿಸಬೇಕು. ಚಂದಾ ಹಣವನ್ನು ನವೀಕರಿಸುವಾಗ ಸ್ಪಷ್ಟವಾಗಿ ತಿಳಿಸತಕ್ಕದ್ದು.

ವಿಳಾಸ :
ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ
ಸಹ ಪ್ರಾಧ್ಯಾಪಕ ಮತ್ತು ಗೌರವ ಸಂಪಾದಕ 'ಹಿತ್ತಲಗಿಡ'
ಕೃಷಿ ಅರ್ಥಶಾಸ್ತ್ರ ವಿಭಾಗ,
ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ.
ಬೆಂಗಳೂರು - 560 065.
✆ : 3330153 Ext. 297 (O) 8560267 (R)
e-mail : hittalu@bgl.vsnl.net.in

ಗೆ, ------------------------------------

Printed by Sri.Nandish, Published by Smt. K. Meenakshi (Owner), printed at "Capitol Compu Graphics" No. 722, 'A' Sector, 16th Main, (Petrol Bunk road), New Town, Yelahanka, Bangalore - 560 064. and Published at No. 399, 14-B Cross New Town Yelhanka, Bangalore - 560 064. Edited by Dr. T.N. Prakash.